"VARTHA JANAPADA" Monthly - July 2019
"ವಾರ್ತಾ ಜನಪದ" ಮಾಸಿಕ – ಜುಲೈ 2019
Page No. -52
RNI No. KAR/KAN/2017/75029
Regd No.KA/BGGPO/2583/2018-20 Licensed to post without prepayment Licence No. PMG/BG/ WPP-365/2018-20
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



ವಿಶ್ವ ಜನಸಂಖ್ಯಾ ದಿನಾಚರಣೆ
ಜುಲೈ 11

downloaded from: www.kpscvaani.com

# ವಾರ್ತಾ ಜನಪದ

ವಾರ್ಷಿಕ ಚಂದಾ ರೂ.25/-
ಜುಲೈ 2019



1 ಕರ್ನಾಟಕದಲ್ಲಿ ಮೈತ್ರಿ ಸರ್ಕಾರಕ್ಕೆ ಒಂದು ವರ್ಷ



ಜೂನ್ 12 ಮತ್ತು 13 ರಂದು ವಿಧಾನಸೌಧದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಸಿಇಒ ಗಳೊಂದಿಗೆ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಸಭೆ ನಡೆಸಿದರು. ಉಪಮುಖ್ಯಮಂತ್ರಿಗಳಾದ ಡಾ.ಜಿ.ಪರಮೇಶ್ವರ್, ಸಚಿವರಾದ ಆರ್.ವಿ.ದೇಶಪಾಂಡೆ, ಕೃಷ್ಣ ಬೈರೇಗೌಡ, ಕೆ.ಜೆ. ಜಾರ್ಜ್, ಪ್ರಿಯಾಂಕ ಖರ್ಗೆ, ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯ್‌ಭಾಸ್ಕರ್ ಉಪಸ್ಥಿತರಿದ್ದರು.



ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಖಾತೆಯ ಜವಾಬ್ದಾರಿಯನ್ನು ಹೊಂದಿರುವ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಇಲಾಖೆಯ ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆ ನಡೆಸಿದರು. ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಟಿ.ಎಂ.ವಿಜಯಭಾಸ್ಕರ್, ಇಲಾಖೆಯ ಕಾರ್ಯದರ್ಶಿಗಳಾದ ಪಂಕಜ್‌ಕುಮಾರ್ ಪಾಂಡೆ, ನಿರ್ದೇಶಕರಾದ ಎನ್. ಭೃಂಗೀಶ್ ಅವರು ಸೇರಿದಂತೆ ಇಲಾಖೆಯ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

downloaded from: www.kpscvaani.com



ಜೂನ್ 14 ರಂದು ಬೆಂಗಳೂರಿನಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳು ಮತ್ತು ಆಂಗ್ಲ ಮಾಧ್ಯಮ ತರಗತಿಗಳಿಗೆ ಚಾಲನೆ ನೀಡಿದ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಮಕ್ಕಳಿಗೆ ಪುಸ್ತಕ ಮತ್ತು ಬ್ಯಾಗ್ ಅನ್ನು ವಿತರಿಸಿದರು. ಈ ಸಂದರ್ಭದಲ್ಲಿ ಉಪಮುಖ್ಯಮಂತ್ರಿಗಳಾದ ಡಾ.ಜಿ.ಪರಮೇಶ್ವರ್, ಸಚಿವರಾದ ಸಾ.ರಾ. ಮಹೇಶ್, ಶಾಸಕರಾದ ಆರ್. ರೋಶನ್ ಬೇಗ್, ವಿಧಾನ ಪರಿಷತ್ ಸದಸ್ಯರಾದ ಬಸವರಾಜ ಹೊರಟ್ಟಿ ಅವರು ಉಪಸ್ಥಿತರಿದ್ದರು.



ವಿಧಾನಸೌಧದ ಮುಂಭಾಗದಲ್ಲಿ ಜೂನ್ 7 ರಂದು ನಿರ್ಭಯ ಯೋಜನೆಯಡಿ ಮಹಿಳೆಯರ ಸುರಕ್ಷತೆಗಾಗಿ ಆರಂಭಿಸಲಾದ ಪಿಂಕ್ ಸಾರಥಿ ವಾಹನಗಳಿಗೆ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಚಾಲನೆ ನೀಡಿದರು. ಸಚಿವರಾದ ಡಿ.ಸಿ.ತಮ್ಮಣ್ಣ, ಸಿ.ಪುಟ್ಟರಂಗಶೆಟ್ಟಿ, ಬಿಎಂಟಿಸಿ ಸಂಸ್ಥೆಯ ಅಧ್ಯಕ್ಷರಾದ ಎನ್.ಎ.ಹ್ಯಾರಿಸ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.





05 ಮೈತ್ರಿ ಸರ್ಕಾರದ ಸಾಧನಾ ಪರ್ವ

08 ಬರಗಾಲಕ್ಕೊಂದು ಶಾಶ್ವತ ಪರಿಹಾರ ಮೋಡ ಬಿತ್ತನೆ
• ಎಚ್.ಆರ್. ಶ್ರೀಶ

12 ಗಿರೀಶ ಕಾರ್ನಾಡರ ಆತ್ಮವೃತ್ತಾಂತ ಮತ್ತು ಅವಲೋಕನ
• ಡಾ.ಸಂಗಮೇಶ ತಮ್ಮನಗೌಡ್ರ

17 ರಂಗಭೂಮಿ ಕಂಡ ಅದ್ಭುತ ನಾಟಕಕಾರ ಡಾ.ಕಾರ್ನಾಡ
• ರವಿ ಕುಲಕರ್ಣಿ

19 ಜಾಗತಿಕ ಮಟ್ಟದ ಅರಿವು ಮೂಡಿಸುವ ದಿನಾಚರಣೆ
• ಡಾ.ಎಸ್.ಎಂ.ತಿಮ್ಮಾಪೂರ

23 ನಾಡು ಕಟ್ಟಿದ ನಾಲ್ವಡಿ ಕೃಷ್ಣರಾಜ ಒಡೆಯರ್
• ಬನ್ನೂರು ಕೆ.ರಾಜು

26 ನಿರುದ್ಯೋಗಿಗಳ ಪಾಲಿನ ಚೈತನ್ಯ ರಥ: ಐರಾವತ
• ಶ್ರಾವಂತಿ

28 ದಾದರಹಳ್ಳಿಯ ಮಾದರಿ ಪಶು ಆಸ್ಪತ್ರೆ
• ಗಣಪತಿ ಹಾಸ್ಪುರ

30 ಸಾಂಕ್ರಾಮಿಕ ರೋಗತಡೆಗೆ ಮುಂಜಾಗ್ರತೆ
• ಶುಭಾ ಮಂಜುನಾಥ್

34 ಅರಬಿ ಸಮುದ್ರದಲ್ಲಿ ಕಂಗೊಳಿಸುವ ನೇತ್ರಾಣಿ ನಡುಗಡ್ಡೆ
• ಮಂಜುನಾಥ್ ನಾಯ್ಕ್

36 ಸಾಸಿರ ಕಣ್ಣಿನ ಚಲುವ
• ಪಿ.ಎಸ್.ಪರ್ವತಿ

38 ಗಾಂಧಿ ಕನಸಿನ ಮಾದರಿ ಗ್ರಾಮ
• ಸೋಮಲಿಂಗಪ್ಪ ಬೆಣ್ಣೆ ಗುಳದಳ್ಳಿ

40 ರೈತನ ಬದುಕಿಗೆ ವರವಾದ ಬಹುಬೆಳೆ ಕೃಷಿ ಪದ್ಧತಿ
• ಜಿ.ಚಂದ್ರಕಾಂತ

42 ಶ್ರೀಕೃಷ್ಣ ಪಾರಿಜಾತದ ಕಲಾ ಕುಸುಮ–ಯಲ್ಲವ್ವ
• ಲಲಿತಾ ಕೆ.ಹೊಸಪ್ಯಾಟಿ

45 ಹೊಸ ಗೇರು ಕೃಷಿ ವಿಧಾನದಿಂದ ಅಧಿಕ ಇಳುವರಿ
• ಎಸ್.ಎನ್.ಅಮೃತ ಮಲ್ಲ

47 ಶಿಕ್ಷಣತಜ್ಞ ಎಚ್. ಎನ್. ಗೆ ನೂರು ವರ್ಷ
• ಜಗನ್ನಾಥ ಪ್ರಕಾಶ್

49 ದ್ವಿಚಕ್ರ ವಾಹನ ಸವಾರರ ಜೀವರಕ್ಷಕ ಶಿರಸ್ತ್ರಾಣ
• ಡಾ.ಅನಿಲ್ ಕುಮಾರ್ ಪಿ.ಜಿ



ಪ್ರಧಾನ ಸಂಪಾದಕರು
ಎನ್. ಭೃಂಗೀಶ್
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಬಸವರಾಜ ಎಂ ಕಂಬಿ
ಜಂಟಿ ನಿರ್ದೇಶಕರು

ಸಹನಾ ಎಂ
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ಪ್ರಕಾಶಕರು
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
email : varthajanapada@yahoo.co.in
emagazine : karnatakajanapada.com | www.karnatakainformation.gov.in

ಮುದ್ರಕರು
ಅಭಿಮಾನಿ ಪಬ್ಲಿಕೇಷನ್ಸ್ ಪ್ರೈ. ಲಿ.
ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು – 10


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

downloaded from: www.kpscvaani.com

# ಓದುಗರಿಂದ...




ಜೂನ್ ತಿಂಗಳ ಮಾಸ ಪತ್ರಿಕೆಯ ಸಂಚಿಕೆಯಲ್ಲಿ ಚಾವಣಿ ನೀರಿನ ಸಂಗ್ರಹಣೆ ಲೇಖನ ಇಂದಿನ ಪರಿಸ್ಥಿತಿ ನೋಡಿದರೆ ನೀರು ಸಂಗ್ರಹಣೆ ಪ್ರತಿಯೊಬ್ಬ ಮಾನವನಿಗೆ ಅತ್ಯವಶ್ಯಕ ಎಂಬುದನ್ನು ಅರಿವು ಮೂಡಿಸುತ್ತದೆ. ಅದೇ ರೀತಿ ಬರ ನಿರ್ವಹಣೆಯ ಲೇಖನ ಕೃಷಿಕರಿಗೆ ಯೋಗ್ಯವಾಗಿದೆ. ಜೇನು ಅಭಿವೃದ್ಧಿಗೆ ಸಂಘ ಕಟ್ಟಿಕೊಂಡು ಸ್ವಾವಲಂಬಿ ಜೀವನ ಸಾಗಿಸಲು ಇಂದಿನ ಯುವ ಜನಾಂಗಕ್ಕೆ ಮಾದರಿಯಾಗಿದೆ. ಇಸ್ರೇಲ್ ತಂತ್ರಜ್ಞಾನ ಬಳಸಿ ಪುಷ್ಪ ಕೃಷಿಯಲ್ಲಿ ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿಗಳ ಲೇಖನವು ಮನಮುಟ್ಟುವಂತಿದೆ. ಕೃಷಿ ಹೊಂಡಗಳ ನಿರ್ಮಾಣ ರೈತರಿಗೆ ಕನ್ನಡಿಯಂತಿದೆ. ಗಡಿನಾಡಿನಾಚೆ ಕನ್ನಡದ ಛಾಪು ಮೂಡಿಸಿದ ಸರ್ ಸಿದ್ದಪ್ಪ ಕಂಬಳಿ ಲೇಖನ ಕರ್ನಾಟಕದ ಎಲ್ಲಾ ಕನ್ನಡಿಗರಿಗೂ ಮಾತೃ ಭಾಷೆಯ ವ್ಯಾಮೋಹ ಸದಾಕಾಲ ಪ್ರಜ್ವಲಿಸುವಂತಿದೆ. ಇಂತಹ ಉತ್ತಮ ಬರಹಗಳನ್ನು ಮುದ್ರಿಸಿರುವುದಕ್ಕೆ ಧನ್ಯವಾದಗಳು.

**– ಡಾ. ಬಿ. ಎ. ರಾಜಪ್ಪ ನಿಬಗೂರು,** ಜಗಲೂರು

---

ವಾರ್ತಾ ಜನಪದ ಪುಸ್ತಕದಲ್ಲಿ 'ಸರ್ವ ವ್ಯಾಪಿ ಪ್ಲಾಸ್ಟಿಕ್' ಎಂಬ ಶಿರೋನಾಮೆಯಲ್ಲಿ ಪ್ರಕಟವಾಗಿರುವ ಲೇಖನ ಅತ್ಯುತ್ತಮ ಲೇಖನವಾಗಿದೆ. ಪ್ಲಾಸ್ಟಿಕ್ ಜೀವಕ್ಕೆ ಹೇಗೆ ಮಾರಕ, ಹಾಗೂ ಅದು ಹೇಗೆ ವಿನಾಶಕಾರಿ ಎಂಬುದನ್ನು ಲೇಖನದಲ್ಲಿ ವಿವರವಾಗಿ ತಿಳಿಸಲಾಗಿದೆ. ಪ್ಲಾಸ್ಟಿಕ್‌ನಿಂದ ಮನುಷ್ಯ ಮಾತ್ರವಲ್ಲದೇ ಪ್ರಾಣಿ, ಪಕ್ಷಿಗಳು, ಜಲಚರಗಳು, ಇವೆಲ್ಲವುಗಳಿಗೆ ನೇರ ಪರಿಣಾಮ ಬೀರಿ ಜೀವ ಸಂತತಿಯೇ ವಿನಾಶವಾಗುವ ಪರಿಸ್ಥಿತಿ ಆಗುತ್ತದೆ ಎಂಬುದನ್ನು ವಿಸ್ತೃತವಾಗಿ ತಳಿಸಲಾಗಿದೆ.

ಪ್ಲಾಸ್ಟಿಕ್ ಹೇಗೆ ಪರಿಸರವನ್ನು ಅಸಮತೋಲನ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದನ್ನು ಲೇಖನದಲ್ಲಿ ತಿಳಿಸುವ ಮೂಲಕ ಜನತೆಗೆ ಉತ್ತಮ ರೀತಿಯಲ್ಲಿ ಪರಿಸರ ಜಾಗೃತಿಯನ್ನು ಮೂಡಿಸಲಾಗಿದೆ. ಪ್ಲಾಸ್ಟಿಕ್ ತ್ಯಾಜ್ಯ ಮಣ್ಣಿನಲ್ಲಿ ಸೇರುವುದರಿಂದ ನಾವು ಕುಡಿಯುವ ಅಂತರ್ಜಲಕ್ಕೆ ವಿಷ ಸೇರುವ ಸಂಭವವಿದೆ ಎಂಬುದನ್ನು ತಿಳಿದು ಆಘಾತವಾಯಿತು.

**–ವಿಲ್ಸನ್ ಅಲೆಕ್ಸಾಂಡರ್,** ಮುಂಡಗೋಡ

---

"ಮಳೆ ನೀರು ಸಂಗ್ರಹಿಸಿ ನೀರಿನ ಸಮಸ್ಯೆ ನಿವಾರಿಸಿ" ಮುಖಪುಟದಡಿಯಲ್ಲಿ ಮೂಡಿ ಬಂದಿರುವ ನಮ್ಮ ವಾರ್ತಾ ಜನಪದ ಜೂನ್ ಮಾಸಿಕವು ಓದುಗರಲ್ಲಿ ಜಾಗೃತಿ ಮೂಡಿಸುವ ಲೇಖನಗಳನ್ನು ಹೊಂದಿದ್ದು, ಜನಪದ ಮಾಸಿಕದಿಂದ ಮಾಸಿಕಕ್ಕೆ ನೂತನ, ವಿನೂತನ ಮಾಹಿತಿ ಲಭಿಸುತ್ತಿದೆ. ನಾವಂತೂ ಜನಪದದ ಹಾದಿ ನೋಡುತ್ತಾ ಕೂಡುತ್ತೇವೆ. "ಯೋಗದಿಂದ ಸುಯೋಗ", "ಬಿಂಕದ ಬನವಾಸಿ". "ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ ಸರ್ಕಾರಿ ಶಾಲೆಗಳ ಸಾಧನೆ", ಲೇಖನಗಳು ಚನ್ನಾಗಿವೆ. ಒಟ್ಟಿನಲ್ಲಿ ಈ ಪತ್ರಿಕೆಯಿಂದ ನಮಗೆ ಹೆಚ್ಚಿನ ಮಾಹಿತಿಯು ಲಭಿಸುತ್ತಿದೆ. ಇಂತಹ ಉಪಯುಕ್ತ ಮಾಹಿತಿ ಇರುವ ಲೇಖನಗಳನ್ನು ಪ್ರಕಟಿಸುತ್ತಿರುವ ವಾರ್ತಾ ಜನಪದ ಬಳಗದವರಿಗೆ ಧನ್ಯವಾದಗಳು.

**– ಯುವ ರಾಜ. ಸಿ. ಚೋಳಕೆ, ವಿಜಯಪುರ**

---

ಪ್ರಸ್ತುತ ಕಾಲಕ್ಕೆ ಸಂಬಂಧಿಸಿದಂತಹ ಲೇಖನಗಳನ್ನು ಜೂನ್ ಸಂಚಿಕೆಯಲ್ಲಿ ಪ್ರಕಟಿಸಿರುವುದನ್ನು ಓದಿದ ನನಗೆ ತುಂಬಾ ಸಂತೋಷವಾಯಿತು. ಇಂದಿನ ದಿನಗಳಲ್ಲಿ ನೀರಿನ ಕೊರತೆಯನ್ನು ಕಾಣುತ್ತಿದ್ದೇವೆ. ಮಳೆಗಾಲದಲ್ಲಿ ಸಿಗುವ ನೀರನ್ನು ನಾವು ಸರಿಯಾಗಿ ಹಿಡಿದಿಟ್ಟುಕೊಳ್ಳುತ್ತಿಲ್ಲ. ಈ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಪ್ರಕಟಿಸಿರುವ ಲೇಖನಗಳು ಚನ್ನಾಗಿವೆ. ಮಳೆ ನೀರು ಕೊಯ್ಲು ವಿಧಾನವನ್ನು ಮನೆಗೆ ಅಳವಡಿಕೊಳ್ಳುವ ಮೂಲಕ ನೀರನ್ನು ಶೇಖರಿಸಿಕೊಂಡು ಮನೆ ಬಳಕೆಗೆ ಉಪಯೋಗಿಸಬಹುದು. ಇಲ್ಲವೇ ಭೂಮಿಗೆ ಇಂಗಿಸಬಹುದು.

ಹೀಗೆ ಮಾಡುವುದರಿಂದ ನೀರು ಸಂಗ್ರಹಣೆ ಕಾರ್ಯದಲ್ಲಿ ಅಳಿಲು ಸೇವೆ ಸಲ್ಲಿಸಿದಂತ್ತಾಗುತ್ತದೆ. ಅದೇ ರೀತಿ 'ಜಲಪಾತ್ರೆಗಳ ಸಂರಕ್ಷಣೆ' ಲೇಖನದಲ್ಲಿ ಮಳೆಗಾಲ ಬರುವ ಮುಂಚಿತವಾಗಿ ಸಾಕಷ್ಟು ನೀರನ್ನು ಜಲಪಾತ್ರೆಗಳಲ್ಲಿ ಹಿಡಿದಿಟ್ಟು ಕೊಳ್ಳಲು ಯಾವ ಯಾವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆಂಬ ಮಾಹಿತಿಯನ್ನು ವಿಸ್ತಾರವಾಗಿ ಲೇಖಕರು ನೀಡಿದ್ದಾರೆ.

**–ಆರ್.ಕೆ. ರಾಜೀವ್ ಕುಮಾರ್, ಕೆ.ಆರ್.ಪೇಟೆ**

---

'ಮಳೆನೀರು ಸಂಗ್ರಹಿಸಲು ಸಿದ್ಧರಾಗೋಣ' ಲೇಖನವು ಸರ್ವರಿಗೂ ನೀರು ಸಂಗ್ರಹಣೆ ಹೇಗೆ ಮಾಡಬೇಕೆಂಬುದನ್ನು ಮನವರಿಕೆ ಮಾಡಿಕೊಟ್ಟಿದೆ. ಈಗಲೂ ನಮ್ಮ ಮನೆಯಲ್ಲಿ ತಗಡಿನಿಂದ ಮಳೆ ನೀರು ಸಂಗ್ರಹಿಸುವ ಪದ್ಧತಿ ಜಾರಿಯಲ್ಲಿದೆ. 'ಬರ ನಿರ್ವಹಣೆಗೆ ವರುಣ ಮಿತ್ರ ಸಹಾಯವಾಣಿ' ಲೇಖನವು ರೈತರು ವ್ಯವಸಾಯ ಮಾಡುವುದಕ್ಕೆ ಸಿದ್ಧತೆ ಮಾಡಿಕೊಳ್ಳಲು ಸದಾ ಉಪಯುಕ್ತವಾಗಲಿದೆ. ಅದೇ ರೀತಿ 'ಯೋಗದಿಂದ ಸುಯೋಗ' ಲೇಖನವು ಆರೋಗ್ಯ ಕಾಪಾಡಿಕೊಳ್ಳಲು ಉತ್ತಮ ಕಾಣಿಕೆಯಾಗಿದೆ. ಹೀಗೆ ಜೂನ್ ಸಂಚಿಕೆಯಲ್ಲಿ ಪ್ರಕಟವಾಗಿರುವ ಲೇಖನಗಳಲ್ಲಿ ಯಾವುದನ್ನು ವರ್ಣಿಸುವುದು. ಎಲ್ಲವೂ ಜನೋಪಯೋಗಿ ಬೆಲ್ಲದಚ್ಚಿನಂತಿದೆ.

**–ಬಿ.ಎನ್.ಸೊಲ್ಲಾಪುರೆ, ಕಮಲಾನಗರ, ಬೀದರ್**

---

'ವಾರ್ತಾ ಜನಪದ' ಮಾಸಿಕ ಈಗ **www.kanaja.in**ನಲ್ಲಿ ಲಭ್ಯ

ವಾರ್ಷಿಕ ಚಂದಾ ರೂ.25/–

'ವಾರ್ತಾ ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ "The Director, Department of Information & Public Relations" ಹೆಸರಿನಲ್ಲಿ ಡಿ.ಡಿ. ಮುಖಾಂತರವೇ ಕಳುಹಿಸಬೇಕು. ಮನಿ ಆರ್ಡರ್ ಮೂಲಕ ಹಣವನ್ನು ಸ್ವೀಕರಿಸುವುದಿಲ್ಲ.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

downloaded from: www.kpscvaani.com



# ಮೈತ್ರಿ ಸರ್ಕಾರದ ಸಾಧನಾ ಪರ್ವ

ರಾಜ್ಯ ಸರ್ಕಾರ ಜನಪರವಾಗಿ, ದೂರದೃಷ್ಟಿಯಿನ್ನಿರಿಸಿ ಮಂಡಿಸಿರುವ ಆಯವ್ಯಯದ ಅನ್ವಯ ಅಭಿವೃದ್ಧಿ ಕಾರ್ಯಕ್ರಮಗಳು ಅನುಷ್ಠಾನಗೊಳ್ಳುತ್ತಿವೆ. ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಉಭಯ ಮಿತ್ರ ಪಕ್ಷಗಳ ಅಭಿವೃದ್ಧಿಯ ಆಶಯಗಳನ್ನು ಈಡೇರಿಸುವ, ಕನಸುಗಳನ್ನು ಸಾಕಾರ ಮಾಡುವ ನಿರ್ಧಾರದಲ್ಲಿ ಎರಡು ಆಯವ್ಯಯಗಳನ್ನು ಮಂಡಿಸಲಾಗಿದೆ.

ಈ ಎರಡೂ ಆಯವ್ಯಯಗಳಲ್ಲಿ ಘೋಷಿಸಲಾಗಿದ್ದ ಹೊಸ ಯೋಜನೆಗಳಲ್ಲಿ ಶೇ. 90 ರಷ್ಟಕ್ಕೆ ಸರ್ಕಾರಿ ಆದೇಶ ಹೊರಡಿಸಿ ಕಾರ್ಯೋನ್ಮುಖವಾಗಿದೆ. ಇದು ಯೋಜನೆ ಮತ್ತು ಅನುಷ್ಠಾನದ ಕುರಿತು ಮೈತ್ರಿ ಸರ್ಕಾರಕ್ಕಿರುವ ಬದ್ಧತೆಯನ್ನು ಸಮರ್ಥವಾಗಿ ಬಿಂಬಿಸಿದೆ.

ಕೃಷಿ–ಶಿಕ್ಷಣ–ಆರೋಗ್ಯವನ್ನು ಆದ್ಯತಾ ವಲಯಗಳಾಗಿ ಪರಿಗಣಿಸಿ, ಮೂಲಭೂತ ಸೌಲಭ್ಯಗಳನ್ನು ಬಲಪಡಿಸುತ್ತಾ ಕರ್ನಾಟಕದ ಸಮಗ್ರ ಪ್ರಗತಿ ಸರ್ಕಾರದ ಉದ್ದೇಶ. ರಾಜ್ಯದ ವಿತ್ತೀಯ ಹೊಣೆಗಾರಿಕೆ ಕಾಯ್ದೆಯ ಚೌಕಟ್ಟಿನಲ್ಲಿಯೇ ಜನಪರ ಹಾಗೂ ಜನಪ್ರಿಯ ಯೋಜನೆಗಳ ಅನುಷ್ಠಾನದ ಮೂಲಕ ಜನರ ಆಶೋತ್ತರಗಳಿಗೆ ಸ್ಪಂದಿಸುವ ಮೂಲಕ ಅಭಿವೃದ್ಧಿಯತ್ತ ನಿಖರ, ದೃಢ ಹೆಜ್ಜೆ ಹಾಕುತ್ತಿದೆ.



ಉತ್ತಮ ಆಡಳಿತ ವ್ಯವಸ್ಥೆಯ ಹೆಗ್ಗುರುತುಗಳೆಂದರೆ, ಸರ್ಕಾರ ಮತ್ತು ಜನತೆಯ ಕ್ರಿಯಾಶೀಲ ಸಹಭಾಗಿತ್ವ, ಮಹತ್ವದ ತೀರ್ಮಾನಗಳಲ್ಲಿ ಸಹಮತ, ಆಡಳಿತ ಯಂತ್ರದ ಉತ್ತರದಾಯಿತ್ವ ಮತ್ತು ಪಾರದರ್ಶಕತೆ, ಎಲ್ಲ ಜನರ ಆಶೋತ್ತರಗಳಿಗೆ ಸ್ಪಂದನೆ, ಎಲ್ಲ ಸ್ತರದ ಜನರಿಗೆ ಸಾಮಾಜಿಕ ನ್ಯಾಯ ಮತ್ತು ಸಮಾಜದ ಎಲ್ಲರನ್ನೊಳಗೊಂಡಂತಹ ಆಡಳಿತ. ಮುಖ್ಯಮಂತ್ರಿ ಹೆಚ್. ಡಿ. ಕುಮಾರಸ್ವಾಮಿ ಹಾಗೂ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಅವರ ನೇತೃತ್ವದಲ್ಲಿ ಮೈತ್ರಿ ಸರ್ಕಾರ ಈ ಎಲ್ಲ ಅಂಶಗಳನ್ನು ಮೈಗೂಡಿಸಿಕೊಂಡು ಮುನ್ನಡೆಯುತ್ತಿದೆ.

ಕೃಷಿ ಕ್ಷೇತ್ರವನ್ನು ಬಲಪಡಿಸುವ ಉದ್ದೇಶದಿಂದ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ರೈತರ ಸಾಲಮನ್ನಾ ಕಾರ್ಯಕ್ರಮವನ್ನು ಘೋಷಿಸಿ ಜಾರಿಗೆ ತರಲಾಗಿದೆ. ಈ ಹತ್ತು ತಿಂಗಳಲ್ಲಿ ಅತ್ಯಂತ ಪಾರದರ್ಶಕವಾಗಿ ಮತ್ತು ಇಡೀ ರಾಷ್ಟ್ರಕ್ಕೆ ಮಾದರಿಯಾಗುವ ರೀತಿಯಲ್ಲಿ ಈ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ. ಸಾಲಮನ್ನಾ ಕಾರ್ಯಕ್ರಮದ ಬಗ್ಗೆ ಹಲವು ಸ್ತರಗಳಲ್ಲಿ ಚರ್ಚೆಯಾದರೂ, ಈ ಯೋಜನೆ ಪಾರದರ್ಶಕವಾಗಿ ಅನುಷ್ಠಾನಗೊಳಿಸುತ್ತಿರುವ ರೀತಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. 23 ಲಕ್ಷ ರೈತರು ಇದರ ಲಾಭ ಪಡೆದಿದ್ದಾರೆ. 4 ವರ್ಷಗಳಲ್ಲಿ ಪೂರ್ಣಗೊಳಿಸುವುದಾಗಿ ಆಯವ್ಯಯದಲ್ಲಿ ಘೋಷಿಸಿದರೂ ಒಂದೇ ವರ್ಷದಲ್ಲಿ ಪೂರ್ಣಗೊಳಿಸಿದ ಹೆಗ್ಗಳಿಕೆ ಮೈತ್ರಿ ಸರ್ಕಾರದ್ದು. ಕೃಷಿ ಪದ್ಧತಿ ಹಾಗೂ ಮಾರುಕಟ್ಟೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸರ್ಕಾರ ರೈತರ ಅನುಕೂಲಕ್ಕಾಗಿ ಹಲವು ಕಾರ್ಯಕ್ರಮಗಳನ್ನು ರೂಪಿಸಿದೆ. ಬೆಳೆ ಸಂಸ್ಕರಣೆ, ಸಂಗ್ರಹಣೆ, ಮಾರುಕಟ್ಟೆ ನೆರವು ಎಲ್ಲ ಅಂಶಗಳಿಗೂ ಸರ್ಕಾರ ಕಳೆದ ಎರಡು ಆಯವ್ಯಯದಲ್ಲಿ ಆದ್ಯತೆ ನೀಡಿದೆ. ಆ ಮೂಲಕ ರೈತರ ಆತ್ಮವಿಶ್ವಾಸ ಮೂಡಿಸುವ ಪ್ರಯತ್ನ ನಡೆಸಿದೆ.

ಶಿಕ್ಷಣ ಕ್ಷೇತ್ರಕ್ಕೆ ಆದ್ಯತೆ ನೀಡಿ ಸರ್ಕಾರಿ ಶಿಕ್ಷಣ ಸಂಸ್ಥೆಗಳ ಮೂಲಭೂತ ಸೌಲಭ್ಯಗಳ ಸುಧಾರಣೆ ಮತ್ತು ಇತರ ಕಾರ್ಯಗಳಿಗಾಗಿ 1200 ಕೋಟಿ ರೂ.ಗಳ ಅನುದಾನವನ್ನು ನೀಡಲಾಗಿದೆ.

ಪರಿವರ್ತನೆ ಎಂಬುದು ಜಗದ ನಿಯಮ. ಜಾಗತೀಕರಣ, ವೈಜ್ಞಾನಿಕ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ಆಗುತ್ತಿರುವ ಕ್ಷಿಪ್ರಗತಿಯು ಶಿಕ್ಷಣದ ಅವಕಾಶಗಳನ್ನು ಹಾಗೂ ನಿರ್ಮಿಸುತ್ತಿರುವ ಉದ್ಯೋಗಾವಕಾಶಗಳನ್ನು ತುಂಬಾ ಪ್ರಭಾವಿಸುತ್ತಿದೆ. ಈ ನಿಟ್ಟಿನಲ್ಲಿ ಆಲೋಚಿಸಿದ ಕರ್ನಾಟಕ ಸರ್ಕಾರವು ರಾಜ್ಯದಲ್ಲಿನ 1,000 ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ವಿಭಾಗಗಳನ್ನು ತೆರೆಯಲು ಅವಕಾಶವನ್ನು ಕಲ್ಪಿಸಿದೆ. ಶಾಲಾ ಶಿಕ್ಷಣದ ಗುಣಮಟ್ಟ ಸುಧಾರಣೆಯ ಭಾಗವಾಗಿ ನೂತನವಾಗಿ ಅನುಷ್ಠಾನಕ್ಕೆ ತರಲಾದ ರಾಜ್ಯದ **'276–ಕರ್ನಾಟಕ ಪಬ್ಲಿಕ್ ಶಾಲೆ'**ಗಳಲ್ಲಿ ಈ ವರ್ಷದಿಂದಲೇ ಜಾರಿಗೆ ಬರುವಂತೆ **'ಪೂರ್ವ ಪ್ರಾಥಮಿಕ ಶಿಕ್ಷಣ'** ನೀಡಲು ಅವಕಾಶ ಕಲ್ಪಿಸಲಾಗಿದೆ. ಶಾಲಾ ಸಂಪರ್ಕ ಸೇತು ಯೋಜನೆಯಡಿ ಮಲೆನಾಡು, ಕರಾವಳಿ ಜಿಲ್ಲೆಗಳಲ್ಲಿ 1318 ಸೇತುವೆಗಳ ನಿರ್ಮಾಣವನ್ನು 187.04 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಆರೋಗ್ಯಕ್ಷೇತ್ರದ ಬಲಪಡಿಸುವಿಕೆಗೆ ಗಾಂಧೀಜೀಯವರ **"ನಿಜವಾದ ಐಶ್ವರ್ಯವೆಂದರೆ, ಚಿನ್ನ–ಬೆಳ್ಳಿಯ ಚೂರುಗಳಲ್ಲ ಬದಲಿಗೆ ನಿರಂತರ ಆರೋಗ್ಯ"** ಎನ್ನುವ ಚಿಂತನೆ, ನಮಗೆ ಆದರ್ಶ. ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕದಂತಹ ಯೋಜನೆಗಳನ್ನು ಮಾಡಿ ಸರ್ವರಿಗೂ ಆರೋಗ್ಯ ಕಲ್ಪಿಸಲು ಯೋಜನೆ ರೂಪಿಸಲಾಗಿದೆ.

ಸಾಮಾಜಿಕ ನ್ಯಾಯ ಮತ್ತು ಒಟ್ಟಾರೆ ಅಭಿವೃದ್ಧಿ ಸರ್ಕಾರದ ಗುರಿ. ಪ್ರಸಕ್ತ ವರ್ಷದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವಿಶೇಷ ಘಟಕ ಯೋಜನೆಯಡಿ 30,445 ಕೋಟಿ ರೂ.ಗಳ ಅನುದಾನ ನೀಡಲಾಗಿದೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿಗೆ 470 ಕೋಟಿ ರೂ.ಗಳ ಅನುದಾನ ನೀಡಲಾಗಿದೆ. ಸರ್ಕಾರದ 'ಮಾತೃಶ್ರೀ' ಯೋಜನೆ ಮತ್ತು ಅಂಗನವಾಡಿ ಕಾರ್ಯಕರ್ತೆಯರ ಭತ್ಯೆಯನ್ನು ಹೆಚ್ಚಿಸುವ ಯೋಜನೆಗೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ನೀರಾವರಿ ಯೋಜನೆಗಳಿಗೆ ಒಟ್ಟಾರೆ 17,212 ಕೋಟಿ ರೂ.ಗಳನ್ನು ನೀಡಲಾಗಿದೆ. ಜಲಾಶಯಗಳಲ್ಲಿ ತುಂಬಿರುವ ಹೂಳು ತೆಗೆದು ಅವುಗಳ ಸಂಗ್ರಹ ಸಾಮರ್ಥ್ಯವನ್ನು ಹೆಚ್ಚಿಸುವುದನ್ನೂ ಒಳಗೊಂಡಂತೆ ನೀರಾವರಿ ಯೋಜನೆಗಳಿಗೆ ಕಾಯಕಲ್ಪ ಮಾಡಲಾಗಿದೆ.

ಶ್ರಮಿಕ ವ್ಯಾಪಾರಿ ವರ್ಗ ಸಾಲದ ಶೂಲದಿಂದ ಹೊರಬಂದು, ಆರ್ಥಿಕ ಸ್ವಾತಂತ್ರ್ಯದ ಬದುಕು ಕಟ್ಟಿಕೊಳ್ಳಲು ನಮ್ಮ ರಾಜ್ಯದಲ್ಲಿರುವ ಬೀದಿ ಬದಿ ಸಣ್ಣ ವ್ಯಾಪಾರಿಗಳಿಗೆ ಅನುಕೂಲವಾಗುವಂತೆ ಶೂನ್ಯ ಬಡ್ಡಿದರದಲ್ಲಿ 10,000/– ಗಳವರೆಗೆ ಸಾಲ ನೀಡುವ **'ಬಡವರ ಬಂಧು'** ಯೋಜನೆ ಜಾರಿಗೆ ತರಲಾಗಿದೆ.

ರಾಜ್ಯದ ರಸ್ತೆ ಅಭಿವೃದ್ಧಿಗೆಂದು ಲೋಕೋಪಯೋಗಿ ಇಲಾಖೆಗೆ ಕಳೆದ ಎರಡು ಆಯವ್ಯಯದಲ್ಲಿ 21 ಸಾವಿರ ಕೋಟಿ.ರೂ.ಗಳನ್ನು ಒದಗಿಸಲಾಗಿದೆ.

ಮೂಲಭೂತ ಸೌಲಭ್ಯಗಳನ್ನು ಸೃಷ್ಟಿಸುವುದು ಸುಲಭದ ಕೆಲಸವಲ್ಲ. ಅದಕ್ಕೆ ಸಿದ್ಧಯೋಜನೆ ಬೇಕು. ಯೋಜನೆ ದೂರದೃಷ್ಟಿಯುಳ್ಳದ್ದಾಗಿರಬೇಕು. ಯೋಜನೆಯ ಅನುಷ್ಠಾನಕ್ಕೆ ಸಮಯ ಮಿತಿಯಿರಬೇಕು. ಇದನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರು ಹಾಗೂ ಎರಡನೇ ಸ್ತರದ ನಗರಗಳನ್ನೂ ಸೇರಿದಂತೆ, ಸಮಗ್ರವಾಗಿ ರಾಜ್ಯದಲ್ಲಿ ಮೂಲಭೂತ ಸೌಕರ್ಯಗಳನ್ನು ಬಲಪಡಿಸುವ, ಸೃಷ್ಟಿಸುವ ಕೆಲಸ ಮಾಡಲಾಗಿದೆ.





**ಕೃಷಿ ಕ್ಷೇತ್ರವನ್ನು ಬಲಪಡಿಸುವ ಉದ್ದೇಶದಿಂದ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ರೈತರ ಸಾಲಮನ್ನಾ ಕಾರ್ಯಕ್ರಮವನ್ನು ಘೋಷಿಸಿ ಜಾರಿಗೆ ತರಲಾಗಿದೆ. ಈ ಹತ್ತು ತಿಂಗಳಲ್ಲಿ ಅತ್ಯಂತ ಪಾರದರ್ಶಕವಾಗಿ ಮತ್ತು ಇಡೀ ರಾಷ್ಟ್ರಕ್ಕೆ ಮಾದರಿಯಾಗುವ ರೀತಿಯಲ್ಲಿ ಈ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ.**

ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಿರುವ ಸರ್ಕಾರ ತಯಾರಿಕಾ ವಲಯಗಳಿಗೆ ಉತ್ತೇಜನ ನೀಡುವ ಹಾಗೂ 2ನೆ ಹಂತದ ನಗರಗಳಲ್ಲಿ ಕೈಗಾರಿಕಾ ಸ್ಥಾಪನೆಗೆ ಪ್ರೋತ್ಸಾಹ ನೀಡುವ **'ಕಾಂಪೀಟ್ ವಿತ್ ಚೈನಾ'** ಯೋಜನೆಯನ್ನು ರೂಪಿಸಲಾಗಿದೆ. 9 ಜಿಲ್ಲೆಗಳಲ್ಲಿ 9 ಕೈಗಾರಿಕಾ ಕ್ಲಸ್ಟರ್ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ 35 ಸಾವಿರ ಉದ್ಯೋಗ ಸೃಷ್ಟಿಸುವ ಜವಳಿ ಮತ್ತು ಆಟಿಕೆಗಳ ತಯಾರಿಕಾ ಸಂಸ್ಥೆಗಳು ಸರ್ಕಾರದೊಂದಿಗೆ ಒಪ್ಪಂದ ಸಹಿ ಮಾಡಿವೆ.

ಅಭಿವೃದ್ಧಿ ಸಾಧನೆಗೆ ಅಚಲವಾದ ಆತ್ಮವಿಶ್ವಾಸ, ಸಾಧಿಸಬೇಕಾದ ಗುರಿಯ ಕುರಿತು ಸಂಶಯಕ್ಕೆ ಆಸ್ಪದವಿಲ್ಲದ ಸಮರ್ಪಣಾ ಮನೋಭಾವ ಮತ್ತು ಗುರಿಯತ್ತ ಪ್ರಾಮಾಣಿಕವಾಗಿ ಸಾಗುವ ಛಲದೊಂದಿಗೆ ಸರ್ಕಾರ ಮುನ್ನಡೆಯುತ್ತಿದೆ.


ಮೈತ್ರಿ ಸರ್ಕಾರವು ನಾಡು ಕಟ್ಟುವ ಕಾಯಕದಡಿ ರಾಜ್ಯದ ಸಮಗ್ರ ಅಭಿವೃದ್ಧಿ–ಮೂಲಭೂತ ಸೌಲಭ್ಯಗಳ ನಿರ್ಮಾಣ ಮಾಡುವ ಜೊತೆಗೆ ಜನರ ವೈಯಕ್ತಿಕ ಸಮಸ್ಯೆಗಳಿಗೆ ಸ್ಪಂದಿಸಿ ಅವರ ಬದುಕು ಹಸನುಗೊಳಿಸುವ ಮೂಲಕ ಅಭಿವೃದ್ಧಿಯ ಧ್ಯೇಯದೊಂದಿಗೆ ಮುನ್ನಡೆಯುತ್ತಿದೆ.



downloaded from: www.kpscvaani.com

# ಬರಗಾಲಕ್ಕೊಂದು ಶಾಶ್ವತ ಪರಿಹಾರ

# ಮೋಡ ಬಿತ್ತನೆ



**ವಿಮಾನದಲ್ಲಿ ಹೋಗಿ ಮೋಡಗಳ ಮೇಲೆ ತೇವಾಂಶವನ್ನು ಮಳೆ ಹನಿಯಾಗಿ ಪರಿವರ್ತಿಸಲು ಕ್ಯಾಲ್ಸಿಯಂಕ್ಲೋರೈಡ್ ಮತ್ತು ಸಿಲ್ವರ್ ಅಯೋಡೈಡ್ ಸಿಂಪಡಿಸುತ್ತಾರೆ. ಇವುಗಳು ಪರಿಸರ ಸ್ನೇಹಿಯಾಗಿರುವುದರಿಂದ ಯಾವ ತೊಂದರೆಗಳು ಆಗುವುದಿಲ್ಲ. ಮೋಡಗಳಲ್ಲಿರುವ 5 ರಿಂದ 10 ಮೈಕ್ರಾನ್ ಗಾತ್ರದ ಮಳೆ ಹನಿಗಳು ಗಾಳಿಗೆ ಚೆದುರಿ ಹೋಗದಂತೆ 100 ಮೈಕ್ರಾನಿಗೆ ಹೆಚ್ಚಿಸಿ ಮಳೆ ಸುರಿಯುವಂತೆ ಪ್ರೇರೇಪಿಸುವುದೇ ಈ ತಂತ್ರಜ್ಞಾನ.**



ಎಚ್.ಆರ್. ಶ್ರೀಶ

**1983-84ರಲ್ಲಿ ತಮಿಳುನಾಡು ಸರ್ಕಾರವು ದೇಶದಲ್ಲಿಯೇ ಮೊದಲ ಬಾರಿಗೆ ಮೋಡಬಿತ್ತನೆಗೆ ಕೈಹಾಕಿತ್ತು. ನಂತರ ಕರ್ನಾಟಕ ಮತ್ತು ಮಹಾರಾಷ್ಟ್ರ ಸರ್ಕಾರಗಳು ಕೂಡ ಮೋಡಬಿತ್ತನೆ ಪ್ರಯೋಗಗಳನ್ನು ಕಾರ್ಯರೂಪಕ್ಕೆ ತಂದವು.**

**ಜಾ**ಗತಿಕ ತಾಪಮಾನದಲ್ಲಿ ವೈಪರೀತ್ಯಗಳು ಅಧಿಕಗೊಂಡಂತೆ ನಿಯಮಿತವಾಗಿದ್ದ ಮಳೆ ಈಗ ಮನಬಂದಂತೆ ಬರುತ್ತದೆ. ಇದಕ್ಕೆ ಕಾರಣಗಳು ಹಲವಾರು. ವಿಜ್ಞಾನಿಗಳ ಅಭಿಪ್ರಾಯದಂತೆ ಪ್ರಪಂಚದಲ್ಲಿ ಎಲ್ಲ ದೇಶಗಳು ತಮ್ಮ ಬೆಳವಣಿಗೆಗಾಗಿ ಕೈಗಾರಿಕೆ ಮತ್ತು ಕೃಷಿರಂಗವನ್ನು ಅವಲಂಬಿಸಿದೆ. ಇದರಿಂದ ಇಂಗಾಲ ಆಮ್ಲವನ್ನು ವಾತಾವರಣಕ್ಕೆ ಬಿಡುವ ಪ್ರಕ್ರಿಯೆ ಅಧಿಕಗೊಂಡಿದೆ. ಭೂಮಿಯ ಉಷ್ಣಾಂಶ ಏರುಮುಖದಲ್ಲಿದೆ. ಇದರಿಂದ ಪ್ರಕೃತಿಯಲ್ಲಿ ಹಲವು ಬದಲಾವಣೆಗಳು ಕಂಡುಬರುತ್ತಿವೆ. ಭೂಮಿಯ ಸುತ್ತ ಅನಿಲಗಳ ಒಂದು ವಲಯ ಆವರಿಸಿದೆ. ಇದರ ಮೂಲಕವೇ ಸೂರ್ಯನ ಕಿರಣಗಳು ಹಾದು ಬರಬೇಕು. ಹಾಗೆ ಬರುವುದರಿಂದ ಕಿರಣದ ಶಾಖ ಕಡಿಮೆಯಾಗುತ್ತದೆ.

ಈ ಅನಿಲದ ವಲಯದಲ್ಲಿ ಈಗ ಒಂದು ರಂಧ್ರ ಏರ್ಪಟ್ಟಿದ್ದು ಅದರ ಮೂಲಕ ಸೂರ್ಯನ ಕಿರಣಗಳು ನೇರವಾಗಿ ಭೂಮಿಯ ಮೇಲೆ ಬೀಳುತ್ತಿವೆ. ಈ ರಂಧ್ರ ಅಧಿಕಗೊಳ್ಳದಂತೆ ಮಾಡಬೇಕು ಎಂಬುದೇ ವಿಜ್ಞಾನಿಗಳ ಸಾಹಸ. ಅದಕ್ಕೆ ಅವರು ಸೂಚಿಸುತ್ತಿರುವ ಹಲವು ಕ್ರಮಗಳಲ್ಲಿ ಇಂಗಾಲ ಆಮ್ಲ ಬಿಡುಗಡೆಯನ್ನು ಕಡಿಮೆ ಮಾಡುವುದು. ಕೈಗಾರಿಕೆ– ಮೋಟಾರು ವಾಹನಗಳ ಬಳಕೆ ಮತ್ತಿತರ ಚಟುವಟಿಕೆಗಳಿಗೆ ಕಲ್ಲಿದ್ದಲು ಪೆಟ್ರೋಲಿಯಂ ಉತ್ಪನ್ನಗಳನ್ನು ಬಳಸುವುದು ಮೊದಲಿನಿಂದ ನಡೆದು ಬಂದ ಪದ್ಧತಿ. ಇದನ್ನು ಕಡಿಮೆ ಮಾಡಿ ಪೌರ ಮತು ಪವನ ಶಕ್ತಿಯ ಮೂಲಕ ವಿದ್ಯುತ್ ಉತ್ಪಾದಿಸಿ ಸಮತೋಲನವನ್ನು ಕಾಯ್ದು ಕೊಳ್ಳಬೇಕು. ಜಾಗತಿಕ ತಾಪಮಾನಗಳಲ್ಲಿ ಶೇ 2 ರಷ್ಟು ಕಡಿಮೆ ಮಾಡಲು ಅಮೆರಿಕವೂ ಸೇರಿದಂತೆ ಎಲ್ಲ ದೇಶಗಳು ಪ್ಯಾರಿಸ್ ಶೃಂಗ ಸಭೆಯಲ್ಲಿ ಒಪ್ಪಿಕೊಂಡಿದ್ದವು. ಆದರೆ ಅಮೆರಿಕಾ ಹಿಂದಕ್ಕೆ ಸರಿದಿದ್ದರಿಂದ ತಾಪಮಾನವನ್ನು ಕಡಿಮೆ ಮಾಡುವ ಕ್ರಿಯಾಯೋಜನೆಗೆ ಹಿನ್ನೆಡೆ ಉಂಟಾಗಿರುವುದಂತೂ ನಿಜ.

ಕೈಗಾರಿಕೆಯ ರೀತಿಯಲ್ಲೇ ಕೃಷಿ ರಂಗದಲ್ಲಿ ಮಹತ್ತರ ಬದಲಾವಣೆ ಬಂದಿದೆ. ಹಿಂದೆ ಬೇಸಿಗೆ ಕಾಲದಲ್ಲಿ ಎಲ್ಲ ಜಲಮೂಲಗಳಲ್ಲಿ ನೀರಿನ ಅಂಶ ಆವಿಯಾಗಿ ಆಕಾಶವನ್ನು ಸೇರಿ ಮೋಡಗಳಾಗಿ ಮಳೆ ತರಿಸುತ್ತಿದ್ದವು. ಇದೊಂದು ನೈಸರ್ಗಿಕ ಸರಪಳಿಯಾಗಿತ್ತು. ಮಳೆ ಬರುವುದು, ನದಿ ಕೆರೆ ಬಾವಿಗಳು ತುಂಬುವುದು, ಅವುಗಳಿಂದ ರೈತರು ನೀರಾವರಿ ಕೈಗೊಂಡು ವಿವಿಧ ಬೆಳೆಗಳನ್ನು ಪಡೆದು ಬೇಸಿಗೆಯಲ್ಲಿ ಭೂಮಿಯಿಂದ ನೀರು ಆವಿಯಾಗಿ ಮೋಡಗಳ ರೂಪದಲ್ಲಿ ಮತ್ತೆ ಭೂಮಿಗೆ ಬರುತ್ತಿದ್ದವು. ಸಾಮಾನ್ಯವಾಗಿ ಮಳೆ ಪಶ್ಚಿಮ ಘಟ್ಟದ ಕಾಡುಗಳಲ್ಲಿ ಹೆಚ್ಚಾಗಿ ಬರುತ್ತಿದ್ದವು. ನಮ್ಮಲ್ಲಿ ಮುಂಗಾರು– ಹಿಂಗಾರು ಎಂಬ ಎರಡು ಕಾಲ. ಜೂನ್‌ನಲ್ಲಿ ಮುಂಗಾರು, ಅದಾದ ನಂತರ ಹಿಂಗಾರು. ನವೆಂಬರ್, ಡಿಸಂಬರ್, ಜನವರಿಯಲ್ಲಿ ಚಳಿಗಾಲ. ಅನಂತರ ಬೇಸಿಗೆಕಾಲ. ಅದು ಮುಕ್ತಾಯಗೊಳ್ಳುತ್ತಿದ್ದಂತೆ ಮತ್ತೆ ಮಳೆಗಾಲ ಬರುತ್ತಿತ್ತು. ಈ ರೀತಿ ಋತುಗಳು ನಿಯಮಿತವಾಗಿ ಬದಲಾಗುತ್ತಿದ್ದವು.

ನಮ್ಮ ಹಿರಿಯರು ಈ ಎಲ್ಲ ಕಾಲಕ್ಕೂ ನಿಗದಿತ ಸಮಯವನ್ನು ಗುರುತು ಮಾಡಿ ಅವುಗಳಿಗೆ ಪ್ರತ್ಯೇಕ ಹೆಸರನ್ನು ಕೊಟ್ಟಿದ್ದರು. ಮಳೆಗಾಲವನ್ನು ಅನುಸರಿಸಿ ನಮ್ಮ ಆಹಾರ ಪ್ರಕೃತಿ ಜೀವನ ಎಲ್ಲಕ್ಕೂ ರೂಢಿಗತವಾಗಿ ನಡೆದುಕೊಂಡು ಬಂದಿದ್ದವು. ಹಳ್ಳಿಯ ಜನ ಮೋಡದ ದಿಕ್ಕನ್ನೇ ನೋಡಿ ಮಳೆಗಾಲವನ್ನು





downloaded from: www.kpscvaani.com


ಗುರುತಿಸುತ್ತಿದ್ದರು. ಪಶ್ಚಿಮಘಟ್ಟಗಳು ಸಂರಕ್ಷಣೆಗೊಂಡಿದ್ದವು. ಕೇರಳದ ಮೂಲಕ ಬರುತ್ತಿದ್ದ ಮಳೆ ಪಶ್ಚಿಮಘಟ್ಟಗಳಲ್ಲಿ ಸತತವಾಗಿ ಸುರಿಯುತ್ತಿದ್ದರಿಂದ ಕಾವೇರಿ, ನೇತ್ರಾವತಿ, ತುಂಗಾಭದ್ರ ಸೇರಿದಂತೆ ಎಲ್ಲ ನದಿಗಳು ತುಂಬಿ ಹರಿಯುತ್ತಿದ್ದವು. ಮುಂಗಾರು ಆರಂಭಗೊಳ್ಳುತ್ತಿದ್ದಂತೆ ರೈತರು ಕೃಷಿಯಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಮಳೆ ಆಧಾರಿತ ಮತ್ತು ನೀರಾವರಿ ಆಧಾರಿತ ಕೃಷಿ ಪದ್ಧತಿ ಶತಮಾನಗಳಿಂದಲೂ ಬೆಳೆದು ಬಂದಿದ್ದವು. ನಿಸರ್ಗದಲ್ಲಿ ಸಮತೋಲನವನ್ನು ಕಾಯ್ದುಕೊಳ್ಳಲು ಅನುಕೂಲವಾಗುವಂತೆ ಆಗಿನ ಕಾಲದಲ್ಲಿ ಜನಸಂಖ್ಯೆ ಕಡಿಮೆ ಇತ್ತು. ಅರಣ್ಯ ಪ್ರದೇಶಗಳಲ್ಲಿ ಆದಿವಾಸಿಗಳನ್ನು ಹೊರತುಪಡಿಸಿ ಬೇರೆಯವರು ಇರುತ್ತಿರಲಿಲ್ಲ. ಹೀಗಾಗಿ ಅರಣ್ಯ ಪ್ರದೇಶ ಹಲವಾರು ವರ್ಷ ಉಳಿದುಕೊಂಡು ಬಂದಿತ್ತು.

ಜನಸಂಖ್ಯೆ ಅಧಿಕಗೊಂಡಂತೆ ಕಾಡನ್ನು ನಾಶಮಾಡುವುದು, ನದಿಗಳ ದುರ್ಬಳಕೆ, ಕೃಷಿಯಲ್ಲಿ ಹೆಚ್ಚಿನ ಫಸಲನ್ನು ಪಡೆಯಲು ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಬಳಸುವುದು ಅಧಿಕಗೊಂಡಿತು. ಹಸಿರು ಕ್ರಾಂತಿಯ ಹೆಸರಿನಲ್ಲಿ ಕೃಷಿಯನ್ನು ಕೈಗಾರಿಕೆಯಾಗಿ ಪರಿವರ್ತಿಸಲಾಯಿತು. ಹಸಿದ ಹೊಟ್ಟೆಗಳ ಸಂಖ್ಯೆ ಅಧಿಕಗೊಂಡಿದ್ದರಿಂದ ಆಹಾರ ಉತ್ಪಾದನೆಯನ್ನು ಹೆಚ್ಚಿಸುವುದು ಅನಿವಾರ್ಯವಾಯಿತು. ಗಾಂಧೀಜಿ ಹೇಳಿದಂತೆ ನಿಸರ್ಗ ನಮ್ಮ ಅಗತ್ಯಗಳನ್ನು ಪೂರೈಸಬಹುದು, ಆದರೆ ನಮ್ಮ ದುರಾಸೆಗಳನ್ನೆಲ್ಲ ಪೂರೈಸಲಾರವು. ಇದನ್ನು ನಾವು ಮೊದಲಿನಿಂದ ಹೇಳುತ್ತಾ ಬಂದಿದ್ದೇವೆಯೇ ಹೊರತು ನಿಸರ್ಗವನ್ನು ಕಾಪಾಡುವ ಕೆಲಸವನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಹಿಮಾಲಯದ ಮಂಜುಗಡ್ಡೆಗಳು ವರ್ಷದಲ್ಲಿ ಕೆಲಕಾಲ ಮಾತ್ರ ಕರಗುತ್ತಿದ್ದವು. ಇವುಗಳು ಭೂಮಿಯ ಉಷ್ಣಾಂಶದ ಮೇಲೆ ಅವಲಂಬಿಸಿದೆ. ಇಲ್ಲಿ ಉಷ್ಣಾಂಶ ಒಂದೆರಡು ಡಿಗ್ರಿ ವ್ಯತ್ಯಾಸವಾದರೂ ಹಿಮಪಾತ, ಮೇಘಸ್ಫೋಟ, ಪ್ರವಾಹ ಸೇರಿದಂತೆ ಎಲ್ಲವೂ ಭೀಕರ ಸ್ವರೂಪ ಪಡೆಯುತ್ತದೆ. ಇದೆಲ್ಲ ನಿಸರ್ಗದ ವೈಪರೀತ್ಯಗಳು. ಇದಕ್ಕೆ ಇಡೀ ಮನುಕುಲವೇ ಕಾರಣ. ಹಾಗಾಗಿ ಇದನ್ನು ನಾವುಗಳು ಸರಿಪಡಿಸಲೇಬೇಕು. ಜನರಲ್ಲಿ ಜಾಗೃತಿ ಮೂಡಬೇಕು. ದಟ್ಟ ಅರಣ್ಯದಲ್ಲಿ ಮರಗಳನ್ನು ಕಡಿಯುವ ಮನುಷ್ಯನಿಂದ ಹಿಡಿದು ಬೃಹತ್ ನಗರಗಳಲ್ಲಿ ಪೆಟ್ರೋಲ್ ಡೀಸಲ್ ಬಳಸುವ ಪ್ರತಿಷ್ಠಿತ ನಾಗರೀಕರವರೆಗೆ ಎಲ್ಲರೂ ಅಪರಾಧಿಗಳು ಎಂಬುದರಲ್ಲಿ ಸಂದೇಹವಿಲ್ಲ.

ಅರಣ್ಯದಲ್ಲಿ ಮರ ಕಡಿಯುವ ವ್ಯಕ್ತಿ ತನ್ನ ಜೀವನಕ್ಕಾಗಿ ಆ ಕೆಲಸ ಕೈಗೊಂಡರೆ ನಗರಗಳಲ್ಲಿ ಶ್ರೀಮಂತ ಐಷಾರಾಮಿ ಜೀವನಕ್ಕಾಗಿ ಹವಾನಿಯಂತ್ರಣ ಸವಲತ್ತು ಮತ್ತು ಐಷಾರಾಮಿ ಕಾರುಗಳನ್ನು ಬಳಸುತ್ತಾರೆ. ಈ ಎರಡೂ ಕೃತ್ಯಗಳೂ ನಿಸರ್ಗಕ್ಕೆ ಮಾಡುತ್ತಿರುವ ಅಪಚಾರಗಳು. ಮನುಷ್ಯ ತನ್ನ ಸುಖಕ್ಕಾಗಿ ಎಲ್ಲವನ್ನೂ ಬಾಚಿಕೊಳ್ಳಬಹುದು. ಆದರೆ ಆಕಾಶದಲ್ಲಿ ಗೋಡೆ ಕಟ್ಟಲು ಬರುವುದಿಲ್ಲ. ಜಗತ್ತಿನ ಯಾವುದೇ ಮೂಲೆಯಲ್ಲಿ ನಿಸರ್ಗದ ಅತಿ ಬಳಕೆ ಅಧಿಕಗೊಂಡಾಗ ಅದರ ದುಷ್ಪರಿಣಾಮ ಪ್ರಪಂಚದ ಬೇರೆ ದಿಕ್ಕುಗಳಲ್ಲೂ ಆಗುವುದು ಸಹಜ. ಅಮೇರಿಕಾದಲ್ಲಿ ಕೈಗಾರಿಕೆಗಳು ಪರಿಣಾಮ ಬೀರುತ್ತದೆ ಎಂಬುದನ್ನು ಇನ್ನೂ ಅರಿತಿಲ್ಲ. ಎಂಬುದೇ ಸೋಜಿಗದ ಸಂಗತಿ. 'ವಸುದೈವ ಕುಟುಂಬಕಂ' ಬರೀ ಮಾತುಗಳಲ್ಲಿ ಉಳಿಯಬಾರದು. ಭೂಮಿಯ ಧಾರಣಾಶಕ್ತಿಗೂ ಮಿತಿ ಇದೆ. ಅದನ್ನು ಮೀರಿದಾಗ ಧರೆ ಹತ್ತಿ ಉರಿಯುತ್ತದೆ ಎಂಬ ಮಾತು ಬೇಗ ನಾವು ನೋಡುವ ಕಾಲ ಆಗಲಿದೆ. ಒಂದು ಕಡೆ ಸುನಾಮಿ, ಮತ್ತೊಂದು ಕಡೆ ಕುಡಿಯುವ ನೀರಿಗೂ ತೀವ್ರ ಬರಗಾಲ, ಇವುಗಳ ನಡುವೆ ಜನಸಾಮಾನ್ಯರ ಬದುಕು ದುರ್ಬರವಾಗುತ್ತಿದೆ. ಇದಕ್ಕೆಲ್ಲಾ ಪರಿಹಾರ ಎಂದರೆ ನಿಸರ್ಗದಲ್ಲಿ ಸಮತೋಲನ ಕಾಯ್ದುಕೊಂಡು ಹೋಗುವ ಮೂಲಕ ಮನುಕುಲವನ್ನು ಉಳಿಸಬೇಕಿದೆ. ಆರ್ಥಿಕ ಬೆಳವಣಿಗೆ ಒಂದೇ ಜೀವನದ ಪರಮ ಗುರಿಯಾಗಬಾರದು. ನೈಸರ್ಗಿಕ ವಿಕೋಪದಿಂದ ಇಂದು ಹರಿಯುತ್ತಿರುವ ನದಿಗಳು ನಾಳೆ ಬತ್ತಿಹೋಗಬಹುದು. ಇದಕ್ಕಿದ್ದಂತೆ ಬರುವ ಪ್ರವಾಹ ಜನಸಾಮಾನ್ಯರು ಗಳಿಸಿದ್ದ ಎಲ್ಲ ಸಂಪತ್ತನ್ನು ಒಂದೇ ಕ್ಷಣದಲ್ಲಿ ಕೊಚ್ಚಿ ಹಾಕಿ ಸಮುದ್ರ ಸೇರುವಂತೆ ಮಾಡಬಹುದು. ಇಂತಹ ಪರಿಸ್ಥಿತಿಯಲ್ಲಿ ಮಳೆ ಸಕಾಲಕ್ಕೆ ಬರುವಂತೆ ಮಾಡಲು ಮನುಷ್ಯ ಹಲವು ಕ್ರಮಗಳನ್ನು ಕೈಗೊಂಡಿದ್ದಾರೆ. ಅದರಲ್ಲಿ ಮೋಡಬಿತ್ತನೆಯೂ ಒಂದು.

**ಮೋಡ ಬಿತ್ತನೆ ಎಂದರೇನು?**

ಸಾಮಾನ್ಯವಾಗಿ ಮಳೆ ವ್ಯಾಪಕವಾಗಿ ಬಂದಾಗ ಎಲ್ಲರಿಗೂ ಅನುಕೂಲವಾಗುತ್ತದೆ. ಆದರೆ ನೈಸರ್ಗಿಕ ವೈಪರೀತ್ಯದಿಂದ ಮಳೆ ಎಲ್ಲ ಕಡೆ ವ್ಯಾಪಿಸಿ ಬರುತ್ತಿಲ್ಲ. ಕೆಲವು ಕಡೆ ಭಾರಿ ಮಳೆ ಬಂದರೆ, ಮತ್ತೆ ಕೆಲವು ಕಡೆ ಬರೀ ಮೋಡ ಚಲಿಸುವುದನ್ನು ನೋಡಬೇಕಾಗುತ್ತದೆ. ಈ ಪರಿಸ್ಥಿತಿಯನ್ನು ಅಧ್ಯಯನ ಮಾಡಿದ




**ಕಳೆದ 19 ವರ್ಷಗಳಿಂದ ಕರ್ನಾಟಕದಲ್ಲಿ ಮಳೆಯ ಕೊರತೆ ಇದ್ದೇ ಇದೆ. ಮಳೆಯ ಲಭ್ಯತೆ ಶೇ 65ಕ್ಕೆ ಇಳಿದಿದೆ. ಮಲೆನಾಡಿನಲ್ಲೇ ಕುಡಿಯುವ ನೀರಿನ ಅಭಾವ ಕಂಡು ಬಂದಿದೆ, ರಾಜ್ಯದ 6000 ಗ್ರಾಮ ಪಂಚಾಯಿತಿಗಳಲ್ಲಿ ಟೆಲಿ ಮೆಟ್ರಿಕ್ ಮಳೆ ಮಾಪನ ಕೇಂದ್ರಗಳನ್ನು ಅಳವಡಿಸಲಾಗಿದೆ. 2017ರಲ್ಲಿ ಮೋಡ ಬಿತ್ತನೆ ಕೆಲಸ ನಡೆಯಿತು. ಇದರಿಂದ 5 ಟಿ.ಎಮ್.ಸಿ ವರೆಗೆ ನೀರಿನ ಹೆಚ್ಚಳ ಪಡೆಯಲು ಸಾಧ್ಯವಾಯಿತು. ಶೇ 27ರಷ್ಟು ಮಳೆ ಪ್ರಮಾಣ ಅಧಿಕಗೊಂಡಿತು. ಈ ವರ್ಷ ಕೂಡ ಮಳೆಯ ಪ್ರಮಾಣ ಕಡಿಮೆಯಾಗುವ ದೃಷ್ಟಿಯಿಂದ ಈ ವರ್ಷವೂ ಮೋಡ ಬಿತ್ತನೆ ಕೆಲಸ ಕೈಗೊಳ್ಳಲು ಸರ್ಕಾರ ತೀರ್ಮಾನಿಸಿದೆ.**



downloaded from: www.kpscvaani.com



ವಿಜ್ಞಾನಿಗಳು ಮೋಡ ಬಿತ್ತನೆ ವಿಧಾನವನ್ನು ಬಳಕೆಗೆ ತಂದಿದ್ದಾರೆ.

ವಿಮಾನದಲ್ಲಿ ಹೋಗಿ ಮೋಡಗಳ ಮೇಲೆ ತೇವಾಂಶವನ್ನು ಮಳೆ ಹನಿಯಾಗಿ ಪರಿವರ್ತಿಸಲು ಕ್ಯಾಲ್ಸಿಯಂಕ್ಲೋರೈಡ್ ಮತ್ತು ಸಿಲ್ವರ್ ಅಯೋಡೈಡ್ ಸಿಂಪಡಿಸುತ್ತಾರೆ. ಇವುಗಳು ಪರಿಸರ ಸ್ನೇಹಿಯಾಗಿರುವುದರಿಂದ ಯಾವ ತೊಂದರೆಗಳು ಆಗುವುದಿಲ್ಲ. ಮೋಡಗಳಲ್ಲಿರುವ 5 ರಿಂದ 10 ಮೈಕ್ರಾನ್ ಗಾತ್ರದ ಮಳೆ ಹನಿಗಳು ಗಾಳಿಗೆ ಚೆದುರಿ ಹೋಗದಂತೆ 100 ಮೈಕ್ರಾನಿಗೆ ಹೆಚ್ಚಿಸಿ ಮಳೆ ಸುರಿಯುವಂತೆ ಪ್ರೇರೇಪಿಸುವುದೇ ಈ ತಂತ್ರಜ್ಞಾನ. ಸಾಮಾನ್ಯವಾಗಿ ಮುಂಗಾರು ಸಮಯದಲ್ಲಿ ದಟ್ಟವಾದ ಮೋಡಗಳು ಕಂಡುಬರುತ್ತದೆ. ಈ ಮೋಡಗಳ ಸಂಚಲನವನ್ನು ರೆಡಾರ್ ಮೂಲಕ ಗುರುತಿಸಲಾಗುವುದು. ಅನಂತರ ಈ ಪ್ರದೇಶಗಳನ್ನು ಆದ್ಯತಾವಲಯಗಳಾಗಿ ವಿಂಗಡಿಸಿ ಮೋಡಗಳಿರುವ ಸ್ಥಳವನ್ನು ವಿಮಾನದ ಪೈಲೆಟ್‌ಗೆ ನೀಡಲಾಗುವುದು. ಕ್ಯಾಲ್ಸಿಯಂಪ್ಲೋರೈಡ್ ಎಂದರೆ ಸುಣ್ಣದ ಕಲ್ಲುಗಳು, ಇದರಿಂದ ಮನುಷ್ಯನ ದೇಹಕ್ಕೆ ಹಾನಿ ಆಗುವುದಿಲ್ಲ. ಅದಕ್ಕೆ ಬಳಸುವ ಉಪ್ಪು ಕೂಡ ಇದೇ ಗುಂಪಿಗೆ ಸೇರಿದೆ. ಮತ್ತೊಂದು ರಾಸಾಯನಿಕ ಸಿಲ್ವರ್ ಅಯೋಡೈಡ್ ಅನ್ನು ಪೈಂಟ್ ತಯಾರಿಕೆ ಮತ್ತು ಕುಡಿಯುವ ನೀರಿನ ಶುದ್ಧೀಕರಣಕ್ಕೆ ಬಳಸಲಾಗುವುದು. ಮೋಡ ಬಿತ್ತನೆಗೆ ಬಳಸುವ 30 ಗ್ರಾಂ ಸಿಡಿಮದ್ದಿನಲ್ಲಿ ಶೇ 20 ರಷ್ಟು ಸಿಲ್ವರ್ ಅಯೋಡೈಡ್ ಲವಣ ಇರುತ್ತದೆ. ಕಳೆದ 60 ವರ್ಷಗಳಿಂದ ಇವುಗಳ ಬಳಕೆಯಿಂದ ಪ್ರತಿಕೂಲ ಹವಾಮಾನಕ್ಕೆ ಕಾರಣವಾಗಿದೆಯೇ ಎಂದು ಅಧ್ಯಯನ ಮಾಡಲಾಗಿದೆ. ಇದುವರೆಗೆ ಮೋಡ ಬಿತ್ತನೆಯಿಂದ ಯಾವ ಜೀವಕ್ಕೂ ಅಪಾಯ ಸಂಭವಿಸಿಲ್ಲ.

**ಕರ್ನಾಟಕದಲ್ಲಿ ಪ್ರಯೋಗ**

1983–84ರಲ್ಲಿ ತಮಿಳುನಾಡು ಸರ್ಕಾರವು ದೇಶದಲ್ಲಿಯೇ ಮೊದಲ ಬಾರಿಗೆ ಮೋಡಬಿತ್ತನೆಗೆ ಕೈಹಾಕಿತ್ತು. ನಂತರ ಕರ್ನಾಟಕ ಮತ್ತು ಮಹಾರಾಷ್ಟ್ರ ಸರ್ಕಾರಗಳು ಕೂಡ ಮೋಡಬಿತ್ತನೆ ಪ್ರಯೋಗಗಳನ್ನು ಕಾರ್ಯರೂಪಕ್ಕೆ ತಂದವು. 2003ರಲ್ಲಿ ಕರ್ನಾಟಕ ಸರ್ಕಾರವು ಇದಕ್ಕಾಗಿ 'ಪ್ರಾಜೆಕ್ಟ್ ವರುಣ' ಎಂಬ ಕಾರ್ಯಕ್ರಮಕ್ಕೆ ಚಾಲನೆ ನೀಡಿತು. 2008 ಮತ್ತು 2012 ರಲ್ಲಿ ಗದಗ, ಹಾವೇರಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಗುಣಮಟ್ಟದ ರಡಾರ್ ಹಾಗೂ ವಿಮಾನದೊಂದಿಗೆ ಮೋಡಬಿತ್ತನೆ ಮಾಡಲಾಯಿತು. ಆದರೆ ಅದರಲ್ಲಿ ನಿರೀಕ್ಷಿತ ಯಶಸ್ಸು ದೊರಕಿರಲಿಲ್ಲ. ಆದರೆ 2017 ರಲ್ಲಿ 'ವರ್ಷಧಾರೆ' ಯೋಜನೆಯಡೆ ನಡೆದ ಮೋಡಬಿತ್ತನೆ ನಿರೀಕ್ಷಿತ ಯಶಸ್ಸು ಕಂಡಿತು. ಅಲ್ಲದೆ ಈ ಕಾರ್ಯಾಚರಣೆ ಇಡೀ ವಿಶ್ವಕ್ಕೆ ಮಾದರಿಯಾಯಿತು.

ಕಳೆದ 19 ವರ್ಷಗಳಿಂದ ಕರ್ನಾಟಕದಲ್ಲಿ ಮಳೆಯ ಕೊರತೆ ಇದ್ದೇ ಇದೆ. ಮಳೆಯ ಲಭ್ಯತೆ ಶೇ 65ಕ್ಕೆ ಇಳಿದಿದೆ. ಮಲೆನಾಡಿನಲ್ಲೇ ಕುಡಿಯುವ ನೀರಿನ ಅಭಾವ ಕಂಡು ಬಂದಿದೆ, ರಾಜ್ಯದ 6000 ಗ್ರಾಮ ಪಂಚಾಯಿತಿಗಳಲ್ಲಿ ಟೆಲಿ ಮೆಟ್ರಿಕ್ ಮಳೆ ಮಾಪನ ಕೇಂದ್ರಗಳನ್ನು ಅಳವಡಿಸಲಾಗಿದೆ. 2017ರಲ್ಲಿ ನಡೆದ ಮೋಡ ಬಿತ್ತನೆ ಕೆಲಸ ನಡೆಯಿತು. ಇದರಿಂದ 5 ಟಿ.ಎಮ್.ಸಿ ವರೆಗೆ ನೀರಿನ ಹೆಚ್ಚಳ ಪಡೆಯಲು ಸಾಧ್ಯವಾಯಿತು. ಶೇ 27ರಷ್ಟು ಮಳೆ ಪ್ರಮಾಣ ಅಧಿಕಗೊಂಡಿತು. ಈ ವರ್ಷ ಕೂಡ ಮಳೆಯ ಪ್ರಮಾಣ ಕಡಿಮೆಯಾಗುವ ದೃಷ್ಟಿಯಿಂದ ಈ ವರ್ಷವೂ ಮೋಡ ಬಿತ್ತನೆ ಕೆಲಸ ಕೈಗೊಳ್ಳಲು ಸರ್ಕಾರ ತೀರ್ಮಾನಿಸಿದೆ.

ರಾಜ್ಯದ ವಿವಿಧ ಭಾಗಗಳಲ್ಲಿ 408 ಮಿ.ಮಿ.ನಿಂದ 5051 ಮಿ.ಮಿವರೆಗೆ ಮಳೆ ಪ್ರಮಾಣ ಇದೆ. ಆದರೆ ಬಹುತೇಕ ಪ್ರದೇಶದಲ್ಲಿ ಶೇ 23ರಷ್ಟು ಮಾತ್ರ ಮಳೆಯಾಗಿದೆ. ರಾಜ್ಯದಲ್ಲಿ ಒಟ್ಟು 10.5 ದಶಲಕ್ಷ ಹೆಕ್ಟೇರ್ ಭೂಮಿ ಮಳೆಯನ್ನು ಆಶ್ರಯಿಸಿದೆ. ಮೋಡ ಬಿತ್ತನೆಯ ಮೂಲಕ ಎಲ್ಲ ಕಡೆ ಮಳೆಯಾಗುವಂತೆ ಮಾಡಲು "ಜಲಾಮೃತ" ಯೋಜನೆಯನ್ನು ರಾಜ್ಯ ಸರ್ಕಾರ ಆರಂಭಿಸಿದೆ. 2017–18ರಲ್ಲಿ ರಾಜ್ಯ ಸರ್ಕಾರ ಮೋಡಬಿತ್ತನೆಗಾಗಿ 35 ಕೋಟಿರೂ ಅನುದಾನ ನೀಡಿತ್ತು. ಒಟ್ಟು 3 ರೆಡಾರ್‌ಗಳನ್ನು ಬಳಸಿ ಬೆಂಗಳೂರು, ಗದಗ, ಮತ್ತು ಯಾದಗಿರಿ ಜಿಲ್ಲೆಯಲ್ಲಿ ಕಾರ್ಯಕ್ರಮವನ್ನು ಮೇಲ್ವಿಚಾರಣೆ ನಡೆಸಲು ಕೇಂದ್ರಗಳನ್ನು ಸ್ಥಾಪಿಸಲಾಯಿತು. ಹುಬ್ಬಳ್ಳಿ, ಮತ್ತು ಬೆಂಗಳೂರಿನ ಹೆಚ್.ಎ.ಎಲ್. ವಿಮಾನ ನಿಲ್ದಾಣಗಳಿಂದ 2 ವಿಶೇಷ ವಿಮಾನಗಳನ್ನು ಬಳಸಿ 82 ದಿನ 287 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಲಾಯಿತು. ಈ ಯೋಜನೆಯ ಅನುಷ್ಠಾನ ಮತ್ತು ಸಲಹೆ ನೀಡಲು ತಜ್ಞರ ಸಮಿತಿಯನ್ನು ರಚಿಸಲಾಯಿತು. ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊ.ಜಿ.ಎಸ್. ಭಟ್ ನೇತೃತ್ವದಲ್ಲಿ ತಜ್ಞರ ಸಮಿತಿ ಸಲಹೆ ನೀಡಿತು. ಪ್ರತಿದಿನ ವಿಮಾನ ಎಷ್ಟು ಗಂಟೆಗಳ ಕಾಲ ವಿಹಾರ ನಡೆಸಿ ಎಷ್ಟು ರಾಸಾಯನಿಕವನ್ನು ಸಿಂಪರಣೆ ಮಾಡಿದೆ ಎಂಬ ವಿವರವನ್ನು ಪಡೆಯಲಾಗಿತ್ತು. ಇದರಿಂದ ಸಾಮಾನ್ಯವಾಗಿ ಬರುವ ಮಳೆ, ಮೋಡ ಬಿತ್ತನೆಯಿಂದ ಆಗಿರುವ ಹೆಚ್ಚು ಮಳೆಗಾಗಿ ದೇವರ ಮೊರೆ ಹೋದರೆ ಸರ್ಕಾರ ಮೋಡ ಬಿತ್ತನೆ ಕಾರ್ಯ ಕೈಗೊಳ್ಳುವುದು ಅನಿವಾರ್ಯವಾಗಿದೆ. ಆದಾಗ್ಯೂ ಇವುಗಳಿಗೆ ಶಾಶ್ವತ ಪರಿಹಾರ ಎಂದರೆ ನಿಸರ್ಗದಲ್ಲಿ ಸಮತೋಲನವನ್ನು ಕಾಯ್ದುಕೊಳ್ಳುವುದು.



# ಗಿರೀಶ್ ಕಾರ್ನಾಡ್

## ಆತ್ಮವೃತ್ತಾಂತ ಮತ್ತು ಬದುಕಿನ ಅವಲೋಕನ

ಡಾ .ಸಂಗಮೇಶ ತಮ್ಮನಗೌಡ್ರ



**ಗಿರೀಶ ಕಾರ್ನಾಡರು ಕವಿಯಾಗದಿದ್ದರೂ ನಾಟಕಕಾರರಾದರು, ಚಲನಚಿತ್ರ ನಿರ್ದೇಶಕರಾದರು, ನಟರಾದರು, ಆಕ್ಸ್‌ಫರ್ಡ್‌ನಲ್ಲಿ ಓದಿದ್ದರಿಂದಲೇ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ಸಿನಲ್ಲಿ ದುಡಿದ ಹಿರಿಮೆಗೂ ಪಾತ್ರರಾದರು. ಇವರ ಎಲ್ಲಾ ನಾಟಕಗಳು ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ಸಿನಿಂದ ಇಂಗ್ಲೀಷ್‌ನಲ್ಲಿ ಪ್ರಕಟಗೊಂಡಿವೆ. ಶಿರಸಿ, ಧಾರವಾಡ, ಪುಣೆ, ಮುಂಬೈ, ಮದ್ರಾಸ್ ಮತ್ತು ಲಂಡನ್‌ಗಳಲ್ಲಿ ವೈವಿಧ್ಯಮಯ ಬದುಕು ಕಳೆದವರು.**



ಕನ್ನಡ ಸಾಹಿತ್ಯದ ಅಷ್ಟ ಜ್ಞಾನಪೀಠ ಪುರಸ್ಕೃತರಲ್ಲಿ ಒಬ್ಬರಾದ ಗಿರೀಶ ಕಾರ್ನಾಡರು 2011ರಲ್ಲಿ ಧಾರವಾಡದ ಮನೋಹರ ಗ್ರಂಥಮಾಲೆ ಪ್ರಕಟಿಸಿದ 'ಆಡಾಡತ ಆಯುಷ್ಯ' ಕೃತಿಯಲ್ಲಿ ತಮ್ಮ ಆತ್ಮ ಕಥೆಯ ಅರ್ಧ ಕಥಾನಕದಲ್ಲಿ ಬದುಕಿನ ನಡೆದು ಬಂದ ದಾರಿಯ ಅಂತರ್ಗತ ವಿಚಾರಗಳನ್ನು ಮನಬಿಚ್ಚಿ ಹಂಚಿಕೊಂಡಿದ್ದಾರೆ. ಮುಚ್ಚು ಮರೆಯಿಲ್ಲದೆ ಕೊಂಕು ಬಿಂಕವಿಲ್ಲದೆ ಇಲ್ಲಿನ ಅನಿಸಿಕೆಗಳು ಅವರ  ಹೃದಯ ವಿಶಾಲತೆ ಮೆರೆದಿದೆ. ಗಿರೀಶ ಕರ್ನಾಡರು 1938ರ ಮೇ 19 ರಂದು ಮಹಾರಾಷ್ಟ್ರದ ಮಾಥೇರಾನ್‌ನಲ್ಲಿ ಜನಿಸಿದರು. ತಂದೆ ಡಾ. ರಘುನಾಥ ಕಾರ್ನಾಡ್ ಮತ್ತು ತಾಯಿ ಕೃಷ್ಣಬಾಯಿ.

ಬ್ರಿಟೀಷ್ ಸರಕಾರದಲ್ಲಿ ಗಿರೀಶ ಕಾರ್ನಾಡರ ತಂದೆ ಸರಕಾರಿ ದವಾಖಾನೆಯಲ್ಲಿ ಡಾಕ್ಟರರಾಗಿದ್ದರು. ಮೊದಲು ಪುಣೆಯಲ್ಲಿ ನೌಕರಿ ಮಾಡಿ, ನಂತರ ಕರ್ನಾಟಕದ ಶಿರಸಿಗೆ ವರ್ಗಾವಣೆಗೊಂಡಿದ್ದರು. ಸ್ಮಾರ್ತ ಬ್ರಹ್ಮಣರಾಗಿದ್ದರೂ ತಂದೆ ನಾಸ್ತಿಕವಾದಿಯಾಗಿದ್ದರು.

ಪುಣೆಯ ಸಸೂನ್ ಆಸ್ಪತ್ರೆಯಲ್ಲಿ ಇದ್ದ ಸೌಲತ್ತು ಶಿರಸಿಯಲ್ಲಿ ಇರಲಿಲ್ಲ. ಹೆಚ್ಚು ನಾಗರಿಕ ಸೌಲಭ್ಯಗಳಿಲ್ಲದ ಶಿರಸಿಯ 'Pandit Cottage Hospital' ನಲ್ಲಿ ಅವರ ತಂದೆ ವೈದ್ಯ ವೃತ್ತಿಯನ್ನು ಮುಂದುವರೆಸಿದರು. ಗಿರೀಶರು ಬಾಲ್ಯದಲ್ಲಿ ಅಪ್ಪನ ದವಾಖಾನೆಗೆ ಆಗಾಗ ಹೋಗುತ್ತಿದ್ದರು. ಗಿರೀಶರು ಮತ್ತು ತಂಗಿ ಲೀನಾಗೆ ಹಾಗೂ ತಮ್ಮ ವಾರಿಗೆಯವರಾದ ಆಸ್ಪತ್ರೆಯ ಔಷಧ ಮಿಶ್ರಣಗಾರನ ಇಬ್ಬರು ಮಕ್ಕಳಿಗೆ ಆಸ್ಪತ್ರೆಯಿಂದ ವೈಯಕ್ತಿಕವಾಗಿ ದೊರೆತ ಕೊಡುಗೆ ಎಂದರೆ ಅವರಿಗೆ ಸಿಗುತ್ತಿದ್ದ ರಾಶಿ ರಾಶಿ ಹಳದಿ ಬಣ್ಣದ ರೋಗ ಹಾಳೆಗಳು (Case Paper). ರೋಗಿಗಳ ವ್ಯಾಧಿ ಲಕ್ಷಣ, ಅವರಿಗೆ ಕೊಟ್ಟಿರುವ ಔಷಧಿ ವಿವರ, ಬೇನೆಯ ಪ್ರಗತಿಯನ್ನು ಬರೆದು ಪ್ರಯೋಜನವಿಲ್ಲವೆಂದು  ಔಷಧದ ಪುಡಿಗಳನ್ನು ಕಟ್ಟಲಿಕ್ಕೆ, ಔಷಧಿ ಬಾಟಲಿಗಳ ಬಾಯಿ ಮುಚ್ಚಲು ಉಪಯೋಗಿಸಲ್ಪಡುತ್ತಿದ್ದ ಈ ಕಾಗದಗಳನ್ನು ಪಡೆದುಕೊಂಡು ಗಿರೀಶರು ಚಿತ್ರ ಬಿಡಿಸುತ್ತಿದ್ದರು. 9ನೇ ವಯಸ್ಸಿಗೆ ಮೊದಲ ಕಾದಂಬರಿಯು ಈ ಹಾಳೆಯಲ್ಲಿಯೇ ಆವಿರ್ಭವಿಸಿತೆಂದು ಅವರು ಹೇಳುತ್ತಾರೆ.

ಶಿರಸಿಯ ಆಸ್ಪತ್ರೆಯ ಪಕ್ಕದಲ್ಲಿ ಗುಡ್ಡದ ಹೆಗಲ ಮೇಲೆ ಕ್ಯಾಥೋಲಿಕ್ ಇಗರ್ಜಿ ಇತ್ತು. ಪ್ರತಿ ರವಿವಾರ ಪ್ರಾತಃಕಾಲ ಇಗರ್ಜಿಯಿಂದ ಹೊಮ್ಮಿ ಬರುತ್ತಿದ್ದ ಕೊಂಕಣಿ ಪ್ರಾರ್ಥನೆಗಳೊಡನೆ ಆರಂಭವಾಗುತ್ತಿತ್ತು. ಕಾರ್ನಾಡ ಕುಟುಂಬದ ಮಕ್ಕಳೆಲ್ಲ ಸೇರಿ ಇಗರ್ಜಿಗೆ ಹೋಗಿ ಆ ಸಮಾಜದ ಜೊತೆಗೂಡಿ ಪ್ರಾರ್ಥನೆಗಳನ್ನು ಹಾಡುವುದು ಸಾಮಾನ್ಯವಾಗಿತ್ತು.

ಗಿರೀಶರ ತಂದೆಯವರು ಪುಣೆಯಿಂದ ಶಿರಸಿಗೆ ಬಂದುದರಿಂದ  ಗಿರೀಶರ ಅಣ್ಣ ವಸಂತ ಮತ್ತು ಅಕ್ಕ ಪ್ರೇಮಾಳ ಶಿಕ್ಷಣಕ್ಕೆ ತೊಂದರೆಯಾಯಿತು. ಅವರಿಬ್ಬರೂ ಪುಣೆಯಲ್ಲಿ ಮರಾಠಿ ಮಾಧ್ಯಮದಲ್ಲಿ ಶಿಕ್ಷಣ ಪಡೆದಿದ್ದರಿಂದ ಅವರಿಗೆ ಕನ್ನಡದಲ್ಲಿ ಕಲಿಯುವುದು ತೊಡಕಾಗುತ್ತದೆ ಎಂದು ಅವರಿಬ್ಬರನ್ನು ಧಾರವಾಡಕ್ಕೆ ರವಾನೆ ಮಾಡಿದರು.





downloaded from: www.kpscvaani.com









ಗಿರೀಶ ಮತ್ತು ಲೀನಾರನ್ನು ಶಿರಸಿಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಾರಂಭಿಸಲಾಗಿದ್ದ ಒಂದೇ ಒಂದು ಕನ್ನಡ ಪ್ರಾಥಮಿಕ ಶಾಲೆಗೆ ಸೇರಿಸಲಾಯಿತು. ಪ್ರೌಢಶಿಕ್ಷಣವನ್ನು ಧಾರವಾಡದ ಬಾಸೆಲ್ ಮಿಷನ್ ಹೈಸ್ಕೂಲ್‌ನಲ್ಲಿ ಪಡೆದರು.

ಶಿರಸಿಯ ವಿದ್ಯಾಭ್ಯಾಸದಲ್ಲಿ ತನಗೆ ಪ್ರೇರಣೆ ಕೊಟ್ಟ ಪೈ ಮಾಸ್ತರರು ಮತ್ತು ಜಿ.ಕೆ. ಹೆಗಡೆ ಗುರುಗಳನ್ನು ಗಿರೀಶರು ತುಂಬಾ ಕೃತಜ್ಞತೆಯಿಂದ ನೆನೆಸುತಿದ್ದರು. ಹುಡುಗರ ವಿದ್ಯಾಭ್ಯಾಸ ಮಾತ್ರವಲ್ಲದೇ ವಾರಕ್ಕೊಂದು ದಿನ ಶನಿವಾರ ಬೆಳಿಗ್ಗೆ ಶಾಲೆಯ ವಿದ್ಯಾರ್ಥಿಗಳೆಲ್ಲ Central Hallನಲ್ಲಿ ನೆರೆಯುತ್ತಿದ್ದರು. ಒಂದು ಶನಿವಾರ ವಿನೋದಾವಳಿಗಳು, ಒಂದು ಶನಿವಾರ ಡಿಬೇಟ್, ಚರ್ಚಾಕೂಟ ಹೀಗೆ ಕಾರ್ಯಕ್ರಮವಿದ್ದು, ಅವುಗಳಲ್ಲಿ ಭಾಗವಹಿಸಲು ಸದಾಕಾಲ ಪ್ರೋತ್ಸಾಹ ನೀಡಲಾಗುತ್ತಿತ್ತು. ಅವರು ಸಾರ್ವಜನಿಕ ಸಭೆಗಳಲ್ಲಿ ನಿಂತು ಮಾತಾಡಲಿಕ್ಕೆ ವಾದಿಸಲಿಕ್ಕೆ ಕಲಿತದ್ದೇ ಅಲ್ಲಿಂದ. ಆಕ್ಸ್‌ಫರ್ಡ್‌ನಲ್ಲಿ ಆಕ್ಸ್‌ಫರ್ಡ್ ಯೂನಿಯನ್ ಸೊಸೈಟಿ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದುದರ ಶ್ರೇಯಸ್ಸು ಈ ಶನಿವಾರದ ಸಭೆಗೆ ಸೇರಬೇಕೆಂದು ಗಿರೀಶ ಕಾರ್ನಾಡರು ಹೇಳುತ್ತಾರೆ.

ಶಿರಸಿಯ ಮಾರಿಕಾಂಬ ದೇವಸ್ಥಾನದ ಆವರಣವೇ ಗಿರೀಶರ ಆಟದ ಕೇಂದ್ರವಾಗಿತ್ತು. ಮೂಲತಃ ದಲಿತರ ದೈವವಾದ ಮಾರಿಯು ಬ್ರಾಹ್ಮಣ ಅರ್ಚಕರ ಕೈಯಲ್ಲಿ ಮಾರಿಕಾಂಬ ಆದಳು. ಮಾರಿಕಾಂಬ ದೇವಸ್ಥಾನದ ಒಳ ಆವರಣದಲ್ಲಿ ಸಮ ವಯಸ್ಕ ಮಕ್ಕಳೊಂದಿಗೆ ಹುಡದಿ, ಚಂಡು, ಮುಟ್ಟಾಟ ಆಡುತ್ತಿದ್ದರು. ಮೇಲಂತಸ್ತಿನ ಪ್ರಾಕಾರದಲ್ಲಿ ನೃತ್ಯಾಭ್ಯಾಸ, ಯೋಗಾಭ್ಯಾಸ, ಪ್ರೌಢಶಿಕ್ಷಣ ಒಟ್ಟಿಗೇ ಸಾಗುತ್ತಿದ್ದವು. 1942ರ ಜಾತ್ರೆಯಲ್ಲಿ ನಡೆದ ಅಹಿಂಸಾ ಆಂದೋಲನದ ಪರಿಣಾಮವಾಗಿ ಆ ದೇವಸ್ಥಾನದಲ್ಲಿ ಕೋಣನ ಬಲಿಕೊಡುವ ಪದ್ಧತಿ ನಿಂತಿತಂತೆ.

1948ರಲ್ಲಿ ಸರಕಾರಿ ನೌಕರಿಯಿಂದ ಗಿರೀಶರ ತಂದೆ ನಿವೃತ್ತಿಯಾದರು. ಸರಕಾರಿ ಮನೆ ಬಿಟ್ಟು, ಶಿರಸಿಯ ಪೇಟೆಯಲ್ಲಿದ್ದ ರಾಯರ ಮನೆಯಲ್ಲಿ ಬಾಡಿಗೆಗೆ ಇರಬೇಕಾಯಿತು. ತಂಗಿ ಲೀನಾಳ ಜೊತೆಗೆ ನೃತ್ಯ ತರಬೇತಿಗೆ ಹೋಗುತ್ತಿದ್ದ ಗಿರೀಶರು ನೃತ್ಯ ಕಲಿಯಲಾರಂಭಿಸಿ ಗುರುಗಳೊಡನೆ ಮೂರ್‍ನಾಲ್ಕು ನೃತ್ಯ ಪ್ರದರ್ಶನಗಳನ್ನು ಕೊಟ್ಟಿದ್ದರು. ಇದು ಮುಂದೆ ಇವರ ನಟನೆಗೂ ತುಂಬಾ ಸಹಾಯಕವಾಯಿತು. ಹಾಗಾಗಿ 1984ರಲ್ಲಿ ತೆಲುಗು ಚಿತ್ರ ನಿರ್ದೇಶಕ ಜಂಧಿಯಾಲ ಅವರಿಂದ ನಾಟ್ಯಾಚಾರನ ಪಾತ್ರ ನಿರ್ವಹಿಸುವ ಅವಕಾಶ ಬಂದಾಗ, ಚಿತ್ರದಲ್ಲಿ ಆರೇಳು ನೃತ್ಯದೊಂದಿಗೆ ತಾಂಡವ ನೃತ್ಯವನ್ನು ಲೀಲಾಜಾಲವಾಗಿ ಮಾಡಿದರು.

1952ರಲ್ಲಿ ಶಿರಸಿಯಿಂದ ಸಹ ಕುಟುಂಬವು ಧಾರವಾಡಕ್ಕೆ ಬಂದಿತು. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ 4 ವರ್ಷ ಗಿರೀಶ ಕಾರ್ನಾಡರ ವಿದ್ಯಾಭ್ಯಾಸ ಮುಂದುವರೆಯಿತು. ಆ ಕಾಲೇಜಿನಲ್ಲಿ ಡಾ. ವಿ.ಕೃ. ಗೋಕಾಕ್ ಪ್ರಿನ್ಸಿಪಾಲರಾಗಿದ್ದರು. ಬಿ.ಎ. ದಲ್ಲಿ ಗಣಿತ ಮತ್ತು ತತ್ತ್ವಶಾಸ್ತ್ರ ಅಧ್ಯಯನ ಅವರ ವಿಷಯಗಳಾಗಿದ್ದವು. ಕವಿಯಾಗಲು ಗೋಕಾಕರ ಮಾರ್ಗದರ್ಶನ, ಡಾ. ಎಸ್. ರಾಧಾಕೃಷ್ಣರ ಬೋಧನೆ, ವಿ.ಎಂ.ಇನಾಮದಾರರ ಗುರುಬಾಂಧವ್ಯದ ಒಡನಾಟಗಳು ಅವರು ಸಾಹಿತಿಯಾಗಿ ಬೆಳೆಯಲು ಪ್ರೇರೇಪಿಸಿದವು.

ಗೋಕಾಕರ ಸಲಹೆಯಂತೆ ಆಂಗ್ಲ ಕವಿಗಳ ಕಾವ್ಯಾಭ್ಯಾಸದ ಹುಚ್ಚಿಗಂಟಿಕೊಂಡ ಗಿರೀಶರು, ಟಿ.ಎಸ್.ಯಲಿಯಟ್, ಡಬ್ಲ್ಯುಎಚ್ ಆಡ್ಯನ್, ಸ್ಟೀಫನ್ ಸ್ಪೆಂಡರ್, ಸಿ.ಡೇ. ಲುಯಿಸ್, ಮ್ಯಾಕ್‌ನೀಸ್ ಮುಂತಾದ ಆಂಗ್ಲಕವಿಗಳ ಕಾವ್ಯವನ್ನು ಕಾಲೇಜು ಗ್ರಂಥಾಲಯಗಳಲ್ಲಿ ಓದ ಹತ್ತಿದರು. ಥಾಮಸ್ ಹಾರ್ಡಿ, ಪಿ.ವಿ.ಶೆಲ್ಲಿಯ ಕಾವ್ಯದ ಬಗ್ಗೆ ವಿ.ಎಂ.ಇನಾಮದಾರ ಮನವರಿಕೆಯನ್ನು ಆಗಾಗ ಮಾಡಿಕೊಡುತ್ತಿದ್ದರು. ವಿನಾಯಕ ಶಿರ್ಕೆ, ಕಿಟ್ಟಿ, ಗೋವಾದ ಸ್ನೇಹಿತೆ ಆರೋರಾ ಫಿಗೆರೇಡೋ ಅವರುಗಳು ಇವರ ಸಹಪಾಠಿಗಳೂ ಸ್ನೇಹಿತರೂ ಆಗಿದ್ದರು. ಕೀರ್ತಿನಾಥ ಕುರ್ತಕೋಟಿ, ಮನೋಹರ ಗ್ರಂಥಮಾಲೆಯ ಜಿ.ಬಿ.ಜೋಶಿ. ಗಿರೀಶರ ಆತ್ಮೀಯ ಮಾರ್ಗದರ್ಶಕರಂತಿದ್ದರು.

ಮುಂದೆ 1958ರಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಪದವಿ ಮುಗಿಸಿದ ನಂತರ ಸ್ಕಾಲರ್‌ಶಿಪ್ ಸಂದರ್ಶನಕ್ಕಾಗಿ ಗಿರೀಶರು ದಿಲ್ಲಿಗೆ ಹೋದರು. ಆ ಕಾಲದಲ್ಲಿ ರ್‍ಹೋಡ್ಸ್ ಸ್ಕಾಲರ್‌ಶಿಪ್ ಪ್ರತಿಭಾನ್ವಿತರಿಗೆ ಮಾತ್ರ ಮೀಸಲಾಗಿತ್ತು. ಈ ಮೊದಲು ಗೋಕಾಕರು ಈ ಶಿಷ್ಯವೇತನ ಪಡೆದು ಆಕ್ಸ್‌ಫರ್ಡ್‌ನಲ್ಲಿ ಕಲಿತಿದ್ದರು. ಸಂದರ್ಶನದಲ್ಲಿ ಭಾರತದ ವಿವಿಧ ವಿಶ್ವವಿದ್ಯಾಲಯಗಳಿಂದ ಬೇರೆ ಬೇರೆ ಶಾಸ್ತ್ರಗಳಲ್ಲಿ ಪ್ರಾವಿಣ್ಯ ಪಡೆದ 15 ಅಭ್ಯರ್ಥಿಗಳು ಇದ್ದರು. ಗಿರೀಶರಿಗೆ ಧರಿಸಲಿಕ್ಕೆ ಸೂಟೂ ಇರಲಿಲ್ಲ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿದ್ದಾಗಿನ ದಟ್ಟ ನೀಲಿ ಬ್ಲೇಝರ್‌ನ್ನು ಸೂಟಿನಂತೆ ಹೊಲಿಸಿ ಸಂದರ್ಶನಕ್ಕೆ ಹೋಗಿದ್ದರು. ಮೊದಲ ಸಂದರ್ಶನದಲ್ಲಿ ಫೇಲ್ ಆದರೂ ಮರು ವರ್ಷ ಪಾಸಾಗಿ ಸ್ಕಾಲರ್‌ಶಿಪ್ ಪಡೆದುಕೊಂಡರು.

ಸ್ಕಾಲರ್‌ಶಿಪ್ ಪಡೆದು 1960ರ ಸೆಪ್ಟೆಂಬರ್ 7 ರಂದು ಮುಂಬೈಯ ಬೆಲಾರ್ಡ್ ಪಿಯರ್‌ನಲ್ಲಿ ಇಂಗ್ಲೆಂಡಿಗೆ ಹೋಗಲು ಗಿರೀಶರು ಹಡಗನ್ನು ಏರಿದರು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ದೇಶಕ್ಕೆ ಮರಳಿದ ನಂತರ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ಸಿನ ಭಾರತದ ಬ್ರ್ಯಾಂಚಿನಲ್ಲಿ ಪುಸ್ತಕ ಅನುವಾದಿಸುವ ಕೆಲಸದಲ್ಲಿ ಸಹಾಯಕ ಮ್ಯಾನೇಜರ್ ಮತ್ತು ಮ್ಯಾನೇಜರ್ ಆಗಿ ಮದ್ರಾಸಿನಲ್ಲಿ 1960 ರಿಂದ 70 ರವರೆಗೆ ಗಿರೀಶರು 10 ವರ್ಷ ಕೆಲಸ ಮಾಡಿದರು.

1974–75ರಲ್ಲಿ ಪುಣೆಯ ಫಿಲ್ಮ್ & ಟೆಲಿವಿಜನ್ ಸಂಸ್ಥೆಯ ನಿರ್ದೇಶಕರಾಗಿ, 2000–2003 ರವರೆಗೆ ಲಂಡನ್‌ನ ನೆಹರೂ ಸೆಂಟರ್‌ನ ನಿರ್ದೇಶಕರಾಗಿ ಹಾಗೂ ಭಾರತದ ಹೈ ಕಮೀಷನ್‌ನಲ್ಲಿ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಚಿಕಾಗೊ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕೂಡ ಸೇವೆ ಸಲ್ಲಿಸಿದರು. ಹೀಗೆ ಅವರು ರಾಜ್ಯ–ರಾಷ್ಟ್ರ ಮಟ್ಟದಲ್ಲಿ ಹಲವು ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ರಂಗಭೂಮಿ ಗಿರೀಶ ಕಾರ್ನಾಡರನ್ನು ಬಾಲ್ಯದಿಂದಲೇ ಸೆಳೆದಿತ್ತು. ಹಾಗಾಗಿ ಅವರು ಅಪ್ರತಿಮ ನಾಟಕಕಾರರಾಗಿ ಬೆಳೆದರು. ಯಯಾತಿ ಅವರ ಮೊದಲ ನಾಟಕ. ಆದರೆ ಅವರು ಹೆಚ್ಚು ಜನಪ್ರಿಯರಾದುದು ತುಘಲಕ್ ನಾಟಕದಿಂದ. ಸಿ.ಆರ್.ಸಿಂಹ ನಟಿಸಿದ ತುಘಲಕ್ 1969 ರಿಂದ ದೇಶ ವಿದೇಶಗಳು ಸೇರಿದಂತೆ 100ಕ್ಕೂ ಮೇಲ್ಪಟ್ಟು ಪ್ರಯೋಗಗಳನ್ನು ಕಾಣುವ ಜೊತೆಗೆ ಹಿಂದಿ ಭಾಷೆಗೂ ಭಾಷಾಂತರಗೊಂಡು ಯಶಸ್ವಿ ಪ್ರದರ್ಶನ ಕಂಡಿತು. ಹಯವದನ, ಅಂಜುಮಲ್ಲಿಗೆ, ಹಿಟ್ಟಿನ ಹುಂಜ, ನಾಗಮಂಡಲ, ತಲೆದಂಡ, ಅಗ್ನಿ ಮತ್ತು ಮಳೆ, ಟಿಪ್ಪು ಸುಲ್ತಾನ ಕಂಡ ಕನಸು, ಒಡಕಲು ಬಿಂಬ ಇವರ ಇತರೆ ಪ್ರಮುಖ ನಾಟಕಗಳು.







### ಗಿರೀಶ ಕಾರ್ನಾಡರಿಗೆ ಸಂದ ಪ್ರಶಸ್ತಿ ಪುರಸ್ಕಾರಗಳು :

1970–72ರಲ್ಲಿ ಜಾನಪದ ರಂಗಭೂಮಿಯಲ್ಲಿ, ಸೃಜನಶೀಲ ಕಾರ್ಯಕ್ಕಾಗಿ ಹೋಮಿಭಾಬಾ ಫೆಲೋಶಿಪ್, 1974ರಲ್ಲಿ ಪದ್ಮಶ್ರೀ ಪ್ರಶಸ್ತಿ, 1976–78ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ, 1984–1993ರ ವರೆಗೆ ಇಂಡೋ ಯುಎಸ್. ಸಬ್ ಕಮೀಷನ್ ಫಿಲ್ಮ್ಸ್. ಬ್ರಾಡ್‌ಕಾಸ್ಟಿಂಗ್, ಪ್ರೆಸ್ ಜಾಯಿಂಟ್ ಮೀಡಿಯಾ ಕಮಿಟಿಯ ಭಾರತ ಪರ ಸಹ ಅಧ್ಯಕ್ಷ, 1987–88ರಲ್ಲಿ ಚಿಕಾಗೊ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕ ಹಾಗೂ ಫುಲ್‌ಬ್ರೈಟ್ ಸ್ಕಾಲರ್ ಇನ್ ರೆಸಿಡೆನ್ಸ್, 1988–1993ರವರೆಗೆ ನವದೆಹಲಿಯ ಸಂಗೀತ ನಾಟಕ ಅಕಾಡೆಮಿಯ ಅಧ್ಯಕ್ಷ, 1992ರಲ್ಲಿ ಪದ್ಮಭೂಷಣ ಪ್ರಶಸ್ತಿ, 1994ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್, 1994ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಿಶೇಷ ಗೌರವ, 1997ರಲ್ಲಿ ಕರ್ನಾಟಕ ಸರಕಾರದಿಂದ ಗುಬ್ಬಿವೀರಣ್ಣ ಪ್ರಶಸ್ತಿ, 1999ರಲ್ಲಿ ಮಧ್ಯಪ್ರದೇಶ ಸರಕಾರದಿಂದ ಕಾಳಿದಾಸ ಸಮ್ಮಾನ, 1999ರಲ್ಲಿ ಭಾರತೀಯ ಜ್ಞಾನಪೀಠ ಪ್ರಶಸ್ತಿ, 2010ರಲ್ಲಿ ವಿದ್ಯಾಸಾಗರ ವಿಶ್ವವಿದ್ಯಾಲಯ ಮಿಡ್ನಾಪುರದಿಂದ ಗೌರವ ಡಿ.ಲಿಟ್, 2011ರಲ್ಲಿ ರ್‍ಯಾವನ್‌ಶಾ ವಿಶ್ವವಿದ್ಯಾಲಯ ಭುವನೇಶ್ವರದಿಂದ ಗೌರವ ಡಿ.ಲಿಟ್, 2011ರಲ್ಲಿ ಯೂನಿವರ್ಸಿಟಿ ಆಫ್ ಸೌತರ್ನ್ ಕ್ಯಾಲಿಫೋರ್ನಿಯಾ ಲಾಸ್ ಏಂಜೆಲ್ಸ್ ಯು.ಎಸ್.ಎ.ದಿಂದ ಹಾನರೇಬಲ್ ಡಾಕ್ಟರ್ ಆಫ್ ಹ್ಯುಮ್ಯಾನ್ ಲೆಟರ್ಸ್ ಇನ್ನೂ ಮುಂತಾದ ಗೌರವ ಪುರಸ್ಕಾರಗಳು ಗಿರೀಶ ಕಾರ್ನಾಡರಿಗೆ ಸಂದಿವೆ.


**ನಾಟಕಗಳಿಗಾಗಿ ಸಂದ ಪ್ರಶಸ್ತಿಗಳು :**

- ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ–1972
- ಭಾರತೀಯ ನಾಟ್ಯ ಸಂಘದಿಂದ ಹಯವದನಕ್ಕೆ ವರ್ಷದ ಶ್ರೇಷ್ಠ ನಾಟಕವೆಂದು ಕಮಲಾದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿ–1972
- ನಾಗಮಂಡಲಕ್ಕೆ ಸೃಜನಶೀಲ ವಿಭಾಗದಲ್ಲಿ ಶ್ರೇಷ್ಠ ಕೃತಿಯೆಂದು ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ –1992
- ತಲೆದಂಡಕ್ಕೆ 1990–91ನೇ ವರ್ಷದ ಶ್ರೇಷ್ಠ ನಾಟಕವೆಂದು ಕರ್ನಾಟಕ ನಾಟಕ ಅಕಾಡೆಮಿಯ ಪುರಸ್ಕಾರ
- ದಕ್ಷಿಣ ಭಾರತದ ಪುಸ್ತಕ ಪ್ರಕಾಶಕ ಹಾಗೂ ವಿತರಕರ ಸಂಘದಿಂದ ಪ್ರಶಸ್ತಿ–1992
- ತಲೆದಂಡಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ–1993
- ತಲೆದಂಡಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ–1994





downloaded from: www.kpscvaani.com



ಅಪಾರ ಜ್ಞಾನವನ್ನು ಹೊಂದಿದ್ದ ಕರ್ನಾಡರು ಕನ್ನಡ, ಮರಾಠಿ, ಹಿಂದಿ, ಇಂಗ್ಲಿಷ್, ಜರ್ಮನ್, ಮಳೆಯಾಳಂ, ತಮಿಳು, ತೆಲಗು, ಕೊಂಕಣಿ, ಪಂಜಾಬಿ, ತುಳು ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡುತ್ತಿದ್ದರು. ಹಾಗಾಗಿ ಅವರು ಹಲವಾರು ಇಂಗ್ಲೀಷ್ ಕೃತಿಗಳನ್ನು ರಚಿಸಿದ ಜೊತೆಗೆ ನಾಟಕಗಳನ್ನು ಇತರೆ ಭಾಷೆಗೆ ಅನುವಾದ ಮಾಡುತ್ತಿದ್ದರು. ತುಘಲಕ್ ಅನ್ನು ಹಂಗೇರಿ, ಸ್ಪ್ಯಾನಿಷ್ ಮತ್ತು ಜರ್ಮನ್ ಭಾಷೆಗೆ ಅನುವಾದಿಸಿದ್ದರೆ, ನಾಗಮಂಡಲವನ್ನು ಪೋಲಿಶ್ ಭಾಷೆಗೆ ಅನುವಾದಿಸಿದ್ದಾರೆ.

ಸಾಹಿತಿ, ನಾಟಕಕಾರರಾಗಿದ್ದ ಕಾರ್ನಾಡರಿಗೆ ನಿರ್ದೇಶನ ಮತ್ತು ನಟನೆಯ ಮೇಲು ಆಸಕ್ತಿ ಇತ್ತು. ಹಾಗಾಗಿ ಅವರು ಕನ್ನಡ ಮತ್ತು ಹಿಂದಿ, ಚಲನಚಿತ್ರಗಳನ್ನು ನಿರ್ದೇಶಿಸುವ ಜೊತೆಗೆ ಹಲವು ಚಿತ್ರಗಳಲ್ಲಿ ನಟಿಸಿದ್ದರು. ಅವರು ಪ್ರಾಣೇಶಾಚಾರ್ಯರಾಗಿ ನಟಿಸಿದ್ದ 'ಸಂಸ್ಕಾರ' ಚಿತ್ರಕ್ಕೆ 1970ರಲ್ಲಿ ಕನ್ನಡಕ್ಕೆ ಪ್ರಥಮ ಸ್ವರ್ಣಕಮಲ ಪದಕವನ್ನು ತಂದುಕೊಟ್ಟಿತು. 'ವಂಶವೃಕ್ಷ' ನಿರ್ದೇಶನಕ್ಕೆ ರಾಜ್ಯ ಮತ್ತು ರಾಷ್ಟ್ರೀಯ ಪ್ರಶಸ್ತಿ, ದ ಲ್ಯಾಂಪ್ ಇನ್ ದ ನಿಛೆಗಾಗಿ ಸ್ವರ್ಣ ಕಮಲ ಪ್ರಶಸ್ತಿ, 'ಕಾಡು' ಚಿತ್ರಕ್ಕಾಗಿ ರಾಷ್ಟ್ರಪ್ರಶಸ್ತಿ, ಸಂತ ಶಿಶುನಾಳ ಶರೀಫ ಚಿತ್ರದಲ್ಲಿ ಶ್ರೇಷ್ಠ ಸಹನಟನೆಂದು ರಾಜ್ಯಪ್ರಶಸ್ತಿ, 'ಕಾನೂರು ಹೆಗ್ಗಡಿತಿ' ಚಿತ್ರಕ್ಕೆ ರಾಜ್ಯ ಮತ್ತು ರಾಷ್ಟ್ರೀಯ ಪುರಸ್ಕಾರ, ಕಿರುಚಿತ್ರವಾದ 'ಚಲುವಿ'ಗೆ ಪರಿಸರ ಸಂರಕ್ಷಣೆ ಆಶಯಕ್ಕಾಗಿ ರಾಷ್ಟ್ರೀಯ ಪ್ರಶಸ್ತಿಯನ್ನು ಸೇರಿದಂತೆ ಅಪಾರ ಪ್ರಶಸ್ತಿಗಳಿಗೆ ಭಾಜನರಾದರು. ಉತ್ಸವ್ ಮತ್ತು ಗೋಧೂಳಿ ಇವರು ನಿರ್ದೇಶಿಸಿದ ಹಿಂದಿ ಚಿತ್ರಗಳು.

ಚಲನಚಿತ್ರಗಳಲ್ಲದೆ ಗಿರೀಶ ಕಾರ್ನಾಡರು ಸಾಕ್ಷ್ಯ ಚಿತ್ರಗಳನ್ನು ಕೂಡ ನಿರ್ದೇಶಿಸಿದ್ದರು. ಧಾರವಾಡದ ಸಾರಸ್ವತ ಪುರದ ನಿವಾಸಿಯಾಗಿದ್ದಾಗ ವರಕವಿ ಡಾ. ದ.ರಾ.ಬೇಂದ್ರೆಯವರೊಡನೆ ಆತ್ಮೀಯ ಒಡನಾಟ ಹೊಂದಿದ್ದರು. ಆದ್ದರಿಂದ ಬೇಂದ್ರೆಯವರ ಬಗ್ಗೆ 1973ರಲ್ಲಿ ಒಂದು ಸಾಕ್ಷ್ಯ ಚಿತ್ರವನ್ನು ನಿರ್ಮಿಸಿದ್ದರು. ಟಿ.ವಿ. ಧಾರವಾಹಿಯಲ್ಲಿಯೂ ತೊಡಗಿಸಿಕೊಂಡಿದ್ದ ಗಿರೀಶ ಕಾರ್ನಾಡರು, ತಮ್ಮನ್ನು ಒಂದು ಕ್ಷೇತ್ರಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳಲಿಲ್ಲ. ಯಾವುದೇ ಕೆಲಸವಾಗಲಿ ಅದು ತನ್ನ ಘನತೆಗೆ ತಕ್ಕದಾದುಲ್ಲ ಎಂದು ಅಂದುಕೊಂಡವರಲ್ಲ. ಆಡು ಮುಟ್ಟದ ಸೊಪ್ಪಿಲ್ಲ ಎನ್ನುವಂತೆ ಆಸಕ್ತಿಯಿದ್ದ ಎಲ್ಲಾ ಕ್ಷೇತ್ರಗಳಲ್ಲೂ ಕೆಲಸ ಮಾಡುವ ಮೂಲಕ ಎಲ್ಲಾ ಕ್ಷೇತ್ರದಲ್ಲೂ ಹೆಸರು ಮಾಡಿದರು. ಇಂತಹ ವೈವಿಧ್ಯಮಯ ಸಾಧನೆ ಬೇರೊಬ್ಬರಿಂದ ಸಾಧ್ಯವಿಲ್ಲವೆಂದರೆ ತಪ್ಪಾಗಲಾರದು.

ಗಿರೀಶ ಕಾರ್ನಾಡರು ಕವಿಯಾಗದಿದ್ದರೂ ನಾಟಕಕಾರರಾದರು, ಚಲನಚಿತ್ರ ನಿರ್ದೇಶಕರಾದರು, ನಟರಾದರು, ಆಕ್ಸ್‌ಫರ್ಡ್‌ನಲ್ಲಿ ಓದಿದ್ದರಿಂದಲೇ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ಸಿನಲ್ಲಿ ದುಡಿದ ಹಿರಿಮೆಗೂ ಪಾತ್ರರಾದರು. ಇವರ ಎಲ್ಲಾ ನಾಟಕಗಳು ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ಸಿನಿಂದ ಇಂಗ್ಲೀಷ್‌ನಲ್ಲಿ ಪ್ರಕಟಗೊಂಡಿವೆ. ಶಿರಸಿ, ಧಾರವಾಡ, ಪುಣೆ, ಮುಂಬೈ, ಮದ್ರಾಸ್ ಮತ್ತು ಲಂಡನ್‌ಗಳಲ್ಲಿ ವೈವಿಧ್ಯಮಯ ಬದುಕು ಕಳೆದು, ತಮ್ಮ ಕೊನೆಯ ದಿನಗಳಲ್ಲಿ ಪತ್ನಿ ಡಾ ಸರಸ್ವತಿ ಗಣಪತಿ, ಪುತ್ರಿ ಶಾಲ್ಮಲಿ ರಾಧ ಮತ್ತು ಮಗ ರಘು ಅಮೇಯಾ ಅವರೊಂದಿಗೆ ಬೆಂಗಳೂರಿನಲ್ಲಿ ನೆಲೆಸಿದರು.

ಕಳೆದ 3 ವರ್ಷಗಳಿಂದ ಕಾಡುತ್ತಿದ್ದ ಶ್ವಾಸಕೋಶ ಸಮಸ್ಯೆಯಿಂದ ನೈಸರ್ಗಿಕವಾಗಿ ಅವರಿಗೆ ಉಸಿರಾಡಲು ಸಾಧ್ಯವಿರಲಿಲ್ಲ. ಆಮ್ಲಜನಕವನ್ನು ಕೃತಕವಾಗಿ ಶ್ವಾಸಕೋಶಕ್ಕೆ ಪೂರೈಸುವ ಆಕ್ಸಿಜನ್ ಯಂತ್ರವನ್ನು ಅವರಿಗೆ ಅಳವಡಿಸಲಾಗಿತ್ತು. ಮೂಗಿಗೆ ಆಕ್ಸಿಜನ್ ಪೈಪ್ ಅನ್ನು ಹಾಕಿಕೊಂಡೇ ಅವರು ಹಿಂದಿ ಸಿನಿಮಾ 'ಟೈಗರ್ ಝಿಂದ್ ಹೈ'ನಲ್ಲಿ ನಟಿಸಿದರು. ಇದು ನಟನೆ ಮೇಲೆ ಅವರಿಗಿದ್ದ ಆಸಕ್ತಿ ಎಷ್ಟು ಎಂಬುದನ್ನು ತೋರಿಸುತ್ತದೆ. ಈ ಅನಾರೋಗ್ಯದಲ್ಲಿಯೇ ಹಲವು ಸಭೆ ಸಮಾರಂಭಗಳಲ್ಲಿ ಪಾಲ್ಗೊಳ್ಳುತ್ತಿದ್ದರಲ್ಲದೆ ತಮಗಿರುವ ಖಾಯಿಲೆಯ ಪರಿಚಯವನ್ನು ಮಾಡಿಕೊಡುತ್ತಿದ್ದರು. ಹೀಗೆ ಅನಾರೋಗ್ಯದಲ್ಲೂ ಕಾರ್ಯಶೀಲರಾಗಿದ್ದ ಅವರು ಜೂನ್ 10 ರಂದು ಸಾವಿನ ಮುನ್ಸೂಚನೆಯನ್ನು ನೀಡದೆ ಇಹಲೋಕವನ್ನು ತ್ಯಜಿಸಿ ಕಾನನದಲ್ಲಿ ಲೀನರಾದರು. ತಮ್ಮ ಅಂತ್ಯಕ್ರಿಯೆಯನ್ನು ಯಾವುದೇ ಧಾರ್ಮಿಕ ವಿಧಿ ವಿಧಾನವಿಲ್ಲದೆ ನಡೆಸಬೇಕೆಂಬ ಅವರ ಆಸೆಯಂತೆ ಕುಟುಂಬದವರು ನಡೆಸಿಕೊಟ್ಟರು. ■



downloaded from: www.kpscvaani.com



# ರಂಗಭೂಮಿ ಕಂಡ ಅದ್ಭುತ ನಾಟಕಕಾರ ಡಾ. ಕಾರ್ನಾಡ

ರವಿ ಕುಲಕರ್ಣಿ

**ನಿಸ್ಸಂಶಯವಾಗಿಯೂ ಕನ್ನಡ ರಂಗಭೂಮಿ ಕಂಡ ಅದ್ಭುತ ನಾಟಕಕಾರ ಡಾ. ಗಿರೀಶ ಕಾರ್ನಾಡ. ಹುಟ್ಟಿದ್ದು ಮಹಾರಾಷ್ಟ್ರದಲ್ಲಾದರೂ, ಕನ್ನಡದ ಕುರಿತು ಅಪಾರ ಪ್ರೀತಿ. ಅದು ಅನಾವರಣಗೊಂಡಿದ್ದು ಅವರ ನಾಟಕಗಳ ಮೂಲಕ.**

ನಾಡು ಕಂಡ ಶ್ರೇಷ್ಠ ನಾಟಕಕಾರ ಡಾ.ಕಾರ್ನಾಡರಿಗೆ ಬಾಲ್ಯದಿಂದಲೇ ನಾಟಕದ ಹುಚ್ಚಿತ್ತು. ವೈದ್ಯರಾಗಿದ್ದ ತಂದೆ ಶಿರಸಿಯಲ್ಲಿದ್ದರು. ಅಲ್ಲಿ ನಡೆಯುತ್ತಿದ್ದ ಐತಿಹಾಸಿಕ, ಪೌರಾಣಿಕ ನಾಟಕಗಳು, ಯಕ್ಷಗಾನಗಳನ್ನು ಆಸಕ್ತಿಯಿಂದ ನೋಡುತ್ತಿದ್ದ ಬಾಲಕನಿಗೆ ರಂಗಭೂಮಿಯ ಆರಂಭಿಕ ಪರಿಚಯವಾಗಿತ್ತು. ವೃತ್ತಿ ರಂಗಭೂಮಿಯ ನಾಟಕಗಳು ಬಾಲಕನಲ್ಲಿ ಆಸಕ್ತಿಯ ಬೀಜ ಬಿತ್ತಿದ್ದವು. ವೃತ್ತಿ ಕಂಪನಿಯ ನಾಟಕದ ಲಯ, ವಿಶಿಷ್ಠ ಸಂಭಾಷಣಾ ಶೈಲಿ ಒಂದು ರೀತಿಯಲ್ಲಿ ಬಾಲಕನಿಗೆ ಕಿಕ್ ನೀಡುತ್ತಿದ್ದವು. ಅವರ ತಂದೆ ವರ್ಗಾವಣೆಗೊಂಡು ಧಾರವಾಡಕ್ಕೆ ಬಂದಾಗ ಗಿರೀಶ ಕೂಡಾ ಧಾರವಾಡಕ್ಕೆ ಬಂದರು. ಇಲ್ಲಿನ ಬಾಸೆಲ್ ಮಿಶನ್ ಹೈಸ್ಕೂಲ್ ಮತ್ತು ಕರ್ನಾಟಕ ಕಾಲೇಜಿನಲ್ಲಿ ಅವರಿಗೆ ಕಾವ್ಯದೆಡೆಗೆ ಆಸಕ್ತಿ ಮೂಡಿತ್ತು. ಡಾ. ದ.ರಾ.ಬೇಂದ್ರೆ, ಗೋಪಾಲಕೃಷ್ಣ ಅಡಿಗರ ಪ್ರಭಾವಕ್ಕೆ ಒಳಗಾದರು. ಜೊತೆಗೆ ಡಾ.ವಿ.ಕೃ. ಗೋಕಾಕ ಅವರು ಇಂಗ್ಲೀಷ್ ಕಾವ್ಯದ ಕುರಿತು ಮಾರ್ಗದರ್ಶನ ಮಾಡಿದರು. ಇದೆಲ್ಲಕ್ಕಿಂತ ಹೆಚ್ಚಾಗಿ ಅಧ್ಯಯನದತ್ತ ಹೆಚ್ಚು ಗಮನ ಕೇಂದ್ರಿಕರಿಸಿದ್ದರಿಂದ ಅನ್ಯ ಚಟುವಟಿಕೆಗಳಿಗೆ ಅವರೇ ಅವಕಾಶ ನೀಡಲಿಲ್ಲ. ಅಧ್ಯಯನಕ್ಕೆ ಹೆಚ್ಚು ಮಹತ್ವ ನೀಡಿದ್ದರಿಂದಾಗಿ ರಂಗಭೂಮಿ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಕೊಳ್ಳಲಿಲ್ಲ.

ಕರ್ನಾಟಕ ಕಾಲೇಜಿನಲ್ಲಿ ಪದವಿ ಮುಗಿಸಿ ಎಂ.ಎ. ಮಾಡಲು ಮುಂಬೈಗೆ ತೆರಳಿದರು. ಆಗ ಪ್ರತಿಷ್ಠಿತ ರೋಡ್ಸ್ ಸ್ಕಾಲರಶಿಪ್ ಪಡೆದು ಇಂಗ್ಲೆಂಡ್‌ಗೆ ಪ್ರಯಾಣ ಬೆಳೆಸಿದರು. ಆ ಸಂದರ್ಭದಲ್ಲಿ ಅವರು ವಿಮಾನದ ಮೂಲಕ ಪ್ರಯಾಣಿಸಲಿಲ್ಲ. ಹಡಗಿನಲ್ಲಿ ಪ್ರಯಾಣಿಸಿದರು. ಮೂರರಿಂದ ನಾಲ್ಕು ತಿಂಗಳ ಪ್ರಯಾಣದ ಸಮಯದಲ್ಲಿ ತಲೆಯಲ್ಲಿ ಮೂಡಿದ್ದ 'ಯಯಾತಿ' ನಾಟಕ ಕೃತಿಯಾಗಿ ಹೊರಬಂದಿತ್ತು. ಮುಂದೆ ಅದನ್ನು ಧಾರವಾಡದ ಮನೋಹರ ಗ್ರಂಥಮಾಲೆಗೆ ಕಳಿಸಿದರು. ಅಲ್ಲಿ ಡಾ.ಕೀರ್ತಿನಾಥ ಕುರ್ತಕೋಟಿ ಅದನ್ನು ಪರಿಷ್ಕರಿಸಿದ್ದರು. ಗಿರೀಶ ಮರಳಿ ಬಂದ ಮೇಲೆ ಅದು ಮುದ್ರಣಕ್ಕೆ ಶಿಫಾರಸ್ಸು ಮಾಡಲ್ಪಟ್ಟಿತು. ಇದು ಕಾರ್ನಾಡರ ನಾಟಕ ರಚನೆ ಪ್ರಕ್ರಿಯೆಗೆ ದೊಡ್ಡ ತಿರುವು ನೀಡಿತು. 'ಒಂದು ವೇಳೆ ಮನೋಹರ ಗ್ರಂಥಮಾಲೆ ನನ್ನ ನಾಟಕ ಪ್ರಕಟಿಸದೇ ಇದ್ದರೆ, ನಾನು



ನಾಟಕಕಾರನಾಗುತ್ತಲೇ ಇರಲಿಲ್ಲ' ಎಂದು ಕಾರ್ನಾಡ ಹೇಳಿದ್ದರು. ಹೀಗಾಗಿ ಅವರು ತಮ್ಮ ಎಲ್ಲ ನಾಟಕಗಳನ್ನು ಮನೋಹರ ಗ್ರಂಥಮಾಲೆಗೆ ಮಾತ್ರ ಪ್ರಕಟಣೆಗೆ ನೀಡಿದರು.

ಮದ್ರಾಸ್‌ನಲ್ಲಿ ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್‌ನ ಜನರಲ್ ಮ್ಯಾನೇಜರ್ ಆಗಿ ನೇಮಕವಾದರು. ಅಲ್ಲಿ ನಾಟಕಗಳನ್ನು ಆಡುತ್ತಿದ್ದ 'ಮದ್ರಾಸ್ ಪ್ಲೇಯರ್ಸ್' ತಂಡದ ಒಡನಾಟ ಬಂತು. ಅದರಿಂದಾಗಿ ಇಂಗ್ಲೀಷ್ ನಾಟಕಗಳಲ್ಲಿ ಅಭಿನಯಿಸಿದರು. ಅಲ್ಲಿಂದ ಪೂನಾ ಫಿಲ್ಮ್ ಇನ್‌ಸ್ಟಿಟ್ಯೂಟ್‌ಗೆ ಬಂದ ಮೇಲೆ ನಾಟಕ, ಸಿನಿಮಾ ಹೀಗೆ ಅವರ ಕಾರ್ಯ ವ್ಯಾಪ್ತಿ ವಿಸ್ತಾರವಾಯಿತು.

ಬಳಿಕ ಒಂದರ ನಂತರ ಒಂದು ನಾಟಕಗಳು ಬಂದವು. ಪುರಾಣ, ಇತಿಹಾಸದ ಅಂಗಳದಿಂದ ವಿಷಯ, ವಸ್ತು ಆಯ್ಕೆ ಮಾಡಿಕೊಂಡು ಅದಕ್ಕೊಂದು ಹೊಸ ಆಯಾಮ ನೀಡುತ್ತಿದ್ದುದು ಕಾರ್ನಾಡರ ವಿಶೇಷ. ಉತ್ತರ ಕರ್ನಾಟಕದ ಭಾಷೆ, ಇಲ್ಲಿನ ಅಪರೂಪದ ನುಡಿಗಟ್ಟುಗಳನ್ನು ತಮ್ಮ ನಾಟಕಗಳಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಬಳಸಿಕೊಂಡವರು ಡಾ.ಕಾರ್ನಾಡರು.

ಬಹುತೇಕರ ನಾಟಕಗಳಿಗೆ ಪ್ರಶಸ್ತಿ ಬಂದ ಮೇಲೆ ಅವು ಬೇರೆ ಭಾಷೆಗಳಿಗೆ ಅನುವಾದಗೊಳ್ಳುತ್ತವೆ. ಇದಕ್ಕೆ ಕಾರ್ನಾಡರು ಅಪವಾದ. ಅವರ ಎಲ್ಲ ನಾಟಕಗಳು ಕನ್ನಡದಲ್ಲಿ ಪ್ರಕಟವಾದ ಸ್ವಲ್ಪ ದಿನಗಳಲ್ಲೇ ಬೇರೆ ಭಾಷೆಗಳಲ್ಲಿ ಅನುವಾದಗೊಳ್ಳುತ್ತಿದ್ದವು ಮತ್ತು ಪ್ರದರ್ಶನಗೊಳ್ಳುತ್ತಿದ್ದವು.

'ಜ್ಞಾನಪೀಠ' ಬರುವ ಮುನ್ನವೇ ಕಾರ್ನಾಡರು ರಾಷ್ಟ್ರೀಯ, ಅಂತರಾಷ್ಟ್ರೀಯ ಖ್ಯಾತಿ ಗಳಿಸಿದ್ದರು. ವೃತ್ತಿ ಕಂಪನಿಗಳ ಶೈಲಿಯನ್ನು ಮುರಿದು ಹೊಸ ಅಲೆಯ ನಾಟಕಗಳನ್ನು ರಚಿಸಿ, ರಂಗಭೂಮಿಗೊಂದು ಹೊಸ ಆಯಾಮ ನೀಡಿದ ಮಹತ್ವದ ನಾಟಕಕಾರ ಅವರು. ಸಾಹಿತ್ಯ ಕ್ಷೇತ್ರದಲ್ಲಿ ನಾಟಕಗಳನ್ನು ಮಾತ್ರ ರಚಿಸಿ ಜ್ಞಾನಪೀಠ ಪ್ರಶಸ್ತಿಗೆ ಪುರಸ್ಕೃತರಾದವರಲ್ಲಿ ಕಾರ್ನಾಡರು ಮೊದಲಿಗರು. ಹಾಗಾಗಿ ಅವರಿಗೆ ಸಂದ ಈ ಗೌರವ ಕಾರ್ನಾಡರಿಗೆ ಮಾತ್ರವಾಗಿರದೆ ಅದು ಇಡೀ ಭಾರತೀಯ ರಂಗಭೂಮಿಗೆ ಸಂದ ಗೌರವವಾಗಿತ್ತು. ಅವರು ನೀಡಿದ ಕೊಡುಗೆಗೆ ಕನ್ನಡ ರಂಗಭೂಮಿ ಸೇರಿದಂತೆ ಭಾರತೀಯ ರಂಗಭೂಮಿ ಅವರಿಗೆ ಋಣಿಯಾಗಿರಲೇಬೇಕು.

**ಧಾರವಾಡದ ನಂಟು**

ಧಾರವಾಡ ಪ್ರೀತಿ... ಧಾರವಾಡಕ್ಕೆ ಬರುವುದೆಂದರೆ ಕಾರ್ನಾಡರಿಗೆ ಅತ್ಯಂತ ಖುಷಿಯ ಸಂಗತಿ. ಹುಬ್ಬಳ್ಳಿಗೆ ವಿಮಾನ ಸೌಲಭ್ಯವಿದ್ದರೂ, ಅವರು ಬರುತ್ತಿದ್ದುದು ರಾಣಿ ಚೆನ್ನಮ್ಮ ರೈಲಿನ ಮೂಲಕವೇ. ಬಂದಿಳಿಯುತ್ತಿದ್ದಂತೆ ಆಟೋ ಹತ್ತಿ, ಸಾರಸ್ವತ ಪುರದಲ್ಲಿದ್ದ ತಮ್ಮ ಮನೆಗೆ ಹೋಗುತ್ತಿದ್ದರು. ಮನೆ ಬಿಟ್ಟರೆ ಸೀದಾ ಅವರ ಸವಾರಿ ಸುಭಾಷ್ ರಸ್ತೆಯಲ್ಲಿರುವ ಮನೋಹರ ಗ್ರಂಥಮಾಲಾ ಅಟ್ಟಕ್ಕೆ. ಅಲ್ಲಿ ಸೇರುತ್ತಿದ್ದ ಧಾರವಾಡದ ಸಾಹಿತಿ ಮಿತ್ರರೊಂದಿಗೆ ಚರ್ಚೆ, ಹರಟೆ, ವಾಗ್ವಾದ ಎಲ್ಲವೂ. ಅವರು ಧಾರವಾಡದಲ್ಲಿದ್ದಾಗ ಕೆಲವು ಸಂಜೆ ತಮ್ಮ ಮನೆಯಲ್ಲಿ ಔತಣಕೂಟ ಏರ್ಪಡಿಸಿ ಸ್ನೇಹಿತರು, ಸಾಹಿತಿಗಳು ಅಭಿಮಾನಿಗಳನ್ನು ಅಹ್ವಾನಿಸುತ್ತಿದ್ದರು. ಸಾರಸ್ವತಪುರದ ಗುಡ್ಡದ ಮೇಲೆ, ಸುತ್ತಲೂ ಹಸಿರು ವಾತವರಣವಿದ್ದ ಅವರ ಮನೆಯ ಬಗ್ಗೆ ಕಾರ್ನಾಡರಿಗೆ ಅಪಾರ ಪ್ರೀತಿ. ಹೆಚ್ಚು ಕಡಿಮೆ ಬೆಂಗಳೂರಿನಲ್ಲೇ ಇರತೊಡಗಿದ ಮೇಲೆ ಅನಿವಾರ್ಯವಾಗಿ ಧಾರವಾಡದ ಮನೆಯನ್ನು ಮಾರುವ ನಿರ್ಧಾರಕ್ಕೆ ಬಂದರು. ಆದರೆ ಯಾರೋ ಬಿಲ್ಡರ್ ಮನೆ ಖರೀದಿಸಿ, ಅಪಾರ್ಟಮೆಂಟ್ ಕಟ್ಟಿ, ಮನೆಯ ಮೂಲ ಸೌಂದರ್ಯ ಹಾಳು ಮಾಡುವುದು ಅವರಿಗೆ ಇಷ್ಟವಿರಲಿಲ್ಲ. ಮನೆಯ ವಿನ್ಯಾಸವನ್ನು ಯಥಾವತ್ತಾಗಿ ಕಾಪಾಡಿಕೊಳ್ಳುವ ಭರವಸೆ ನೀಡಿದರೆ ಮಾತ್ರ ಮನೆ ಖರೀದಿ ನೀಡುವ ನಿರ್ಧಾರ ಮಾಡಿದ್ದರು. ಧಾರವಾಡದ ಸಂಗೀತ ಪರಂಪರೆ ಕುರಿತು ಅಪಾರ ಆಸಕ್ತಿ ಹೊಂದಿದ್ದ ಐಎಫ್‌ಎಸ್ ಅಧಿಕಾರಿ ಮಧು ಅಮಿತ್ ಮಾಧುರಿ ಖರೀದಿಸಿದರು. ಕಾರ್ನಾಡರ ಆಸೆಯಂತೆ ಅದರ ಮೂಲಸತ್ವವನ್ನು ಹಾಗೆ ಉಳಿಸಿಕೊಂಡಿದ್ದಾರೆ ಎಂದು ಕಾರ್ನಾಡರ ಒಡನಾಡಿಗಳು ಸಮಾಧಾನ ವ್ಯಕ್ತಪಡಿಸುತ್ತಾರೆ.



downloaded from: www.kpscvaani.com



# ಜಾಗತಿಕ ಮಟ್ಟದ ಅರಿವು ಮೂಡಿಸುವ ದಿನಾಚರಣೆ

ಡಾ|| ಎಸ್.ಎಂ.ತಿಮ್ಮಾಪೂರ

**ವಿಶ್ವ ಜನಸಂಖ್ಯಾ ದಿನವು ಒಂದು ಜಾಗತಿಕ ಮಟ್ಟದ ಅರಿವು ಮೂಡಿಸುವ ಆಂದೋಲನವಾಗಿದ್ದು, ಇದನ್ನು ವಿಶ್ವದಾದ್ಯಂತ ಪ್ರತಿ ವರ್ಷದ ಜುಲೈ 11ರಂದು ಆಚರಿಸಲಾಗುತ್ತದೆ. ವರ್ಷದಿಂದ ವರ್ಷಕ್ಕೆ ಗಂಭೀರ ಸ್ವರೂಪ ಪಡೆಯುತ್ತಿರುವ "ಜನಸಂಖ್ಯಾ ಸ್ಫೋಟ"ಕ್ಕೆ ಕಾರಣ ಹಾಗೂ ಮನುಕುಲದ ಈ ಬೃಹತ್ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಜನರನ್ನು ಒಂದೇ ವೇದಿಕೆಗೆ ಆಹ್ವಾನಿಸುವುದು ಈ ದಿನಾಚರಣೆಯ ಪ್ರಮುಖ ಧ್ಯೇಯವಾಗಿದೆ.**

ಜಾಗತಿಕ ಮಟ್ಟದಲ್ಲಿ ಜನಸಂಖ್ಯಾ ನಿಯಂತ್ರಣ ಕ್ರಾಂತಿಯನ್ನು ಹುಟ್ಟು ಹಾಕಲು ಹಾಗೂ ಗಾಢ ನಿದ್ರೆಯಲ್ಲಿರುವ ಜನರನ್ನು ಬಡಿದೆಬ್ಬಿಸಿ ಅವರ ಸಂಪೂರ್ಣ ಗಮನವನ್ನು ಜನಸಂಖ್ಯಾ ಸ್ಫೋಟದ ಸಮಸ್ಯೆಯ ಕಡೆಗೆ ಹರಿಸುವಂತೆ ಮಾಡುವುದೇ ಈ ದಿನಾಚರಣೆಯ ಪ್ರಮುಖ ಉದ್ದೇಶವಾಗಿದೆ. ಪ್ರತಿ ವರ್ಷದಂತೆ ಈ ವರ್ಷವೂ ಜುಲೈ 11 ಗುರುವಾರದಂದು ವಿಶ್ವದಾದ್ಯಂತ ವಿಶ್ವಜನಸಂಖ್ಯಾ ದಿನಾಚರಣೆಯನ್ನು ಆಚರಿಸಲಾಗುವುದು.

ವಿಶ್ವ ಜನಸಂಖ್ಯಾ ದಿನಾಚರಣೆಯು ಒಂದು ಮಹತ್ವದ ಕಾರ್ಯಕ್ರಮವಾಗಿದ್ದು, ಪ್ರತಿ ವರ್ಷದ ಜುಲೈ 11 ರಂದು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ವಿಶ್ವದಾದ್ಯಂತ ಜನಸಂಖ್ಯಾ ಸಮಸ್ಯೆಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಈ ದಿನಾಚರಣೆಯನ್ನು ಆಚರಿಸಲಾಗುತ್ತದೆ. 1989 ರಲ್ಲಿ ಪ್ರಪ್ರಥಮ ಬಾರಿಗೆ ಸಂಯುಕ್ತ ರಾಷ್ಟ್ರಗಳ ಅಭಿವೃದ್ಧಿ ಕಾರ್ಯಕ್ರಮದ ಆಡಳಿತ ಮಂಡಳಿಯ ವತಿಯಿಂದ ಈ ದಿನವನ್ನು ಆಚರಿಸಲಾಯಿತು. 1987 ರ ಜುಲೈ 11 ರ ಹೊತ್ತಿಗೆ ಜಾಗತಿಕ ಜನಸಂಖ್ಯೆಯು ಸುಮಾರು 500 ಕೋಟಿಯಷ್ಟು ತಲುಪಿದಾಗ ಸಾರ್ವಜನಿಕರ ಕೋರಿಕೆಯ ಮೇರೆಗೆ ಈ ದಿನವನ್ನು ಆಚರಿಸಲು ಪ್ರಾರಂಭಿಸಲಾಯಿತು. 2012 ರಲ್ಲಿ ಜಗತ್ತಿನ ಜನಸಂಖ್ಯೆಯು ಅಂದಾಜು 7025,071,966ರಷ್ಟು ತಲುಪಿದಾಗ "ಸಂತಾನೋತ್ಪತ್ತಿ ಆರೋಗ್ಯ ಸೇವೆಗಳ ಸಾರ್ವತ್ರಿಕ ಲಭ್ಯತೆ" ಎಂಬ

ವಿಷಯದೊಂದಿಗೆ ಜಗತ್ತಿನಾದ್ಯಂತ ಈ ದಿನವನ್ನು ಆಚರಿಸಲಾಯಿತು.

ಚಿಕ್ಕ ಹಾಗೂ ಆರೋಗ್ಯವಂತ ಸಮಾಜದ ನಿರ್ಮಾಣಕ್ಕಾಗಿ ಹಾಗೂ ಜನರ ಸುಸ್ಥಿರ ಭವಿಷ್ಯಕ್ಕಾಗಿ ಪ್ರಾಧಿಕಾರದಿಂದ ದೊಡ್ಡ ಹೆಜ್ಜೆಯನ್ನಿಡಲಾಯಿತು. ಸಂತಾನೋತ್ಪತ್ತಿ ಆರೋಗ್ಯ ಸೇವೆಗಳ ಬೇಡಿಕೆಗಳನ್ನು ಹಾಗೂ ಪೂರೈಕೆಗಳನ್ನು ಈಡೇರಿಸುವ ಸಲುವಾಗಿ ಮಹತ್ವದ ಹೂಡಿಕೆಗಳನ್ನು ಮಾಡಲಾಯಿತು. ಜನಸಂಖ್ಯೆಯನ್ನು ಕಡಿಮೆ ಮಾಡುವುದರ ಮೂಲಕ ಸಂತಾನೋತ್ಪತ್ತಿ ಆರೋಗ್ಯವನ್ನು ಹೆಚ್ಚಿಸಲು ಹಾಗೂ ಸಾಮಾಜಿಕ ಬಡತನವನ್ನು ನಿವಾರಿಸುವ ನಿಟ್ಟಿನಲ್ಲಿ ಮಹತ್ವದ ಕ್ರಮಗಳನ್ನು ಕೈಗೊಳ್ಳಲಾಯಿತು.

2011 ರಲ್ಲಿ ವಿಶ್ವದ ಜನಸಂಖ್ಯೆಯು ಸುಮಾರು 700 ಕೋಟಿಯಷ್ಟು ತಲುಪಿದಾಗ ಅಭಿವೃದ್ಧಿಯು ಒಂದು ಬೃಹತ್ ಸವಾಲಾಗಿ ಪರಿಣಮಿಸಿತ್ತು. ಸಾರ್ವಜನಿಕರಲ್ಲಿ ಜನಸಂಖ್ಯಾ ಸ್ಫೋಟದ ಕುರಿತು ಅರಿವು ಮೂಡಿಸಲು ಹಾಗೂ ಜನಸಂಖ್ಯಾ ಸ್ಫೋಟದ ಸಮಸ್ಯೆಗೆ ನೈಜ ಪರಿಹಾರ ಹುಡುಕಲು 1989 ರಲ್ಲಿ ಕೈಗೊಳ್ಳಲಾದ ಸಂಯುಕ್ತ ರಾಷ್ಟ್ರಗಳ ಅಭಿವೃದ್ಧಿ ಕಾರ್ಯಕ್ರಮದ ಆಡಳಿತ ಮಂಡಳಿಯ ನಿರ್ಧಾರಗಳ ಅನ್ವಯ ಪ್ರತಿ ವರ್ಷದ ಜುಲೈ 11 ನ್ನು ಜಗತ್ತಿನಾದ್ಯಂತ "ವಿಶ್ವ ಜನಸಂಖ್ಯಾ ದಿನ"ವನ್ನಾಗಿ ಆಚರಿಸಲು ತೀರ್ಮಾನಿಸಲಾಯಿತು. ಆ ಮೂಲಕ ಜನಸಂಖ್ಯಾ ಹೆಚ್ಚಳದ ಸಮಸ್ಯೆಗಳ ಕಡೆಗೆ ಸಾರ್ವಜನಿಕರ ಗಮನ ಸೆಳೆಯಲು ಪ್ರಾರಂಭಿಸಲಾಯಿತು.

ಭಾರತದಲ್ಲಿ 1951 ರಿಂದ 1981 ರ ಅವಧಿಯಲ್ಲಿ ಜನಸಂಖ್ಯೆಯು ಗಣನೀಯವಾಗಿ ಹೆಚ್ಚಾಯಿತು. 1951 ರಲ್ಲಿ 36 ಕೋಟಿ ಇದ್ದ ಜನಸಂಖ್ಯೆಯು 1981 ರ ಹೊತ್ತಿಗೆ ಸುಮಾರು 70 ಕೋಟಿಗೆ ತಲುಪಿತ್ತು. ಅಂದರೆ ಈ 30 ವರ್ಷದ ಅವಧಿಯಲ್ಲಿ ಜನಸಂಖ್ಯೆಯು ಸುಮಾರು 34 ಕೋಟಿಯಷ್ಟು ಹೆಚ್ಚಾಗಿತ್ತು. ಜನಸಂಖ್ಯಾ ಅಂಕಿಅಂಶಗಳ ಇತಿಹಾಸದಲ್ಲಿ ಈ ಹೆಚ್ಚಳವು ಅತ್ಯಂತ ಗಣನೀಯ ಹೆಚ್ಚಳವಾಗಿದೆ. ಅದೇ ರೀತಿ ಜಗತ್ತಿನ ಜನಸಂಖ್ಯೆಯು ಪ್ರತಿ ವರ್ಷವೂ ಅಂದಾಜು 100 ಮಿಲಿಯನ್ ರಷ್ಟು ಹೆಚ್ಚಳವಾಗುತ್ತಿದೆ. ಫೆಬ್ರವರಿ 6ರ 2016ರಂದು ವಿಶ್ವದ





ಜನಸಂಖ್ಯಾ ಸ್ಫೋಟವನ್ನು ನಿಯಂತ್ರಿಸುವುದು ಕೇವಲ ಸರಕಾರ ಅಥವಾ ಸರಕಾರ ರೂಪಿಸುವ ಕಾನೂನು ಅಥವಾ ನಿಯಮಗಳಿಂದ ಸಾಧ್ಯವಾಗದು. ಸಾರ್ವಜನಿಕರು ಈ ನಿಟ್ಟಿನಲ್ಲಿ ತಮ್ಮ ಜವಾಬ್ದಾರಿಗಳನ್ನು ಅರಿತು, ಜನಸಂಖ್ಯಾ ಸ್ಫೋಟದ ನಿಯಂತ್ರಣದಲ್ಲಿ ಸರಕಾರದೊಂದಿಗೆ ಸಕ್ರಿಯವಾಗಿ ಕೈಜೋಡಿಸಿದಾಗ ಮಾತ್ರ "ವಿಶ್ವ ಜನಸಂಖ್ಯಾ ದಿನಾಚರಣೆ"ಗೆ ಒಂದು ನಿಜವಾದ ಅರ್ಥಕೊಟ್ಟಂತಾಗುತ್ತದೆ.

ಜನಸಂಖ್ಯೆಯು 7,400,000,000ರಷ್ಟಿತ್ತು. ಹಾಗೂ ಎಪ್ರಿಲ್ 24 ರ 2017ರ ಹೊತ್ತಿಗೆ ಅದು 7,500,000,000ರಷ್ಟು ಹೆಚ್ಚಾಗಿತ್ತು. ಆಧುನಿಕ ಆರೋಗ್ಯ ಮತ್ತು ವೈದ್ಯಕೀಯ ವ್ಯವಸ್ಥೆಗಳಿಂದಾಗಿ ಭಾರತದಲ್ಲಿ ಮರಣ ಪ್ರಮಾಣವು ನಿಯಂತ್ರಣದಲ್ಲಿದ್ದು, ಅದು ಪ್ರತಿ ಸಾವಿರ ಜನರಿಗೆ 15 ಕ್ಕೆ ಇಳಿದಿತ್ತು. ಆದರೆ ಜನನ ಪ್ರಮಾಣದಲ್ಲಿ ಯಾವುದೇ ಗಣನೀಯ ಇಳಿಕೆ ಆಗಿರಲಿಲ್ಲ. ಈ ಕಾರಣದಿಂದಾಗಿಯೇ 1951 ರಿಂದ 1981 ರ ಅವಧಿಯನ್ನು "ಜನಸಂಖ್ಯಾ ಸ್ಫೋಟ"ದ ಅವಧಿ (PERIOD OF POPULATION EXPLOSION) ಎಂದು ಕರೆಯುತ್ತಾರೆ.

**ಭಾರತದಲ್ಲಿ ಜನಸಂಖ್ಯಾ ಸ್ಫೋಟಕ್ಕೆ ಕಾರಣಗಳು:**

**ಉಷ್ಣ ವಾತಾವರಣ:** ಭಾರತದಲ್ಲಿ ಜನಸಂಖ್ಯಾ ಸ್ಫೋಟಕ್ಕೆ ಪ್ರಮುಖ ಕಾರಣಗಳಲ್ಲಿ ಉಷ್ಣ ವಾತಾವರಣವೂ ಒಂದು ಕಾರಣವಾಗಿದೆ. ಉಷ್ಣ ವಾತಾವರಣದಿಂದಾಗಿ ಹುಡುಗ ಹಾಗೂ ಹುಡುಗಿಯರಲ್ಲಿ ಪ್ರಬುದ್ಧತೆಯು ಬೇಗನೇ ಕಂಡು ಬರುವುದರಿಂದ ಅವರು ಸಣ್ಣ ವಯಸ್ಸಿನಲ್ಲಿಯೇ ಮಗುವಿಗೆ ಜನ್ಮ ನೀಡುತ್ತಾರೆ. ಇದು ಜನಸಂಖ್ಯೆ ಹೆಚ್ಚಳಕ್ಕೆ ಕಾರಣವಾಗಿದೆ.

**ಬಾಲ್ಯ ವಿವಾಹ ಹಾಗೂ ಬಹು ವಿವಾಹ ಪದ್ಧತಿ:** ಭಾರತದಲ್ಲಿ ಬಾಲ್ಯ ವಿವಾಹ ಹಾಗೂ ಬಹು ವಿವಾಹ ಪದ್ಧತಿಗಳು



downloaded from: www.kpscvaani.com

**ಭಾರತದಲ್ಲಿ 1951 ರಿಂದ 1981 ರ ಅವಧಿಯಲ್ಲಿ ಜನಸಂಖ್ಯೆಯು ಗಣನೀಯವಾಗಿ ಹೆಚ್ಚಾಯಿತು. 1951 ರಲ್ಲಿ 36 ಕೋಟಿ ಇದ್ದ ಜನಸಂಖ್ಯೆಯು 1981 ರ ಹೊತ್ತಿಗೆ ಸುಮಾರು 70 ಕೋಟಿಗೆ ತಲುಪಿತ್ತು. ಅಂದರೆ ಈ 30 ವರ್ಷದ ಅವಧಿಯಲ್ಲಿ ಜನಸಂಖ್ಯೆಯು ಸುಮಾರು 34 ಕೋಟಿಯಷ್ಟು ಹೆಚ್ಚಾಗಿತ್ತು.**



ಸಾಂಪ್ರದಾಯಿಕವಾಗಿ ಬಹಳ ದಿನಗಳಿಂದ ನಡೆದುಕೊಂಡು ಬಂದಿವೆ. ಸುಮಾರು 80% ಹುಡುಗಿಯರು ತಮ್ಮ 15–20 ವರ್ಷದ ಯುವಾವಸ್ಥೆಯಲ್ಲಿಯೇ ಮದುವೆಯಾಗುತ್ತಾರೆ. ಆದ್ದರಿಂದ ದೀರ್ಘ ವೈವಾಹಿಕ ಜೀವನವು ಹೆಚ್ಚುವರಿ ಮಕ್ಕಳನ್ನು ಹೆರುವುದಕ್ಕೆ ಕಾರಣವಾಗುತ್ತದೆ. ಬಹು ವಿವಾಹ ಪದ್ಧತಿಯ ಸಂಪ್ರದಾಯವೂ ಕೂಡ ಹೆಚ್ಚು ಮಕ್ಕಳನ್ನು ಹೆರಲು ಒಂದು ಕಾರಣವಾಗಿದೆ. ಇದರ ಹೊರತಾಗಿ ವಿಧವಾ ವಿವಾಹಗಳೂ ಕೂಡ ಹೆಚ್ಚಾಗಿ ನಡೆಯುತ್ತಿರುವುದರಿಂದ ಇದೂ ಕೂಡ ಸ್ವಲ್ಪ ಮಟ್ಟದಲ್ಲಿ ಹೆಚ್ಚು ಮಕ್ಕಳನ್ನು ಹೆರಲು ಕಾರಣವಾಗಿದೆ.

**ಧಾರ್ಮಿಕ ಮೂಢನಂಬಿಕೆಗಳು:** "ಗಂಡು ಮಕ್ಕಳಿಲ್ಲದಿದ್ದರೆ ಧಾರ್ಮಿಕ ಕಾರ್ಯಗಳನ್ನು ಮಾಡುವವರು ಯಾರು" ಎಂಬ ನಮ್ಮ ಧಾರ್ಮಿಕ ಗುರುಗಳ ಮಾತಿಗೆ ಹೆದರಿ ಗಂಡು ಮಗು ಹುಟ್ಟುವವರೆಗೂ ಒಂದಾದ ಮೇಲೊಂದರಂತೆ ಮಕ್ಕಳನ್ನು ಹೆರುತ್ತಾ ಹೋಗುತ್ತಾರೆ. ಅದೇ ರೀತಿ ಮುಸ್ಲಿಮ್ ಸಮುದಾಯದಲ್ಲಿ ಹೆಣ್ಣು ಮಗು ಮತ್ತು ಗಂಡು ಮಗು ಎರಡೂ ಕೂಡ ಅಲ್ಲಾನ ಕಾಣಿಕೆ ಎಂಬ ನಂಬಿಕೆ ಇದ್ದು, ಯಾವುದೇ ಕುಟುಂಬ ಕಲ್ಯಾಣ ವಿಧಾನದಿಂದ ಮಕ್ಕಳ ಜನನವನ್ನು ತಡೆಯುವುದು ಪಾಪದ ಕೆಲಸ ಎಂದು ನಂಬಿರುವುದರಿಂದ ಜನಸಂಖ್ಯೆಯು ಸತತವಾಗಿ ಹೆಚ್ಚುತಲಿದೆ.

**ಅನಕ್ಷರತೆ ಹಾಗೂ ತಿಳುವಳಿಕೆಯ ಕೊರತೆ:** ಭಾರತದಲ್ಲಿ ಸುಮಾರು 36% ಪುರುಷರು ಹಾಗೂ 61% ಮಹಿಳೆಯರು ಅನಕ್ಷರಸ್ಥರಾಗಿದ್ದಾರೆ. ಅವರಿಗೆ ಕುಟುಂಬ ಕಲ್ಯಾಣ ವಿಧಾನಗಳ ಬಗ್ಗೆ ಪೂರ್ಣಜ್ಞಾನವಾಗಲಿ ಅಥವಾ ಹೆಚ್ಚು ಮಕ್ಕಳನ್ನು ಹೆರುವುದರಿಂದ ಆಗುವ ಸಮಸ್ಯೆಗಳ ಕುರಿತಾಗಲಿ ಯಾವುದೇ ತಿಳುವಳಿಕೆ ಇಲ್ಲದಂತಾಗಿದೆ. ಇದೂ ಕೂಡ ಜನಸಂಖ್ಯಾ ಸ್ಫೋಟಕ್ಕೆ ಪ್ರಮುಖ ಕಾರಣವಾಗಿದೆ.

**ಬಡತನ:** ಬಡತನದಿಂದಾಗಿ ನಮ್ಮ ದೇಶದ ಜನಸಂಖ್ಯೆಯು ಹೆಚ್ಚುತ್ತಲಿದೆ. ಜನರು ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಾರೆ ಹಾಗೂ ಮಕ್ಕಳನ್ನು ಹಣಗಳಿಸುವ ಸಾಧನವಾಗಿ ಬಳಸುತ್ತಾರೆ. ಆದ್ದರಿಂದ ಹೆಚ್ಚು ಮಕ್ಕಳನ್ನು ಹೆರಲು ಬಯಸುತ್ತಾರೆ.

**ಜನನ ಪ್ರಮಾಣ:** ಜಗತ್ತಿನ ಇತರ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲಿ ಮದುವೆಯಾಗುವ ಸರಾಸರಿ ವಯಸ್ಸು ಅತ್ಯಂತ ಕಡಿಮೆ ಇದೆ. ಇದು ಕೂಡ ಜನಸಂಖ್ಯಾ ಸ್ಫೋಟಕ್ಕೆ ಪ್ರಮುಖ ಕಾರಣವಾಗಿದೆ.

**ಮರಣ ಪ್ರಮಾಣ:** ಭಾರತದಲ್ಲಿ 1900 ರಿಂದ 1910 ರ ವರೆಗೆ ಮರಣ ಪ್ರಮಾಣವು ಪ್ರತಿ ಸಾವಿರಕ್ಕೆ 35–50 ರಷ್ಟಿದ್ದದ್ದು ಈಗ ಸಾವಿರಕ್ಕೆ ಕೇವಲ 7–8 ರಷ್ಟಾಗಿದೆ. ಮರಣ ಪ್ರಮಾಣದಲ್ಲಿ ಆಗಿರುವ ಈ ಗಣನೀಯ ಇಳಿಕೆಗೆ ಕಾರಣಗಳು–ಆರೋಗ್ಯಯುತ ಆಹಾರ, ಶುದ್ಧ ಕುಡಿಯುವ ನೀರು, ಆಸ್ಪತ್ರೆಗಳ ವ್ಯವಸ್ಥೆ, ಉತ್ತಮ ಸ್ವಚ್ಛತೆ, ಕೈಗೆಟುಕುವುದರದಲ್ಲಿ ವೈದ್ಯಕೀಯ ಸೇವೆಗಳ ಲಭ್ಯತೆ, ಹಾಗೂ ಅಪೌಷ್ಟಿಕತೆ, ನ್ಯೂಮೋನಿಯಾ, ಕಾಲರಾ ಇತ್ಯಾದಿ ಸಾಂಕ್ರಾಮಿಕ ರೋಗಗಳ ನಿಯಂತ್ರಣ. ಇದರೊಂದಿಗೆ ಮಕ್ಕಳ ಮರಣ ಪ್ರಮಾಣವು 1916 ರಿಂದ 1920 ರಲ್ಲಿ ಪ್ರತಿ ಸಾವಿರಕ್ಕೆ 218 ಇದ್ದದ್ದು ಈಗ 69ಕ್ಕೆ ಇಳಿದಿದೆ. ಇದೂ ಕೂಡ ಜನಸಂಖ್ಯಾ ಸ್ಫೋಟಕ್ಕೆ ಕಾರಣವಾಗಿದೆ.

**ಕುಟುಂಬ ಕಲ್ಯಾಣ ವಿಧಾನಗಳ ಕುರಿತು ತಪ್ಪು ಕಲ್ಪನೆಗಳು:**

ಅನಕ್ಷರಸ್ಥ ಜನರು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರಲ್ಲಿ ಕುಟುಂಬ ಕಲ್ಯಾಣ ಶಸ್ತ್ರಚಿಕಿತ್ಸೆಯ ಅದರಲ್ಲೂ ಪುರುಷ ಸಂತಾನ ಹರಣ ಶಸ್ತ್ರಚಿಕಿತ್ಸೆ (ವ್ಯಾಸೆಕ್ಟಮಿ) ಕುರಿತು ಕೆಲವು ತಪ್ಪು ಕಲ್ಪನೆಗಳು ಇವೆ. ಉದಾ: ವ್ಯಾಸೆಕ್ಟಮಿ ನಂತರ ಪುರುಷತ್ವ ಹೊರಟು ಹೋಗುತ್ತದೆ, ಅಶಕ್ತತೆ ಬರುತ್ತದೆ ಇವೇ ಮೊದಲಾದ ತಪ್ಪು ಕಲ್ಪನೆಗಳು ಇರುವುದರಿಂದ ಪುರುಷರು



ವ್ಯಾಸೆಕ್ಟಮಿ ಮಾಡಿಸಿಕೊಳ್ಳಲು ಮುಂದೆ ಬರುತ್ತಿಲ್ಲ. ಸ್ತ್ರೀಯರೂ ಕೂಡ ಅತ್ಯಂತ ಕಡಿಮೆ ದರದ ಹಾಗೂ ಸರಳ ಕುಟುಂಬ ಕಲ್ಯಾಣ ವಿಧಾನಗಳನ್ನೂ ಅನುಸರಿಸಲು ಒಲವು ತೋರದಿರುವುದೂ ಕೂಡ ಜನಸಂಖ್ಯಾ ಸ್ಫೋಟಕ್ಕೆ ಕಾರಣವಾಗಿದೆ.

**ವಲಸೆಗಾರರ ಆಗಮನ:**

ಸತತವಾಗಿ ವಲಸೆಗಾರರ ಆಗಮನದಿಂದ ಭಾರತದ ಜನಸಂಖ್ಯೆಯು ಗಣನೀಯವಾಗಿ ಹೆಚ್ಚಾಯಿತು. ಭಾರತ ಹಾಗೂ ಪಾಕಿಸ್ತಾನ ದೇಶಗಳ ವಿಂಗಡನೆಯಾದಾಗ 1947 ರಲ್ಲಿ 1 ಕೋಟಿಗಿಂತಲೂ ಹೆಚ್ಚು ವಲಸೆಗಾರರು ಭಾರತಕ್ಕೆ ಬಂದರು. ಅದರಂತೆ 1962 ರಲ್ಲಿ ಚೈನಾ ದೇಶದ ಮೇಲೆ ದಾಳಿಯಾದಾಗ ಹೆಚ್ಚು ಸಂಖ್ಯೆಯ ಟಿಬೆಟಿನ ವಲಸೆಗಾರರು ಭಾರತಕ್ಕೆ ಬಂದರು. 1971 ರಲ್ಲಿಯೂ ಸಹ 1 ಕೋಟಿಗಿಂತಲೂ ಅಧಿಕ ಬಾಂಗ್ಲಾದೇಶದ ವಲಸೆಗಾರರು ಭಾರತಕ್ಕೆ ವಲಸೆ ಬಂದರು. ಈ ಸಮಸ್ಯೆಯು ಇನ್ನೂ ಕೂಡ ಮುಂದುವರೆದಿದೆ. ಇದರ ಹೊರತಾಗಿ ನೇಪಾಳಿಗರ ಸತತ ಆಗಮನವೂ ಮುಂದುವರೆದಿದೆ. 5 ಲಕ್ಷಕ್ಕಿಂತ ಹೆಚ್ಚು ತಮಿಳು ವಲಸೆಗಾರರು ಶ್ರೀಲಂಕಾ ಸಮಸ್ಯೆಯಿಂದಾಗಿ ಭಾರತಕ್ಕೆ ವಲಸೆ ಬಂದರು. ಈ ಎಲ್ಲಾ ಕಾರಣಗಳಿಂದ ಜನಸಂಖ್ಯಾ ಸ್ಫೋಟಕ್ಕೆ ಕಾರಣವಾಯಿತು.

ಸಂತಾನೋತ್ಪತ್ತಿ ಆರೋಗ್ಯ ಸಮಸ್ಯೆಗಳು ಗರ್ಭಿಣಿಯರ ಅನಾರೋಗ್ಯ ಹಾಗೂ ಸಾವು–ನೋವುಗಳಿಗೆ ಪ್ರಮುಖ ಕಾರಣಗಳಾಗಿರುವುದರಿಂದ ಸಮಾಜದ ಜನರ ಸಂತಾನೋತ್ಪತ್ತಿ ಆರೋಗ್ಯ ಸಮಸ್ಯೆಗಳ ಕಡೆಗೆ ಹೆಚ್ಚಿನ ಗಮನವನ್ನು ನೀಡುವುದು ಸಂಯುಕ್ತ ರಾಷ್ಟ್ರಗಳ ಅಭಿವೃದ್ಧಿ ಕಾರ್ಯಕ್ರಮದ ಆಡಳಿತ ಮಂಡಳಿಯ ಗುರಿಯಾಗಿದೆ.

ಪ್ರತಿನಿತ್ಯ ಸುಮಾರು 800 ಮಹಿಳೆಯರು ಮಗುವಿಗೆ ಜನ್ಮ ನೀಡುವ ಸಂದರ್ಭದಲ್ಲಿ (ಹೆರಿಗೆ ಸಂದರ್ಭದಲ್ಲಿ) ಸಾವನ್ನಪ್ಪುತ್ತಿದ್ದಾರೆ. ಪ್ರತಿ ವರ್ಷ ಆಚರಿಸಲ್ಪಡುವ ವಿಶ್ವ ಜನಸಂಖ್ಯಾ ದಿನದ ಅಭಿಯಾನವು ಜಗತ್ತಿನಾದ್ಯಂತ ಸಂತಾನೋತ್ಪತ್ತಿ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಯೋಜನೆಯ ಕುರಿತು ಜನರ ಜ್ಞಾನ ಹಾಗೂ ಕೌಶಲ್ಯಗಳನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ.

ಅಂದಾಜು 1.8 ಬಿಲಿಯನ್ (180 ಕೋಟಿ) ಯಷ್ಟು ಯುವಜನತೆ ತಮ್ಮ ಸಂತಾನೋತ್ಪತ್ತಿ ವಯಸ್ಸನ್ನು ಪ್ರವೇಶಿಸುತ್ತಿದ್ದಾರೆ ಹಾಗೂ ಸಂತಾನೋತ್ಪತ್ತಿ ಆರೋಗ್ಯದ ಪ್ರಾಥಮಿಕ ಹಂತದೆಡೆಗೆ ಇವರ ಗಮನ ಸೆಳೆಯುವುದು ಅತ್ಯಂತ ಪ್ರಮುಖವಾಗಿದೆ. ಲಭ್ಯವಿರುವ ಅಂಕಿ–ಅಂಶಗಳ ಪ್ರಕಾರ 2014 ರ ಜನವರಿ 1ರಂದು ವಿಶ್ವದ ಜನಸಂಖ್ಯೆಯು 7137,661,030ರಷ್ಟು ತಲುಪಿತ್ತು. ಜನರಲ್ಲಿ ಈ ವಾಸ್ತವಾಂಶದ ಅರಿವು ಮೂಡಿಸುವ ಉದ್ದೇಶದಿಂದ ಸಾಕಷ್ಟು ಚಟುವಟಿಕೆ ಹಾಗೂ ಕಾರ್ಯಕ್ರಮಗಳನ್ನು ಯೋಜಿಸುವುದರ ಮೂಲಕ ಪ್ರತಿವರ್ಷವೂ ವಿಶ್ವ ಜನಸಂಖ್ಯಾ ದಿನವನ್ನು ಆಚರಿಸುವ ಮೂಲಕ ಜನರಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತದೆ.

15 ರಿಂದ 19 ವರ್ಷದೊಳಗಿನ ಯುವ ಜನರಲ್ಲಿ ಲೈಂಗಿಕತೆಗೆ ಸಂಬಂಧಿಸಿದ ಸಮಸ್ಯೆಗಳನ್ನು ನಿವಾರಿಸುವುದು ಅತ್ಯಂತ ಪ್ರಮುಖವಾಗಿದೆ. ಏಕೆಂದರೆ ಈ ವಯಸ್ಸಿನ ಸುಮಾರು 15 ಮಿಲಿಯನ್ (150 ಲಕ್ಷ) ಮಹಿಳೆಯರು ಪ್ರತಿ ವರ್ಷವೂ ಮಗುವಿಗೆ ಜನ್ಮ ನೀಡುತ್ತಿದ್ದಾರೆ ಹಾಗೂ ಸುಮಾರು 40 ಲಕ್ಷ ಮಹಿಳೆಯರು ಗರ್ಭಪಾತ ಮಾಡಿಸಿಕೊಳ್ಳುತ್ತಿದ್ದಾರೆ.

ಜನಸಂಖ್ಯಾ ಸ್ಫೋಟದ ಸಮಸ್ಯೆಗಳನ್ನು ಹತ್ತಿಕ್ಕುವ ಸಲುವಾಗಿ ಕೈಜೋಡಿಸುವ ನಿಟ್ಟಿನಲ್ಲಿ ಕೂಡಿ ಕೆಲಸ ಮಾಡಲು ಸಮುದಾಯದ ಜನರ ಗಮನ ಸೆಳೆಯಲು ಜಾಗತಿಕ ಮಟ್ಟದಲ್ಲಿ ವಿವಿಧ ಆರೋಗ್ಯ ಸಂಸ್ಥೆಗಳು ಮತ್ತು ಸರ್ಕಾರದ ವತಿಯಿಂದ ಚರ್ಚಾಕೂಟ, ಶೈಕ್ಷಣಿಕ ಸ್ಪರ್ಧಾ ಚಟುವಟಿಕೆಗಳು, ಭಿತ್ತಿ ಪತ್ರಗಳ ವಿತರಣೆ, ಚಿತ್ರಕಲಾ ಸ್ಪರ್ಧೆ, ಘೋಷವಾಕ್ಯಗಳು, ಸಂವಾದಗಳು, ಜನಸಂಖ್ಯಾ ಸಂಬಂಧಿತ ಕಾರ್ಯಕ್ರಮಗಳನ್ನು ರೇಡಿಯೋ ಹಾಗೂ ದೂರದರ್ಶನದಲ್ಲಿ ಪ್ರಸಾರ ಮಾಡುವುದು ಇವೇ ಮುಂತಾದ ಕಾರ್ಯಕ್ರಮಗಳನ್ನು ಹಾಗೂ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರ ಮೂಲಕ ವಿಶ್ವ ಜನಸಂಖ್ಯಾ ದಿನವನ್ನು ಆಚರಿಸಲಾಗುತ್ತದೆ.

ಜನಸಂಖ್ಯೆ ಏರಿದಷ್ಟು ಸಮಸ್ಯೆ ಹೆಚ್ಚಾಗುತ್ತಲೇ ಹೋಗುತ್ತದೆ. ಹಿಂದಿನ ಕಾಲದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಸಂಪನ್ಮೂಲವಿರುತಿತ್ತು. ಆದರೆ ಇಂದಿನ ದಿನಗಳಲ್ಲಿ ಏರುತ್ತಿರುವ ಜನಸಂಖ್ಯೆಯಿಂದ ಸಂಪನ್ಮೂಲದ ಕೊರತೆ ಉಂಟಾಗುತ್ತಿದ್ದು, ಇದು ದೇಶದ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತದೆ. ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳು ಹೆಚ್ಚಾಗುತ್ತವೆ. ಬಡತನ, ನಿರುದ್ಯೋಗ ಸಮಸ್ಯೆಗಳು ಉಲ್ಬಣಗೊಳ್ಳುತ್ತದೆ. ಜನಸಂಖ್ಯೆ ವೃದ್ಧಿಯಲ್ಲಿ ಸ್ಥಿರತೆಯನ್ನು ಸಾಧಿಸದಿದ್ದಲ್ಲಿ ದೇಶದ ಅಭಿವೃದ್ಧಿ ಕಾರ್ಯಗಳು ಯಶಸ್ವಿಯಾಗುವುದಿಲ್ಲ. ದೇಶ ಸಂಪದ್ಭರಿತ ದೇಶವಾಗಬೇಕಾದರೆ ಜನಸಂಖ್ಯೆ ನಿಯಂತ್ರಣ ಅತ್ಯಗತ್ಯ. ಹಾಗಾಗಿ ಜನಸಂಖ್ಯೆಯನ್ನು ನಿಯಂತ್ರಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

ಜನಸಂಖ್ಯಾ ಸ್ಫೋಟವನ್ನು ನಿಯಂತ್ರಿಸುವುದು ಕೇವಲ ಸರಕಾರ ಅಥವಾ ಸರಕಾರ ರೂಪಿಸುವ ಕಾನೂನು ಅಥವಾ ನಿಯಮಗಳಿಂದ ಸಾಧ್ಯವಾಗದು. ಸಾರ್ವಜನಿಕರು ಈ ನಿಟ್ಟಿನಲ್ಲಿ ತಮ್ಮ ಜವಾಬ್ದಾರಿಗಳನ್ನು ಅರಿತು, ಜನಸಂಖ್ಯಾ ಸ್ಫೋಟದ ನಿಯಂತ್ರಣದಲ್ಲಿ ಸರಕಾರದೊಂದಿಗೆ ಸಕ್ರಿಯವಾಗಿ ಕೈಜೋಡಿಸಿದಾಗ ಮಾತ್ರ "ವಿಶ್ವ ಜನಸಂಖ್ಯಾ ದಿನಾಚರಣೆ"ಗೆ ಒಂದು ನಿಜವಾದ ಅರ್ಥಕೊಟ್ಟಂತಾಗುತ್ತದೆ. ■



ನಾಡು ಕಟ್ಟಿದ

# ನಾಲ್ವಡಿ ಕೃಷ್ಣರಾಜ ಒಡೆಯರ್



ಬನ್ನೂರು ಕೆ. ರಾಜು

1910ರ ದಶಕ. ಆಳರಸರ ದರ್ಬಾರಿನಲ್ಲಿ "ಮೈಸೂರು ದಸರಾ" ವೈಭವದಿಂದ ನಡೆಯುತ್ತಿದ್ದ ಕಾಲವದು. ಆಗ ನವರಾತ್ರಿಯ ಸಂದರ್ಭದಲ್ಲಿ ಯೂರೋಪಿಯನ್ನರಿಗಾಗಿ ವಿಶೇಷ ದರ್ಬಾರು ನಡೆಯುತ್ತಿತ್ತು. ದಿವಾನರಾದಿಯಾಗಿ ಅಲ್ಲಿ ಎಲ್ಲಾ ಗಣ್ಯರೂ ಕೆಳಗೆ ಕೂರುವುದು ಮತ್ತು ಯೂರೋಪಿಯನ್ನರು ಹಾಗೂ ಅತಿಥಿಗಳು ಮಾತ್ರ ವಿಶೇಷವಾದ ಕುರ್ಚಿಯ ಮೇಲೆ ಕೂರುವುದು ಬಹುಕಾಲದಿಂದ ನಡೆದು ಬಂದ ಪದ್ಧತಿಯಾಗಿತ್ತು. ಆದರೆ ಅಂದಿನ ಮಹಾರಾಜರಿಗೆ ಈ ತಾರತಮ್ಯತೆ ಸರಿ ಎನಿಸಲಿಲ್ಲ. ತಕ್ಷಣವೇ ತಲೆತಲಾಂತರದಿಂದ ನಡೆದು ಬಂದಿದ್ದ ಈ ತಾರತಮ್ಯತೆಗೆ ತಿಲಾಂಜಲಿಯಿತ್ತು ಎಲ್ಲರೂ ಸಮಾನವಾಗಿ ಕುಳಿತುಕೊಳ್ಳುವಂತಹ ವ್ಯವಸ್ಥೆಗೆ 1910ರಲ್ಲಿ ನಾಂದಿ ಹಾಡಿದರು. ಆ ಕಾಲದಲ್ಲಿದು ಬಹುದೊಡ್ಡ ವಿಷಯವಾಗಿ ಮೈಸೂರಿಗೆ ಮೈಸೂರೇ ಇಂಥ ಸಮಾನ ನೀತಿಜ್ಞ ಮಹಾರಾಜರ ಸಮಾನ ಸಮಾಜದ ಪ್ರಗತಿಪರ ದೃಷ್ಟಿಯನ್ನು ಮನಸಾರೆ ಮೆಚ್ಚಿ ಕೊಂಡಾಡಿತ್ತು.



downloaded from: www.kpscvaani.com



'ರಾಜ ಪ್ರತ್ಯಕ್ಷ ದೈವ' ಎಂಬ ಮಾತಿಗೆ ಅನ್ವರ್ಥವಾಗಿ ಬಾಳಿ ಬದುಕಿದ್ದ ಇವರು 1940 ಆಗಸ್ಟ್ 3ರಂದು ಇನ್ನಿಲ್ಲವಾದರೂ ಕೂಡ ತಮ್ಮ ಪ್ರಜಾಪರ ಸಾಧನೆಗಳ ಮೂಲಕ ಅವರಿನ್ನೂ ನಾಡಿನಲ್ಲಿ ಜೀವಂತವಾಗಿಯೇ ಇದ್ದಾರೆ. ರೈತರ ಬಾಳನ್ನು ಹಸಿರುಗೊಳಿಸಿ, ಹಸನುಗೊಳಿಸಲು ಇವರು ಕಟ್ಟಿದ ಕನ್ನಂಬಾಡಿ ಕಟ್ಟೆಯ ಭೋರ್ಗರೆತ ಕಂಡಾಗ ಅದೂ ಸಹ ನಾಲ್ವಡಿ ಕೃಷ್ಣರಾಜ ಒಡೆಯರು ಅಮರರು, ಅಜರಾಮರರೆಂದು ಸಾರಿ ಸಾರಿ ಹೇಳುತ್ತಿರುವಂತೆ ಅನಿಸುತ್ತದೆ.

ಇದೇ ಮಹಾರಾಜರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅಂದು ಅರಮನೆಯೊಳಗಿನ ದರ್ಬಾರಿಗೆ ದಲಿತರಿಗೆ ಪ್ರವೇಶವಿಲ್ಲದಂತಿದ್ದ ಕಟ್ಟುಪಾಡನ್ನು ಸ್ವತಃ ತಾವೇ ಮುರಿದು, ದಲಿತರೂ ನಮ್ಮಂತೆಯೇ ಮನುಷ್ಯರೇ ಆಗಿರುವಾಗ ಇಲ್ಲಿ ಬೇಧ-ಭಾವ ಕೂಡದೆಂದರು. ಅಂತೆಯೇ 1936ರಲ್ಲಿ ನಡೆದ ದಸರಾ ಮಹೋತ್ಸವದ ದರ್ಬಾರಿನಲ್ಲಿ ದಲಿತರಿಗೆ ಎಲ್ಲಾ ಸಂದರ್ಭಗಳಲ್ಲೂ ಭಾಗವಹಿಸುವ ಅವಕಾಶ ಕಲ್ಪಿಸಿ, ಮನುಷ್ಯರೆಲ್ಲಾ ಒಂದೇ ಎಂದು ಅವರನ್ನೂ ಗೌರವಿಸಿ ಮಾನವ ಕುಲ ತಾನೊಂದೇ ಎಂದು ಜಗತ್ತಿಗೆ ಸಾರಿ ಸಮಾನತೆಯ ಬೆಳಕು ಚೆಲ್ಲಿದ್ದರು. ಆ ಮಹಾರಾಜರೇ ಎಂದೆಂದಿಗೂ ನಾಡು ಮರೆಯದ ನಾಲ್ವಡಿ ಕೃಷ್ಣರಾಜ ಒಡೆಯರ್.

ದೇಶದ ಯಾವ ಸಂಸ್ಥಾನದ ಮಹಾರಾಜರಿಗೂ ಅಂದು ಇರದಿದ್ದ ಸಮಾನ ನೀತಿ ಅಂದಿನ ಕಾಲದಲ್ಲೇ ಇವರಲ್ಲಿದ್ದು ಸಮಾನತೆಯ ಹರಿಕಾರರಾಗಿ ಎಲ್ಲರಿಗೂ ಮಾದರಿಯ ಮಹಾರಾಜರಾಗಿದ್ದರು. ಇದಕ್ಕಾಗಿಯೇ ಇವರನ್ನು ರಾಷ್ಟ್ರಪಿತ ಮಹಾತ್ಮಗಾಂಧೀಜಿ ಅವರು 'ರಾಜರ್ಷಿ' ಎಂದು ಕರೆದು ಕೊಂಡಾಡಿದ್ದಾರೆ. ಹಾಗೆಯೇ ದಸರಾ ದರ್ಬಾರಿಗೆ ದಲಿತರಿಗೆ ಮುಕ್ತ ಅವಕಾಶ ನೀಡಿ ಅಸ್ಪೃಶ್ಯತೆ ಅಳಿಸಲು ಮುಂದಾದ ಇವರ 'ಸಮಾನ ನೀತಿಜ್ಞ' ಆಡಳಿತವನ್ನು 1938ರ ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ ವಿಶೇಷ ಸಂಪುಟದಲ್ಲಿ ಬಗೆಬಗೆಯಾಗಿ ಬಣ್ಣಿಸಿ ಶ್ಲಾಘಿಸಲಾಗಿದೆ. ಅಂತೆಯೇ ಪ್ಲೇಟೋನ 'ರಿಪಬ್ಲಿಕ್' ಗ್ರಂಥದಲ್ಲಿ ಆದರ್ಶ ತತ್ವಜ್ಞಾನಿ ರಾಜ ಇವರೆಂದು ಪಾಲ್‌ಬ್ರಂಟನ್ ಮೆಚ್ಚುಗೆ ವ್ಯಕ್ತಪಡಿಸಿದ್ದರೆ, ಬ್ರಿಟಿಷ್ ರಾಜ ನೀತಿಜ್ಞ ಲಾರ್ಡ್ ಸ್ಯಾಮ್ಯುಯೆಲ್ ಇವರನ್ನು ಅಶೋಕ ಚಕ್ರವರ್ತಿಗೆ ಹೋಲಿಸಿದ್ದಾರೆ. ಅಷ್ಟೇ ಅಲ್ಲ ದೇಶ ವಿದೇಶಗಳ ಗಣ್ಯರನೇಕರು 'ರಾಜರ್ಷಿ' ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಆಡಳಿತವನ್ನು ರಾಮ ರಾಜ್ಯ ಎಂದು ಪ್ರಶಂಸಿಸಿರುವುದು ಇತಿಹಾಸದ ಪುಟಗಳಲ್ಲಿದೆ.

ನಾಡಿನ ಭವ್ಯ ಪರಂಪರೆಯನ್ನು ಉಳಿಸಿ, ಬೆಳೆಸಿ, ಬೆಳಗಿಸಿ, ದೇಶದ ಸಂಸ್ಕೃತಿ ಕಲೆ ಅಳಿಸಿ ಹೋಗದಂತೆ ಕಾಪಾಡಿದ ಮಹಾನ್ ವ್ಯಕ್ತಿ ಮತ್ತು ಸಮಾನ ಸಮಾಜದ ಸಮಾನತಾದೃಷ್ಟಿ ಹೊಂದಿದ್ದ ಮಹಾನ್ ಆದರ್ಶವಾದಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಜನಿಸಿದ್ದು 1884ರ ಜೂನ್ 4ರಂದು. 1399 ರಿಂದ 1950ರವರೆಗೆ ಮೈಸೂರು ರಾಜ್ಯವನ್ನು ಆಳಿದ ಯದುವಂಶದ 23ನೇ ಮಹಾರಾಜರಾದ ಹತ್ತನೆಯ ಚಾಮರಾಜ ಒಡೆಯರ್ ಮತ್ತು ಮಹಾರಾಣಿ ವಾಣಿವಿಲಾಸ್ ಸನ್ನಿಧಿ ದಂಪತಿಗಳ ಜೇಷ್ಠ ಪುತ್ರರಾದ ಇವರು ಹುಟ್ಟಿದ್ದು 1886ರಲ್ಲಿ ಬೆಂಕಿಗೆ ಆಹುತಿಯಾದ ಮೈಸೂರಿನ ಹಿಂದಿನ ಹಳೆಯ ಅರಮನೆಯಲ್ಲಿ. ನಂತರದ ದಿನಗಳಲ್ಲಿ ಇವರ ತಾಯಿ ವಾಣಿವಿಲಾಸ್ ಅವರೇ ಈಗಿರುವ ಜಗದ್ವಿಖ್ಯಾತ ಮೈಸೂರು ಅರಮನೆಯನ್ನು ಭವ್ಯವಾಗಿ ನಿರ್ಮಿಸಿದರು. ಇದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ತಾಯಿಯ ಅಭೂತಪೂರ್ವ ಸಾಧನೆಯೂ ಹೌದು.

1894ರಲ್ಲಿ ಬಾಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ತಂದೆ ಹತ್ತನೇ ಚಾಮರಾಜ ಒಡೆಯರ್ ಅಕಾಲಿಕ ಮರಣಕ್ಕೆ ತುತ್ತಾದಾಗ ಇವರ ತಾಯಿ ಮಹಾರಾಣಿ ವಾಣಿವಿಲಾಸರು ಕೆಲವು ಕಾಲ ರಾಜಪ್ರತಿನಿಧಿಯಾಗಿ ಆಡಳಿತ ನಡೆಸಿದ್ದರು. ಆಗ ಬಾಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ವಿದ್ಯಾಭ್ಯಾಸ ರಾಜಶಾಲೆಯಲ್ಲಿ ಆರಂಭವಾಗಿತ್ತು. ಇವರು ಪಾಶ್ಚಾತ್ಯ ಅಧ್ಯಯನದ ಜೊತೆಗೆ ಕನ್ನಡ ಮತ್ತು ಸಂಸ್ಕೃತವನ್ನು ಕಲಿತರು. ಬಾಂಬೆ ಸಿವಿಲ್ ಸರ್ವೀಸ್‌ನ ಸರ್ ಸ್ಟೂಯೆರ್ಟ್ ಫ್ರೇಸರ್ ಇವರಿಗೆ ಆಡಳಿತದ ಬಗ್ಗೆ ತರಬೇತಿ ನೀಡಿದ್ದರು. ಆ ಸಂದರ್ಭದಲ್ಲೇ ತಮಗೆ ಬೇಕಾದ ಕುದುರೆ ಸವಾರಿ, ಭಾರತೀಯ ಮತ್ತು ಪಾಶ್ಚಾತ್ಯ ಸಂಗೀತ ಸೇರಿದಂತೆ ಸಕಲ ಕಲಾ ಶಿಕ್ಷಣವನ್ನೂ ತಮ್ಮದಾಗಿಸಿಕೊಂಡ ಇವರು ರಾಜ್ಯಾಡಳಿತದ ಚುಕ್ಕಾಣಿ ಹಿಡಿಯಲು ಸರ್ವ ಅರ್ಹತೆಯನ್ನೂ ಪಡೆದುಕೊಂಡು 1902ರ ಆಗಸ್ಟ್ 8ರಂದು ವೈಸ್‌ರಾಯ್ ಲಾರ್ಡ್ ಕರ್ಜನ್ ಅವರಿಂದ ಆಡಳಿತದ ಪೂರ್ಣಾಧಿಕಾರ ತೆಗೆದುಕೊಂಡರು. ಅಲ್ಲಿಂದ ಶುರುವಾಯಿತು ಮೈಸೂರು ಸಂಸ್ಥಾನದ 24ನೇ ಮಹಾರಾಜರಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತದ ಸುವರ್ಣ ಕಾಲ.

ಮೈಸೂರು ಸಂಸ್ಥಾನವನ್ನು ಆಳಿದ 25 ಮಂದಿ ಮಹಾರಾಜರ ಪೈಕಿ ಅಭಿವೃದ್ಧಿಯ ರಥ ಚಲಿಸಿದ್ದು ಇವರ ಕಾಲದಲ್ಲೇ ಹೆಚ್ಚು. ಹಾಗಾಗಿ ಮೈಸೂರು ಆಳರಸರ ನೂರಾರು ಅತ್ಯದ್ಭುತ ಮಹತ್ಸಾಧನೆಗಳಲ್ಲಿ ಇವರದೇ ಸಿಂಹಪಾಲು. ಇಡೀ ಏಷ್ಯಾದಲ್ಲೇ ಮೊದಲಿಗೆ 1905ರಲ್ಲಿ ಶಿವನ ಸಮುದ್ರದಲ್ಲಿ ಜಲವಿದ್ಯುತ್ ಉತ್ಪಾದನೆ ಆರಂಭಿಸಿದ ಕೀರ್ತಿಯ ಜೊತೆಗೆ 1905ರ ಆಗಸ್ಟ್ 5ರಲ್ಲಿ ಬೆಂಗಳೂರಿಗೆ ವಿದ್ಯುತ್ ಬೀದಿ ದೀಪಗಳನ್ನು ಬೆಳಗಿಸಿ ವಿದ್ಯುತ್ ಬೀದಿದೀಪಗಳನ್ನು ಪಡೆದ ಏಷ್ಯಾದ ಮೊದಲ ನಗರವೆಂಬ ಹೆಗ್ಗಳಿಕೆಯನ್ನು ಇವರು ಬೆಂಗಳೂರಿಗೆ ತಂದುಕೊಟ್ಟರು. ಅಂತೆಯೇ ಶಿವನಸಮುದ್ರ ಜಲವಿದ್ಯುತ್ ಕೇಂದ್ರದಿಂದ ಕೋಲಾರದ ಚಿನ್ನದ ಗಣಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದ್ದು ಇದು ಏಷ್ಯಾದಲ್ಲೇ ಪ್ರಥಮ ಪ್ರಯೋಗವಾಗಿದೆ. ಹಾಗೆಯೇ ಇವರ ದೂರದೃಷ್ಟಿಯ ಫಲವಾಗಿ 1911ರಲ್ಲಿ ಆರಂಭಿಸಿ 1932ರಲ್ಲಿ ಸಂಪೂರ್ಣಗೊಂಡು ನಿರ್ಮಿಸಲ್ಪಟ್ಟ ಕೆ.ಆರ್.ಎಸ್. ಎಂದೇ ವಿಶ್ವವಿಖ್ಯಾತಿ ಹೊಂದಿರುವ ಕನ್ನಂಬಾಡಿ ಕಟ್ಟೆ ಅಂದಿನಿಂದ ಇಂದಿಗೂ ಲಕ್ಷಾಂತರ ರೈತರ ಪಾಲಿಗೆ ಅಕ್ಷಯಪಾತ್ರೆಯಾಗಿದೆ. 1913ರಲ್ಲಿ ಎಲ್ಲರಿಗೂ ಕಡ್ಡಾಯ ಶಿಕ್ಷಣ ಮತ್ತು ಉಚಿತ ಶಿಕ್ಷಣದ ಆದೇಶ ಹೊರಡಿಸಿದ ಖ್ಯಾತಿಯೂ ಇವರದ್ದೇ ಆಗಿದೆ. ಭಾರತೀಯ ರಾಜ್ಯವೊಂದು ಆರಂಭಿಸಿದ ಮೊದಲ ವಿಶ್ವವಿದ್ಯಾಲಯವೆಂಬ ಹಿರಿಮೆಯೊಡನೆ 1916ರ ಜುಲೈ 27ರಂದು ಇವರು ಸ್ಥಾಪಿಸಿದ ಮೈಸೂರು ವಿಶ್ವವಿದ್ಯಾನಿಲಯ ಇಂದು ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯವಾಗಿದೆ. ಇದರ ಪ್ರಥಮ ಕುಲಪತಿಗಳಾಗಿ ಕಾರ್ಯನಿರ್ವಹಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಬನಾರಸ್ ವಿಶ್ವವಿದ್ಯಾಲಯದ ಮೊದಲ ಕುಲಪತಿಯಾಗಿಯೂ ಸೇವೆಗೈದು ತಮ್ಮ ಶೈಕ್ಷಣಿಕ ಸಾಧನೆಯನ್ನು ಮೆರೆದಿದ್ದಾರೆ. 1918ರಲ್ಲಿ ದೇಶದಲ್ಲೇ ಮೊದಲಿಗೆ ನ್ಯಾಯಮೂರ್ತಿ ವೆಸ್ಲಿಮಿಲ್ಲರ್ ಅಧ್ಯಕ್ಷತೆಯಲ್ಲಿ ಹಿಂದುಳಿದ ಆಯೋಗ ರಚಿಸಿ ಮೀಸಲಾತಿಯನ್ನು ಜಾರಿಗೆ ತಂದಿದ್ದ ಕೀರ್ತಿ ಇವರದು.

ಮತದಾನದ ಸಮಯದಲ್ಲಿ ಬೆರಳಿಗೆ ಹಚ್ಚುವ ಬಣ್ಣವನ್ನು ತಯಾರಿಸುವ ದೇಶದ ಏಕೈಕ ಕಾರ್ಖಾನೆಯಾದ ಮೈಸೂರಿನ ಅರಗು ಮತ್ತು ಬಣ್ಣದ ಕಾರ್ಖಾನೆಯನ್ನು 1937ರಲ್ಲಿ ಸ್ಥಾಪಿಸಿದ ಮತ್ತು ಆಗಿನ ಕಾಲಕ್ಕೆ ಇಡೀ ದೇಶದಲ್ಲೇ ಬೃಹತ್ ವಾಣಿಜ್ಯ ಸಂಕೀರ್ಣವೆಂದು ಕರೆಯಲಾದ 882 ಅಡಿ ಉದ್ದ ಹಾಗೂ 180 ಅಡಿ ಅಗಲದ 726 ಮಳಿಗೆಗಳುಳ್ಳ ದೇವರಾಜ ಮಾರುಕಟ್ಟೆಯನ್ನು 1903ರಲ್ಲಿ ನಿರ್ಮಿಸಿದ ಕೀರ್ತಿ ಇವರದು. ಅಂತೆಯೇ 1906ರಲ್ಲಿ ಚಾಮರಾಜೇಂದ್ರ ಇಂಜಿನಿಯರಿಂಗ್ ಸಂಸ್ಥೆ, ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್, 1916ರಲ್ಲಿ ಶ್ರೀಗಂಧದೆಣ್ಣೆ ಕಾರ್ಖಾನೆ, 1930ರಲ್ಲಿ ಮೈಸೂರು ಮೆಡಿಕಲ್ ಕಾಲೇಜು, 1921ರಲ್ಲಿ ತಮ್ಮ ಸೋದರಿ ರಾಜಕುಮಾರಿ ಕೃಷ್ಣಾಜಮ್ಮಣ್ಣಿ ಹೆಸರಿನಲ್ಲಿ ಪಿ.ಕೆ. ಸ್ಯಾನಿಟೋರಿಯಂ ನಿರ್ಮಿಸಿದ ಗರಿಮೆ ಕೂಡ ಇವರದೇ. ಇವಿಷ್ಟೇ ಸಾಕು, ಸಾವಿರ ಉದಾಹರಣೆ ನೀಡಬೇಕಾಗಿಲ್ಲ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಧನೆಗಳನ್ನು ಸಾರಲು. ಆಶ್ಚರ್ಯವೆಂದರೆ 1903ರಲ್ಲೇ ಮೈಸೂರು ನಗರದ ವ್ಯವಸ್ಥಿತ ಅಭಿವೃದ್ಧಿಗಾಗಿ ದೇಶದಲ್ಲೇ ಮೊಟ್ಟಮೊದಲಿಗೆ ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯನ್ನು ಇವರು ಸ್ಥಾಪಿಸಿದ್ದರು.

ಮೈಸೂರು ನಗರಕ್ಕೆ ಅರಮನೆಗಳ ನಗರಿ ಎಂಬ ಖ್ಯಾತಿ ಬರಲು ಇವರು ಬಹುಮುಖ್ಯ ಕಾರಣರು. ಇಂದಿಗೂ ಒಂದೊಂದು ಅರಮನೆಯೂ ಒಂದೊಂದು ಕಥೆ ಹೇಳುತ್ತವೆ. ಮೈಸೂರಿನಲ್ಲಿ ಮಿನುಗುತ್ತಿರುವ ಲಲಿತಮಹಲ್ ಅರಮನೆ,

ನಾಡಿನ ಭವ್ಯ ಪರಂಪರೆಯನ್ನು ಉಳಿಸಿ, ಬೆಳೆಸಿ, ಬೆಳಗಿಸಿ, ದೇಶದ ಸಂಸ್ಕೃತಿ ಕಲೆ ಅಳಿಸಿ ಹೋಗದಂತೆ ಕಾಪಾಡಿದ ಮಹಾನ್ ವ್ಯಕ್ತಿ ಮತ್ತು ಸಮಾನ ಸಮಾಜದ ಸಮಾನತಾದೃಷ್ಟಿ ಹೊಂದಿದ್ದ ಮಹಾನ್ ಆದರ್ಶವಾದಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಜನಿಸಿದ್ದು 1884ರ ಜೂನ್ 4ರಂದು.

ಚೆಲುವಾಂಬ ವಿಲಾಸ್ ಅರಮನೆ, ಜಯಲಕ್ಷ್ಮಿ ವಿಲಾಸ್ ಅರಮನೆ, ರಾಜೇಂದ್ರವಿಲಾಸ್ ಅರಮನೆ, ಕಾರಂಜಿ ವಿಲಾಸ್ ಅರಮನೆಗಳು ನಾಲ್ವಡಿ ಅವರು ನಿರ್ಮಿಸಿದ್ದೇ ಆಗಿವೆ.

ಮೈಸೂರು ಮತ್ತು ಇದರ ಸುತ್ತಮುತ್ತ ಪುಟ್ಟ ಪುಟ್ಟ ಅರಮನೆಗಳಂತೆ ಕಂಗೊಳಿಸುತ್ತಿರುವ ಪುರಭವನ, ಕ್ರಾಫರ್ಡ್ ಭವನ, ವಿಶ್ವೇಶ್ವರಯ್ಯ ಕಟ್ಟಡ, ಲ್ಯಾನ್ಸ್‌ಡೌನ್ ಕಟ್ಟಡ, ದೊಡ್ಡ ಗಡಿಯಾರ, ಜನತಾ ಬಜಾರ್ ಕಟ್ಟಡ, ಗನ್‌ಹೌಸ್, ಮಹಾನಗರ ಪಾಲಿಕೆ ಕಟ್ಟಡ, ಕೃಷಿ ಇಲಾಖೆ ಕಟ್ಟಡ, ವಾಣಿವಿಲಾಸ್ ಮಾರುಕಟ್ಟೆ ಮುಂತಾದ ಭವ್ಯ ಭವನಗಳು ಇವರ ಕೊಡುಗೆಯೇ. 1914ರಲ್ಲಿ 'ಎಕನಾಮಿಕ್ ಜರ್ನಲ್' ಎಂಬ ಪತ್ರಿಕೆಯನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಆರಂಭಿಸಿದ್ದ ಇವರು ಪತ್ರಿಕೋದ್ಯಮಕ್ಕೂ ತಮ್ಮದೇ ಆದ ಕಾಣಿಕೆ ನೀಡಿದ್ದಾರೆ.

1900ರಲ್ಲಿ ಕಾಥೇವಾಡದ ರಾಜಕುಮಾರಿ ಪ್ರತಾಪ ಕುಮಾರಿ ಬಾಯಿ ಅವರೊಡನೆ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ನಡೆದ ಅದ್ದೂರಿ ವಿವಾಹ ಸಮಾರಂಭದಲ್ಲಿ ವೈವಾಹಿಕ ಜೀವನಕ್ಕೆ ಕಾಲಿರಿಸಿದ್ದ ನಾಲ್ವಡಿ ಅವರು ತಮ್ಮ ಆಳ್ವಿಕೆಯಲ್ಲಿ 25 ವರ್ಷ ಪೂರೈಸಿದ ಧ್ಯೋತಕವಾಗಿ ರಜತ ಮಹೋತ್ಸವವನ್ನು ಅಷ್ಟೇ ಭವ್ಯವಾಗಿ ಆಚರಿಸಿಕೊಂಡಿದ್ದರು.

'ರಾಜ ಪ್ರತ್ಯಕ್ಷ ದೈವ' ಎಂಬ ಮಾತಿಗೆ ಅನ್ವರ್ಥವಾಗಿ ಬಾಳಿ ಬದುಕಿದ್ದ ಇವರು 1940 ಆಗಸ್ಟ್ 3ರಂದು ಇನ್ನಿಲ್ಲವಾದರೂ ಕೂಡ ತಮ್ಮ ಪ್ರಜಾಪರ ಸಾಧನೆಗಳ ಮೂಲಕ ಅವರಿನ್ನೂ ನಾಡಿನಲ್ಲಿ ಜೀವಂತವಾಗಿಯೇ ಇದ್ದಾರೆ. ರೈತರ ಬಾಳನ್ನು ಹಸಿರುಗೊಳಿಸಿ, ಹಸನುಗೊಳಿಸಲು ಇವರು ಕಟ್ಟಿದ ಕನ್ನಂಬಾಡಿ ಕಟ್ಟೆಯ ಭೋರ್ಗರೆತ ಕಂಡಾಗ ಅದೂ ಸಹ ನಾಲ್ವಡಿ ಕೃಷ್ಣರಾಜ ಒಡೆಯರು ಅಮರರು, ಅಜರಾಮರರೆಂದು ಸಾರಿ ಸಾರಿ ಹೇಳುತ್ತಿರುವಂತೆ ಅನಿಸುತ್ತದೆ. ನಾಡಿಗೆ ಬೆಳಕು ನೀಡಲು ಇವರು ಸ್ಥಾಪಿಸಿರುವ ಶಿವನಸಮುದ್ರದ ಜಲವಿದ್ಯುತ್ ಉತ್ಪಾದನಾ ಕೇಂದ್ರವನ್ನು ಕಂಡರೆ ಅದೂ ಕೂಡ ನಾಲ್ವಡಿಯವರು ಬೆಳಕಲ್ಲಿ ಬೆಳಕಾಗಿ ನನ್ನೊಳಗಿದ್ದಾರೆಂದು ನುಡಿಯುತ್ತಿದೆಯೇನೋ ಎನಿಸುತ್ತದೆ. ಏಕೆಂದರೆ, ಇವೆರಡೂ ನಾಡಿಗೆ ನಾಲ್ವಡಿಯವರ ಅಂಥಾ ಅದ್ಭುತ ಕೊಡುಗೆಗಳು. ಇಂತಹ ಮಹಾನ್ ಸಮಾಜ ಸುಧಾರಕರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮದಿನೋತ್ಸವವನ್ನು ರಾಜ್ಯದಾದ್ಯಂತ ಜೂನ್ 4 ರಂದು ಆಚರಿಸುವ ಮೂಲಕ ಅವರನ್ನು ಸ್ಮರಿಸಲಾಯಿತು.





downloaded from: www.kpscvaani.com




# ನಿರುದ್ಯೋಗಿಗಳ ಪಾಲಿನ ಚೈತನ್ಯ ರಥ ಐರಾವತ

ಶ್ರಾವಂತಿ




**ಬ**ಡತನ ಮತ್ತು ನಿರುದ್ಯೋಗ ಅನ್ನೋದು ಅದೆಷ್ಟೋ ಕುಟುಂಬಗಳನ್ನು ಬೀದಿ ಪಾಲಾಗಿಸಿರೋದು ಸುಳ್ಳಲ್ಲ. ಇನ್ನು ಅದೆಷ್ಟೋ ಮಂದಿ ಯುವಕ, ಯುವತಿಯರು ಉದ್ಯೋಗ ಗಿಟ್ಟಿಸಲಾಗದೆ ಅಡ್ಡದಾರಿ ಹಿಡಿದಿದ್ದೂ ಇದೆ. ಹತ್ತಾರು ಬಾರಿ ಸಹಾಯಕ್ಕೆ ಬರುತ್ತೇವೆ ಎಂದವರು ಕೈ ಕೊಟ್ಟಾಗ ನೊಂದು ಅಸಹಾಯಕರಾಗಿ ಜೀವನದಲ್ಲಿ ಜಿಗುಪ್ಸೆಗೆ ಒಳಗಾಗುತ್ತಾರೆ. ಇನ್ನು ಅಷ್ಟೋ ಇಷ್ಟೋ ಕಷ್ಟಪಟ್ಟು ಗಳಿಸಿದ ಹಣ ಅಲ್ಲಿಗಲ್ಲಿಗೆ ನೇರವಾಗುವಂತ್ತಿರುತ್ತದೆ. ಇಂಥವರ ಜೀವನಕ್ಕೆ ಬೆಳಕಾಗಬೇಕು ಅನ್ನುವುದನ್ನು ಮನಗಂಡ ಕರ್ನಾಟಕದ ಮೈತ್ರಿ ಸರ್ಕಾರ, ಪರಿಶಿಷ್ಟ ಜಾತಿ ಮತ್ತು ಪಂಗಡದ ಯುವಕ, ಯುವತಿಯರ ಜೀವನಕ್ಕೆ ಆರ್ಥಿಕ ಚೈತನ್ಯ ತುಂಬಬೇಕು ಅಂತಾ ತೀರ್ಮಾನಿಸಿತು.

ಇದರ ಫಲವಾಗಿ ಹುಟ್ಟಿಕೊಂಡಿದ್ದೇ ಐರಾವತ ಯೋಜನೆ. 'ಐರಾವತ' ಇದು ನಿರುದ್ಯೋಗಿಗಳ ಪಾಲಿನ ಚೈತನ್ಯ ರಥ. ಇಂಥದೊಂದು ಧ್ಯೇಯ ಇಟ್ಟುಕೊಂಡು ಕರ್ನಾಟಕ ಸರ್ಕಾರವು ಸಮಾಜಕಲ್ಯಾಣ ಇಲಾಖೆಯ ಮೂಲಕ ಈ ಯೋಜನೆಯನ್ನು ಜಾರಿಗೆ ತಂದಿದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಹಿಂದೆಯೂ ಟ್ಯಾಕ್ಸಿ ಖರೀದಿಗೆ ಸಹಾಯಧನ ನೀಡುವ ಯೋಜನೆ ಜಾರಿಯಲ್ಲಿತ್ತು. ಆದರೆ ಅದರ ಅನುಷ್ಠಾನದ ಬಗ್ಗೆ ದೂರುಗಳಿದ್ದ ಕಾರಣ ಓಲಾ/ಊಬರ್ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡು ನೂತನ ಮಾದರಿಯಲ್ಲಿ ಯೋಜನೆ ಜಾರಿಗೊಳಿಸಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ನಿರುದ್ಯೋಗಿ ಯುವಕ/ಯುವತಿಯರನ್ನು ಉದ್ಯಮಶೀಲರನ್ನಾಗಿ ಮಾಡುವ ಉದ್ದೇಶದಿಂದ ಸಾಮಾಜಿಕ ಉದ್ಯಮಶೀಲತಾ ಅಭಿವೃದ್ಧಿ ಯೋಜನೆಯನ್ನು ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮಗಳ ಮೂಲಕ 225 ಕೋಟಿ ರೂ ವೆಚ್ಚದಲ್ಲಿ ಓಲಾ/ಊಬರ್ ಸಂಸ್ಥೆಗಳ ಸಹಯೋಗದೊಂದಿಗೆ 4500 ಮಂದಿಗೆ ವಾಹನಗಳನ್ನು ನೀಡುವ ಮೂಲಕ ಅವರ ಜೀವನಕ್ಕೆ ಆರ್ಥಿಕ ಚೈತನ್ಯ ತುಂಬುವ ಮೂಲಕ ಅವರ ಸಾಮಾಜಿಕ ಅಂತಸ್ತನ್ನು ಬದಲಾವಣೆ ಮಾಡಲು ಸರ್ಕಾರ ಪಣತೊಟ್ಟು ನಿಂತಿವೆ.

ಅಂದು ವಿಧಾನಸೌಧದ ಆವರಣದ ತುಂಬ ಹೊಸ ವಾಹನಗಳು ಕಂಗೊಳಿಸುತ್ತಿದ್ದವು. ಮತ್ತೊಂದು ಕಡೆ ಜೀವನದಲ್ಲಿ ಹೊಸ ಪ್ರಯತ್ನ ಫಲನೀಡಲು ಶುರುವಾಯ್ತು ಅನ್ನೋ ಆಶಾವಾದ ಹೊತ್ತಿದ್ದ ನೂರಾರು ಕಣ್ಣುಗಳಲ್ಲಿ ಸಂತೋಷ.... ಇಂಥ ಸನ್ನಿವೇಶಕ್ಕೆ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಸಮಾಜಕಲ್ಯಾಣ ಇಲಾಖೆಯ ಸಚಿವ ಪ್ರಿಯಾಂಕ ಖರ್ಗೆ ಅವರು ಸಾಕ್ಷಿಯಾದರು. ಸಮಾಜಕಲ್ಯಾಣ ಇಲಾಖೆಯ ಮಹತ್ವಾಕಾಂಕ್ಷಿ ಯೋಜನೆಯಾದ ಐರಾವತ ಯೋಜನೆಗೆ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಚಾಲನೆ ನೀಡಿದರು. ಬಳಿಕ 209 ಫಲಾನುಭವಿಗಳಿಗೆ ವಾಹನಗಳನ್ನು ವಿತರಿಸಲಾಯಿತು.

ಇದೇ ವೇಳೆ ಫಲಾನುಭವಿಗಳೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ರಾಜ್ಯದ 4500 ಕುಟುಂಬಗಳ ಜೀವನೋಪಾಯಕ್ಕೆ ಅಡಿಪಾಯ ಹಾಕುವಂತಹ ಮಹತ್ತರ ಆಶಯಗಳನ್ನು ಇಟ್ಟುಕೊಂಡು ಸಮಾಜ ಕಲ್ಯಾಣ ಇಲಾಖೆ ಈ ಯೋಜನೆ ರೂಪಿಸಿದೆ. ಯುವಕ, ಯುವತಿಯರು ಜೀವನವನ್ನು ಸವಾಲಾಗಿ ಸ್ವೀಕರಿಸಿ ಇದರ ಲಾಭ ಪಡೆದುಕೊಂಡು ಅಭಿವೃದ್ಧಿಯತ್ತ ದಾಪುಗಾಲು ಹಾಕಬೇಕು ಎಂದರು.

**ಚಾಲಕನೇ ಮಾಲೀಕ :** ಐರಾವತ ಯೋಜನೆಯಡಿ ಫಲಾನುಭವಿಗಳಿಗೆ 5 ಲಕ್ಷ ರೂ ಆರ್ಥಿಕ ನೆರವು ನೀಡಲಾಗುತ್ತದೆ. ಇಂದರಿಂದ ಚಾಲಕರೇ ಮಾಲೀಕರಾಗುತ್ತಾರೆ. ಬಹುಶಃ ದುಡಿಯುವ ಕೈಗಳನ್ನು ಬಲಪಡಿಸುವುದು ಅಥವಾ ಇನ್ನಷ್ಟು ಆರ್ಥಿಕ ಚೈತನ್ಯ ತುಂಬುವುದು ಅಂದರೆ ಇದೇ ಇರಬೇಕು ಅನ್ನಿಸುತ್ತೆ. ಈ ಯೋಜನೆಯ ಮೂಲಕ ಚಾಲಕರೇ ಮಾಲೀಕರಾಗುವ ಸಮಯ ಬಂದಿದೆ. ಇದರ ಪ್ರಯೋಜನವನ್ನು ಸರಿಯಾಗಿ ಪಡೆದುಕೊಂಡಲ್ಲಿ ಖಂಡಿತವಾಗಿ ಆರ್ಥಿಕ ಬದಲಾವಣೆ ಕಾಣಬಹುದು. ಅವರ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಬಹುದು ಜೊತೆಗೆ ಅವರ ಜೀವನ ಮಟ್ಟದಲ್ಲೂ ಕೂಡ ಸಾಕಷ್ಟು ಬದಲಾವಣೆಯಾಗಲಿದೆ.

ಐದು ಲಕ್ಷಕ್ಕಿಂತ ಹೆಚ್ಚಿನ ಹಣದ ವಾಹನಗಳನ್ನು ಪಡೆದರೆ ಊಬರ್/ಓಲಾ ಕಂಪನಿಯವರು ಅದರ ಜವಾಬ್ದಾರಿ ವಹಿಸಿಕೊಳ್ಳುತ್ತಾರೆ.ಈಗಾಗಲೇ ಈ ಯೋಜನೆಯ ಸೌಲಭ್ಯವನ್ನು ಪಡೆದುಕೊಂಡಿರುವವರು ತಿಂಗಳಿಗೆ 90,000 ರೂ ಆದಾಯವನ್ನು ಗಳಿಸುತ್ತಾ ಸುಖಮಯ ಜೀವನವನ್ನು ನಡೆಸುತ್ತಿದ್ದಾರೆ. ಬ್ಯಾಂಕ್‌ನಿಂದ ಸಾಲಪಡೆದಿದ್ದರೆ, ಪ್ರತಿ ತಿಂಗಳು ಸಾಲದ ಕಂತು ಕಟ್ಟುವ ಸ್ಥಿತಿ ಎದುರಾಗುತ್ತಿತ್ತು. ಆದರೆ ಸರ್ಕಾರದಿಂದ ವಾಹನ ಖರೀದಿಗೆ ಆರ್ಥಿಕ ನೆರವು ದೊರೆತಿರುವುದರಿಂದ ನೆಮ್ಮದಿಯ ಬದುಕು ಅವರದ್ದಾಗಿದೆ. ಸಮಾಜದ ದುರ್ಬಲವರ್ಗದವರ ಆರ್ಥಿಕ ಸದೃಢತೆಗೆ ಈ ಯೋಜನೆ ಪೂರಕವಾಗಿಲಿದೆ.

ವಿತರಿಸುವ ಒಟ್ಟು ವಾಹನಗಳ ಪೈಕಿ ಶೇ.10 ರಷ್ಟು ಮಹಿಳೆಯರಿಗೆ ನೀಡಲಾಗುತ್ತಿದೆ. ಈ ಕಾರ್ಯಕ್ರಮದ ಅಡಿ ಬರೋಬ್ಬರಿ 225 ಕೋಟಿ ರುಪಾಯಿ ವೆಚ್ಚ ಮಾಡಲಾಗುತ್ತಿದೆ. ಇದಕ್ಕೆ ಓಲಾ ಮತ್ತು ಉಬರ್ ಸಂಸ್ಥೆಗಳ ಜೊತೆ ಒಡಂಬಡಿಕೆ ಮಾಡಿಕೊಂಡಿದ್ದು ಅವರ ಸಹಯೋಗದಲ್ಲಿ ಫಲಾನುಭವಿಗಳಿಗೆ ತರಬೇತಿ ಹಾಗು ಮಾರುಕಟ್ಟೆ ಒದಗಿಸಲಾಗುತ್ತದೆ. ಇನ್ನು ಈ ಐರಾವತ ಯೋಜನೆ ಅಡಿ ಲಾಭ ಪಡೆಯುವ ಫಲಾನುಭವಿ ಕನಿಷ್ಟ ಒಂದು ವರ್ಷವಾದರೂ ಓಲಾ ಅಥವಾ ಉಬರ್ ಮತ್ತಿತರ ಸಂಸ್ಥೆಗಳ ಅಡಿ ಕೆಲಸ ಮಾಡಬೇಕಾಗುತ್ತದೆ.

ಹಾಗಾದರೆ ನಾವೂ ಈ ಯೋಜನೆಯ ಲಾಭ ಪಡೆಯಬಹುದಾ? ಎಂದು ಬಹುಶಃ ನಿರುದ್ಯೋಗಿ ಯುವಕ, ಯುವತಿಯರಲ್ಲಿ ಈ ಪ್ರಶ್ನೆ ಮೂಡಿಯೇ ಇರುತ್ತದೆ. ಹೌದು, ಇದಕ್ಕೆ ನೀವು ಮೊದಲು ಮಾಡಬೇಕಾದ ಕೆಲಸ ಎಂದರೆ ಆನ್ ಲೈನ್‌ನಲ್ಲಿ ಅರ್ಜಿ ತುಂಬಬೇಕು. ಅಭ್ಯರ್ಥಿಯ ವಯಸ್ಸು, ವಿದ್ಯಾರ್ಹತೆ, ವಾಹನ ಚಾಲನೆಯ ಕುರಿತು ಅನುಭವ ಇತ್ಯಾದಿ ಅಂಶಗಳನ್ನು ಆಯ್ಕೆಯ ವೇಳೆ ಪರಿಗಣಿಸಲಾಗುತ್ತದೆ. ಇದಕ್ಕೆ ಅಂಕ ನೀಡಲಾಗುತ್ತದೆ. ಹೆಚ್ಚು ಅಂಕ ಪಡೆದವರು ಯೋಜನೆಯ ಅರ್ಹ ಪಲಾನುಭವಿಯಾಗುತ್ತಾರೆ. ಜೊತೆಗೆ ಆನ್ ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕಾರಣಕ್ಕೆ ಫಲಾನುಭವಿಗಳ ಆಯ್ಕೆಯಲ್ಲಿ ಹೆಚ್ಚು ಪಾರದರ್ಶಕತೆ ಇರುತ್ತದೆ. ಅರ್ಜಿಗಳನ್ನು ಪರಿಶೀಲನೆ ಮಾಡಲು ಸಮಿತಿಯೊಂದನ್ನು ರಚನೆ ಮಾಡಲಾಗಿದೆ. ಅರ್ಜಿ ಜೊತೆಗೆ ಆಧಾರ್ ಕಾರ್ಡ್ ನಂಬರ್ ಪಡೆಯಲಾಗುತ್ತದೆ. ಇದರಿಂದ ಒಮ್ಮೆ ಫಲಾನುಭವಿ ಆದವರು ಮತ್ತೆ ಅರ್ಜಿ ಸಲ್ಲಿಸಲು ಆಗುವುದಿಲ್ಲ. ಇದರಿಂದ ಎಲ್ಲಾ ಅಕ್ರಮಗಳಿಗೂ ಬ್ರೇಕ್ ಬಿದ್ದಂತಾಗುತ್ತದೆ.

ಪ್ರಾಯೋಗಿಕವಾಗಿ 38 ಮಂದಿ ಫಲಾನುಭವಿಗಳಿಗೆ ಈ ಯೋಜನೆ ಅಡಿ ಸೌಲಭ್ಯ ಕಲ್ಪಿಸಲಾಗಿತ್ತು. ಅವರ ಆದಾಯ ತಿಂಗಳಿಗೆ ಕನಿಷ್ಟ 90 ಸಾವಿರ ರುಪಾಯಿ ದಾಟಿದೆ.

ಸದ್ಯಕ್ಕೆ ಬೆಂಗಳೂರಿನ ಯುವಕ/ಯುವತಿಯರಿಗೆ ಮಾತ್ರ ಸೀಮಿತವಾಗಿರುವ ಈ ಯೋಜನೆಯ ಅವಕಾಶವನ್ನು ಇತರ ಜಿಲ್ಲೆಗೂ ವಿಸ್ತರಿಸುವ ಉದ್ದೇಶವನ್ನು ಹೊಂದಲಾಗಿದೆ.  ಹಾಗಾಗಿ ಓಲಾ/ಊಬರ್ ಸಂಸ್ಥೆಗಳು ಸೇವೆ ಒದಗಿಸುತ್ತಿರುವ ಇತರೆ ಜಲ್ಲೆಗಳಾದ ಮೈಸೂರು, ಮಂಗಳೂರು, ಕಲಬುರ್ಗಿ, ಧಾರವಾಡ, ಬಳ್ಳಾರಿ, ದಕ್ಷಿಣ ಕನ್ನಡ, ಬೆಳಗಾವಿ ಜಿಲ್ಲಾ ಕೇಂದ್ರಗಳಲ್ಲಿ ಐರಾವತ ಯೋಜನೆಯಡಿ ವಾಹನಗಳನ್ನು ವಿತರಿಸುವ ಕಾರ್ಯಕ್ರಮವನ್ನು ಶೀಘ್ರದಲ್ಲಿ ಹಮ್ಮಿಕೊಳ್ಳಲು ಇಲಾಖೆಯು ಸಿದ್ಧತೆ ನಡೆಸಿದೆ.





downloaded from: www.kpscvaani.com




# ದಾರದಹಳ್ಳಿಯ ಮಾದರಿ ಪಶು ಆಸ್ಪತ್ರೆ

ಗಣಪತಿ ಹಾಸ್ಪುರ

**ಪ**ಶು ವೈದ್ಯರಲ್ಲಿ ಸೇವಾ ಮನೋಭಾವನೆ ಇದ್ದರೆ, ತಾವು ಸೇವೆ ಸಲ್ಲಿಸುತ್ತಿರುವ ಗ್ರಾಮೀಣ ಪ್ರದೇಶದ ಆಸ್ಪತ್ರೆಯನ್ನು ಯಾವ ರೀತಿಯಲ್ಲಿ ಮಾದರಿ ಕೇಂದ್ರವಾಗಿ ಪರಿವರ್ತಿಸಲು ಸಾಧ್ಯವಿದೆ ಎಂಬುದಕ್ಕೆ ದಾದರಹಳ್ಳಿಯ ಪಶು ಆಸ್ಪತ್ರೆಯ ಸರ್ಕಾರಿ ವೈದ್ಯಾಧಿಕಾರಿ ಕೃಷ್ಣರಾಜು ಅವರೇ ಉತ್ತಮ ನಿದರ್ಶನ.

ಹೌದು, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ದಾರದಹಳ್ಳಿಯಲ್ಲಿ ಸರ್ಕಾರದ ಪಶು ಆಸ್ಪತ್ರೆಯಿದೆ. ಇದು ಕೇವಲ ಪಶು ಚಿಕಿತ್ಸಾ ಕೇಂದ್ರವಾಗಿ ಮಾತ್ರವೇ ಉಳಿದಿಲ್ಲ. ಈ ಆಸ್ಪತ್ರೆಯಲ್ಲಿ ಗೋವಿನ ವಿಶ್ವರೂಪವೇ ತೆರೆದು ಕೊಂಡಿರುವುದರಿಂದ, ಅದು ಪಕ್ಕಾ "ಪಶುಗಳ ವಿವಿಧ ಪರಿಕರಗಳ ಮ್ಯೂಜಿಯಂ" ಆಗಿದೆ ಎಂದರೂ ಉತ್ಪ್ರೇಕ್ಷೆ ಆಗಲಾರದು.

ಯಾವ ಸರ್ಕಾರಿ ಆಸ್ಪತ್ರೆಯಲ್ಲಿಯೂ ಇರದ ವಿಶೇಷತೆ ಈ ದಾರದಹಳ್ಳಿಯ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರದಲ್ಲಿ ಇದೆ ಎಂದಾಗ ಸಹಜವಾಗಿಯೇ ಕುತೂಹಲ ಉಂಟಾಗುತ್ತದೆ. ಮೂಡಿಗೆರೆ ತಾಲೂಕಿನ ದಾರದಹಳ್ಳಿಯಲ್ಲಿರುವ ಸರ್ಕಾರದ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವು ಉಳಿದೆಲ್ಲ ಪಶು ಚಿಕಿತ್ಸಾ ಕೇದ್ರಕ್ಕಿಂತಲೂ ಭಿನ್ನವಾಗಿ ಇರುವುದರಿಂದ ಜನಸಾಮಾನ್ಯರನ್ನು, ಕೃಷಿಕರನ್ನು ಅಲ್ಲದೆ ಪ್ರವಾಸಿಗರನ್ನು ಸಹಾ ಆಕರ್ಷಿಸುತ್ತಿದೆ.

ಈ ಪಶು ಆಸ್ಪತ್ರೆಯಲ್ಲಿ ಕರ್ನಾಟಕದ ಯಾವ ಪ್ರದೇಶದಲ್ಲಿಯೂ ಕಾಣಲು ಸಿಗದ ಅಪರೂಪದ, ವಿಸ್ಮಯ ಮೂಡಿಸುವ ಗೋವಿನ ಪರಿಕರಗಳ ಬೃಹತ್ ಸಂಗ್ರಹವಿದೆ. ಗೋವಿನ ಚರ್ಮದ ಕೃಷಿ ವಸ್ತುಗಳು, 250 ವರ್ಷದ



ಮರದ ನೊಗ, 100 ವರ್ಷದ ಗೋವಿನ ತುಪ್ಪ ಸಂಗ್ರಹದ ಮಡಿಕೆ, 150 ವರ್ಷದ ಚಿತ್ರಗಳು, 200 ವರ್ಷದ ಮರದ ಗಂಟೆ... ಹೀಗೆ ಅಸಂಖ್ಯಾತ ಗೋವುಗಳಿಗೆ ಬಳಸುತ್ತಿದ್ದ ಪರಿಕರಗಳು ಅಲ್ಲಿವೆ. ಗೋವಿನಿಂದ ತಯಾರಿಸಬಹುದಾದ ಸರಳ ಗ್ಯಾಸ್ ವ್ಯವಸ್ಥೆ, ವಿಶೇಷ ಮಾದರಿಯ ಗೊಬ್ಬರ ಸಂಗ್ರಹ ವ್ಯವಸ್ಥೆ, ಗೋವಿನ ಗಂಜಲದಿಂದ ತಯಾರಿಸಬಹುದಾದ ಕೃಷಿ ಔಷಧಗಳು, ಗೋವಿನ ಉತ್ಪನ್ನದಿಂದ ಹಲವು ರೋಗಗಳಿಗೆ ಬಳಸಬಹುದಾದ ಔಷಧಿಗಳು ಅಲ್ಲಿವೆ. ಅಷ್ಟೇ ಅಲ್ಲಾ, ಸಗಣಿಯಿಂದ ಕೃಷಿ ಬೀಜ ಸಂರಕ್ಷಣೆ ವಿಧಾನ, ಸೊಳ್ಳೆ ನಿಯಂತ್ರಣಕ್ಕೆ ಸಗಣಿಯಿಂದ ತಯಾರಿಸಿದ ಸೊಳ್ಳೆಬತ್ತಿ, ದೂಪದ ಬತ್ತಿ... ಹೀಗೆ ಹಲವಾರು ಮಾದರಿಯನ್ನು ತಮ್ಮ ಗೋಶಾಲೆಯಲ್ಲಿ ತಯಾರಿಸಿ ಪ್ರದರ್ಶನಕ್ಕೆ ಇಟ್ಟಿದ್ದಾರೆ. ಹಾಗಾಗಿ ವೈದ್ಯ ಕೃಷ್ಣರಾಜು ಅವರು ಪಶು ಆಸ್ಪತ್ರೆಯನ್ನು ಮಿನಿ ಸಂಗ್ರಹಾಲಯವಾಗಿ ಪರಿವರ್ತಿಸಿದ್ದಾರೆ ಎಂದರೆ ತಪ್ಪಾಗಲಾರದು.

ಸುಲಭದಲ್ಲಿ ಗೋಮೂತ್ರವನ್ನು ಶುದ್ಧೀಕರಿಸುವ ವಿವಿಧ ಮಾದರಿ, ಗೋವುಗಳಿಗೆ ಸಮತೋಲನ ಪಶು ಆಹಾರ ಮತ್ತು ಒಣ ಹುಲ್ಲಿನ ಪರಿಷ್ಕರಣೆ ತರಬೇತಿಯೂ ಅಲ್ಲಿ ನಡೆಯುತ್ತದೆ. ಮಕ್ಕಳಿಗೆ ಮುದ ನೀಡುವ ಸಗಣಿಯಿಂದ ಮಾಡಿದ ಅಲಂಕಾರಿಕ ವಸ್ತುಗಳು, ಗೋವಿನ ಮಹತ್ವ ತಿಳಿಸುವ ಉದ್ದೇಶದಿಂದ ಸಗಣಿಯಿಂದ ವಿದ್ಯುತ್, ಸಗಣಿಯ ಗಡಿಯಾರ, ಗೋಮೂತ್ರ ಗಡಿಯಾರ, ಹುಳಿ ಮಜ್ಜಿಗೆ ಗಡಿಯಾರವೂ ಅಲ್ಲಿರುವುದರಿಂದ ಆಸ್ಪತ್ರೆಗೆ ವಿಶೇಷ ಕಳೆ ಬಂದಿದೆ.

**ಕೊಂಬಿನ ಕಹಳೆ:** ಕೃಷ್ಣರಾಜು ಅವರು ಗೋವಿನ ಕೊಂಬುಗಳಿಂದ ಕಹಳೆ, ಶಹನಾಯಿ, ಬೊಂಬಾರು... ಹೀಗೆ ಹಲವು ಪ್ರಕಾರದ ಪರಿಕರಗಳನ್ನು ಸಿದ್ಧಪಡಿಸಿ ಅವುಗಳ ನಾದದಿಂದ ಸಂಗೀತ ಸುಧೆಯನ್ನು ಮೊಳಗಿಸುತ್ತಿದ್ದಾರೆ. ಪಶು ವೈದ್ಯರಾದ ಕೃಷ್ಣರಾಜು ಅನೇಕ ಮಠ–ಮಂದಿರಗಳಿಗೆ ಹೋದ ಸಂದರ್ಭದಲ್ಲಿ ಅಲ್ಲಿನ ಪೂಜಾ ಕೈಂಕಾರ್ಯಗಳಿಗೆ ಬಳಸುವ ಸಂಗೀತ ಪರಿಕರಗಳನ್ನು ಸೂಕ್ಷ್ಮವಾಗಿ







**ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ದಾರದಹಳ್ಳಿಯಲ್ಲಿ ಸರ್ಕಾರದ ಪಶು ಆಸ್ಪತ್ರೆ, ಕೇವಲ ಪಶು ಚಿಕಿತ್ಸಾ ಕೇಂದ್ರವಾಗಿ ಮಾತ್ರವೇ ಉಳಿದಿಲ್ಲ. ಈ ಆಸ್ಪತ್ರೆಯಲ್ಲಿ ಗೋವಿನ ವಿಶ್ವರೂಪವೇ ತೆರೆದು ಕೊಂಡಿರುವುದರಿಂದ, ಅದು ಪಕ್ಕಾ "ಪಶುಗಳ ವಿವಿಧ ಪರಿಕರಗಳ ಮ್ಯೂಜಿಯಂ" ಆಗಿದೆ**

ಗ್ರಹಿಸಿದರು. ಅಂತಹ ವಿಶಿಷ್ಠ ಪರಿಕರಗಳನ್ನು ಗೋವಿನಿಂದಲೂ ಪಡೆಯಲು ಸಾಧ್ಯ ಎಂಬುದನ್ನು ಆಗಲೇ ಮನಗಂಡರು. ಆಮೇಲೆ ಹೊರರಾಜ್ಯಗಳಲ್ಲಿ ಸಿಗಬಹುದಾದ ಗೋವಿನ ಕೊಂಬುಗಳನ್ನು ತರಿಸಿ, ಅದನ್ನು ಪಾಪಣ್ಣಾಚಾರ್‌ರಲ್ಲಿ ತಮ್ಮ ಕಲ್ಪನೆಯಂತೆ ಕೊಂಬುಗಳಿಗೆ ರೂಪ ನೀಡಿ, ಅದನ್ನು ಸಂಗೀತ ಪರಿಕರಗಳಾಗಿ ಮಾರ್ಪಡಿಸುವಲ್ಲಿ ಕೃಷ್ಣರಾಜು ಅವರು ಯಶಸ್ವಿಯಾದರು.

ಔಷಧಿ ವನ: ಈ ದಾರದಹಳ್ಳಿಯ ಪಶು ಆಸ್ಪತ್ರೆಯ ಆವರಣದಲ್ಲಿ ಅಚ್ಚುಕಟ್ಟಾಗಿ ಔಷಧಿ ಸಸ್ಯವನವನ್ನು ಕೃಷ್ಣರಾಜು ಬೆಳೆಸಿರುವುದು ಶ್ಲಾಘನೀಯ ಕಾರ್ಯವಾಗಿದೆ. ಅಲ್ಲಿ ನೆಲಬೇವು, ಒಂದೆಲಗ, ಅಜೋಲ, ಭೃಂಗರಾಜ, ಬಜೆ, ಲಕ್ಕಿ, ಆಡುಸೋಗೆ, ಶತಾವರಿ, ನಿತ್ಯಪುಷ್ಪ, ತುಳಸಿ, ಸರ್ಪಗಂಧ,... ಹೀಗೆ ಹಲವು ಬಗೆಯ ಔಷಧಿ ಸಸ್ಯಗಳನ್ನು ಬೆಳೆಸಿರುವ ಕ.ದಾ.ಕೃಷ್ಣರಾಜು ಅವರು, ಸರ್ಕಾರಿ ಪಶು ವೈದ್ಯಾಧಿಕಾರಿಗಳು ಏನೆಲ್ಲ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. (ಅವರನ್ನು 9448073711 ನಂಬರಿನ ಮೂಲಕ ಸಂಪರ್ಕಿಸಬಹುದು.) ಕೃಷ್ಣರಾಜು ಅವರಂತೆಯೇ ಎಲ್ಲಾ ಪಶು ವೈದ್ಯಾಧಿಕಾರಿಗಳು ಆಸಕ್ತಿ ವಹಿಸಿದಲ್ಲಿ ಪಶು ಚಿಕಿತ್ಸಾ ಕೇಂದ್ರಗಳನ್ನು ಮ್ಯೂಜಿಯಂ ಆಗಿ ಪರಿವರ್ತಿಸಲು ಸಾಧ್ಯವಿದೆ. ಆ ನಿಟ್ಟಿಯಲ್ಲಿ ಪ್ರಯತ್ನಗಳು ನಡೆಯಲಿ ಎಂದು ಆಶಿಸುತ್ತೇನೆ.





downloaded from: www.kpscvaani.com





# ಸಾಂಕ್ರಾಮಿಕ ರೋಗ ತಡೆಗೆ ಮುಂಜಾಗ್ರತೆ

ಶುಭಾ ಮಂಜುನಾಥ್

**ಬೇ**ಸಿಗೆಯ ಧಗೆಗೆ ಗಾರೆದ್ದು ಹೋದ ನೆಲಕ್ಕೆ ಮುಂಗಾರು ಮಳೆಯ ಸಿಂಚನವಾಗಲಿ ಎಂದು ಬಹುದಿನಗಳಿಂದ, ತಿಂಗಳುಗಳಿಂದ ಕಾದಿರುತ್ತೇವೆ. ಬಿಸಿಲ ಬೇಗೆ ತಗ್ಗಿ ವಾತಾವರಣ ಬಹುಬೇಗ ತಂಪಾಗಲಿ ಎಂಬ ನಿರೀಕ್ಷೆ ಎಲ್ಲರದ್ದೂ ಆಗಿರುತ್ತದೆ. ಆದರೆ ಮಳೆಗಾಲ ಶುರುವಾಯಿತೆಂದರೆ ಅದರ ಹಿಂದೆ ಕಾಯಿಲೆಗಳು ಕೂಡ ಮೋಡಗಳಂತೆ ದಟ್ಟೈಸಿ ಬರುವುದು ಮಾತ್ರ ಅಷ್ಟೇ ನಿಜ. ಪ್ರತಿ ಋತುವಿನಲ್ಲಿಯೂ ಒಂದಲ್ಲ ಒಂದು ಕಾಯಿಲೆಗಳು ನಮ್ಮನ್ನು ಬೆನ್ನಟ್ಟಿಕೊಂಡು ಬಂದೇ ಬರುತ್ತವೆ. ಮಳೆ ಬಿದ್ದಷ್ಟೇ ರಭಸದಲ್ಲಿ ದಂಡು ದಂಡಾಗಿ ವೈರಸ್‌ಗಳು ಹುಟ್ಟಿಕೊಳ್ಳುತ್ತವೆ. ಹುಟ್ಟಿದಷ್ಟೇ ವೇಗದಲ್ಲಿ ಅವು ಬೇಟೆಗಳನ್ನು ಹುಡುಕಿಕೊಂಡು ಹೊರಡುತ್ತವೆ. ಇವುಗಳಿಂದ ನಾವು ರಕ್ಷಣೆ ಪಡೆದುಕೊಳ್ಳಬೇಕಾದರೆ ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯ.

ಮಳೆಗಾಲ ಶುರುವಾಗುವ ಹೊತ್ತಿಗೆ ನಾವು ಅನೇಕ ಸಂಗತಿಗಳನ್ನು ಮರೆತಿರುತ್ತೇವೆ. ಬಹಳ ತಿಂಗಳುಗಳಿಂದ ಮನೆಯ ಮುಂದೆ ಅಥವಾ ಸುತ್ತಮುತ್ತ ಇಟ್ಟ ಹೂವಿನ ಕುಂಡಗಳಲ್ಲಿ ಹಾಕಿದ್ದ ಗಿಡಗಳು ನೀರಿಲ್ಲದೆ ಸತ್ತು ಹೋಗಿರುತ್ತವೆ. ಮನೆಯ ಸನಿಹ ಇಟ್ಟ ಖಾಲಿ ಖಾಲಿ ಡಬ್ಬಗಳು, ಟಯರ್‌ಗಳು, ತೆಂಗಿನ ಚಿಪ್ಪುಗಳು ಹಾಗೇ ಬಿದ್ದಿರುತ್ತವೆ. ಅವೆಲ್ಲವುಗಳಲ್ಲಿ ಕಸಕಡ್ಡಿ, ಮಣ್ಣು, ಧೂಳು ತುಂಬಿಕೊಂಡಿರುತ್ತವೆ. ಮಳೆ ಬಂದ ತಕ್ಷಣ ಅವುಗಳಲ್ಲಿ ನೀರು ತುಂಬಿಕೊಳ್ಳುತ್ತದೆ. ಕೆಲವೇ ದಿನಗಳಲ್ಲಿ ಕಸಕಡ್ಡಿಯೊಂದಿಗೆ ನೀರು ಕೊಳೆಯುತ್ತದೆ. ಸೊಳ್ಳೆಗಳು ಕುಳಿತು ಮೊಟ್ಟೆ ಹಾಕುತ್ತವೆ, ಕ್ರಮೇಣ ಅಲ್ಲಿ ಲಾರ್ವಾಗಳು ಹುಟ್ಟಿಕೊಳ್ಳುತ್ತವೆ. ಮುಂದೆ ಅವೇ ಈಡಿಸ್ ಸೊಳ್ಳೆಗಳಾಗಿ ನಮ್ಮ ಮನೆಯೊಳಗೆ ನೇರ ಪ್ರವೇಶ ಪಡೆದುಕೊಳ್ಳುತ್ತವೆ. ಆ ಕ್ಷಣದಿಂದಲೇ ರೋಗಗಳೂ ನಮ್ಮ ಮನೆಯೊಳಗೆ ಎಂಟ್ರಿ ಪಡೆದುಕೊಂಡವು ಎಂದೇ ಅರ್ಥ.

ಹಾಗಾದರೆ ಇದಕ್ಕೆ ಕಾರಣರು ಯಾರು? ನಾವೇ. ನಮ್ಮ ಮೈಮರೆವಿನಿಂದಲೇ ಇವೆಲ್ಲವೂ ಆಗಿರುತ್ತದೆ. ಮಳೆ ಬೀಳುವುದಕ್ಕೂ ಮುನ್ನವೇ ನಮ್ಮ ಮನೆಯ ಸುತ್ತಮುತ್ತ ಸ್ವಚ್ಛಗೊಳಿಸುವ ಕೆಲಸವನ್ನು ಕಡ್ಡಾಯವಾಗಿ ಮಾಡಲೇಬೇಕು. ಕೆಟ್ಟು ಕುಳಿತಿರುವ ಯಾವುದೇ ಪಾತ್ರೆ–ಪಗಡಿ ಏನಿದ್ದರೂ ಮೊದಲು ಅದನ್ನು ಎಸೆದು ಬನ್ನಿ. ಇಲ್ಲದೇ ಹೋದರೆ ರೋಗಗಳಿಗೆ ನಾವೇ ಮನೆ ಮಾಡಿಕೊಟ್ಟಂತೆ. ಮನೆಯ ಮುಂದೆ ದೊಡ್ಡ ಕುಂಡಗಳಿನ್ನಿಟ್ಟು ಅದರ ತುಂಬಾ ನೀರು ತುಂಬಿ ಹೂವುಗಳನ್ನು ಬೆಳೆಸುವ ಅಭ್ಯಾಸ ನಿಮಗಿದ್ದರೆ ಅದೇನು ತಪ್ಪಲ್ಲ. ಆದರೆ ಮೊದಲು ಆ ನೀರಿನ ಪಾತ್ರೆಯೊಳಗೆ ಗಪ್ಪೀಸ್ ಮೀನುಗಳನ್ನು ಹಾಕಿ. ಅವು ನೀರನ್ನು ಕ್ಲೀನ್ ಮಾಡುವುದು ಮಾತ್ರವಲ್ಲದೆ ಲಾರ್ವಾಗಳನ್ನು ಬೆಳೆಯಲು ಬಿಡುವುದಿಲ್ಲ. ಎಳೆಯದರಲ್ಲೇ ತಿಂದು ಮುಗಿಸಿಬಿಡುತ್ತವೆ.

ನಾವೇ ಮಾಡಿಕೊಳ್ಳುವ ಸ್ವಚ್ಛತೆಯೇ ರೋಗಗಳಿಗೆ ಪ್ರತಿಬಂಧಕ. ನಾವು ಸಕಾಲದಲ್ಲಿ ಎಚ್ಚೆತ್ತುಕೊಳ್ಳದೇ ಹೋದರೆ ಡೆಂಗ್ಯು. ಚಿಕುಂಗುನ್ಯ, ಮಲೇರಿಯಾ, ಕಾಲರಾ, ಮೊನ್ನೆ ಮೊನ್ನೆ ಹುಟ್ಟಿಕೊಂಡ ನಿಫಾ ಜ್ವರ ಸೇರಿದಂತೆ ಅನೇಕ ರೋಗಗಳು ನಮ್ಮ ಜೀವವನ್ನೇ ತೆಗೆದುಬಿಡುವ ಅಪಾಯವಿರುತ್ತದೆ. ಮನೆಯೊಳಗೆ ಪ್ರವೇಶ ಪಡೆದುಕೊಂಡ ಸೊಳ್ಳೆಗೆ ದೊಡ್ಡವರು ಚಿಕ್ಕವರೆಂಬ ಭೇದ–ಭಾವ ಇರುವುದಿಲ್ಲ. ಮಕ್ಕಳು ಬಹುಬೇಗ ಅದಕ್ಕೆ ಈಡಾಗಿ ಬಿಡಬಹುದು. ರೋಗಗಳ ತಡೆಗೆ ವಹಿಸಬೇಕಾದ ಮೊದಲ ಎಚ್ಚರಿಕೆ ಎಂದರೆ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು. ಯಾವುದೇ ತಿಂಡಿಯನ್ನು ತಿನ್ನುವ ಮೊದಲು ಕೈಗಳನ್ನು ತೊಳೆಯದೇ ಮುಟ್ಟದಿರಿ ಎಂದು ಕಟ್ಟಪ್ಪಣೆ ಮಾಡಿಬಿಡಿ. ಮನೆಯ ವಾಶ್‌ಬೇಸಿನ್, ಟ್ಯಾಪ್ ಪಕ್ಕ ಒಂದು ಹ್ಯಾಂಡ್‌ವಾಶ್ ಕಡ್ಡಾಯವಾಗಿ ಇಟ್ಟುಬಿಡಿ. ಮನೆಯಿರಲಿ, ಶಾಲೆ, ಕಚೇರಿಗಳಿರಲಿ ಇವು ತೀರಾ ಪ್ರಾಥಮಿಕವಾಗಿ ಪಾಲಿಸಬೇಕಾದ ನಿಯಮಗಳು. ಇಷ್ಟು ಮಾಡಿಬಿಟ್ಟರೆ ಮಕ್ಕಳಿಂದ ದೊಡ್ಡವರ ತನಕ ಅರ್ಧಕ್ಕರ್ಧ ಕಾಯಿಲೆಗಳಿಗೆ ಅಂಕುಶ ಹಾಕಿದಂತೆ.

ಮುಂಗಾರು ಆರಂಭವಾಗುವುದಕ್ಕೂ ಮುನ್ನವೇ ನಮ್ಮ ಇಲಾಖೆಗಳು, ಜಿಲ್ಲಾಡಳಿತಗಳು ಎಚ್ಚರಿಕೆಗಳನ್ನು ಕೊಟ್ಟಿರುತ್ತವೆ. ವೈರಸ್‌ಗಳು ಹುಟ್ಟಿಕೊಳ್ಳುವುದು ಎಲ್ಲಿ, ಪ್ರತಿಬಂಧಕ ಕ್ರಮಗಳನ್ನು ಕೈಗೊಳ್ಳುವ ವಿಧಾನಗಳು ಹೇಗೆ ಎಂಬ ಬಗ್ಗೆ ಅನೇಕ ಮಾಧ್ಯಮಗಳ ಮೂಲಕ ಟಿಪ್ಸ್ ಕೊಟ್ಟಿರುತ್ತವೆ. ಸ್ವಚ್ಛತೆಗೆ ಆದ್ಯತೆ ಕೊಡಿ ಎಂದು ಪದೆ ಪದೇ ಮನವಿ ಮಾಡಿಕೊಂಡಿರುತ್ತವೆ. ಆದರೆ ಮರೆತಿರುತ್ತೇವೆ. ರೋಗ ಬಂದ ಬಳಿಕ ಬೇರೆಯವರ ಮೇಲೆ ಬೊಟ್ಟು ಮಾಡುತ್ತೇವೆ. ಯಾವತ್ತೂ ಸ್ವಚ್ಛಂದವಾಗಿ ಇರಲು ಇಷ್ಟಪಡುವ ಮಕ್ಕಳು ಸ್ವಚ್ಛತೆ ಮರೆಯದಂತೆ ಮುಂಜಾಗ್ರತೆ ವಹಿಸಬೇಕಾದುದು ಆ ಮನೆಯ ಹಿರಿಯರು ಎಂಬುದನ್ನು ಮರೆಯಬಾರದು. ಮನೆಗಳಲ್ಲಿ ಮಾತ್ರವಲ್ಲ, ಶಾಲೆಗಳಲ್ಲಿಯೂ ವಿದ್ಯಾರ್ಥಿಗಳು ಸ್ವಚ್ಛತೆಯನ್ನು ಕಾಯ್ದುಕೊಳ್ಳಲು ಶಿಕ್ಷಕರು ಎಚ್ಚರಿಕೆ ವಹಿಸಬೇಕಾಗತ್ತದೆ. ಶಾಲೆಗೆ ಊಟದ ಡಬ್ಬಿ



### ಡೆಂಗ್ಯು ನಿರೋಧಕ ಲಸಿಕೆ

ಇತ್ತೀಚಿನ ದಿನಗಳಲ್ಲಿ ಡೆಂಗ್ಯು ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚಿನ ಅರಿವು ಮೂಡುತ್ತಿದೆ. ಅದು ಬಾರದಂತೆ ತಡೆಯಲು ಪರಿಣಾಮಕಾರಿ ದಾರಿಗಳಿವೆ. ಡೆಂಗ್ಯು ನಾಲ್ಕು ರೀತಿಯ ವೈರಸ್‌ಗಳಿಂದ ಹರಡುತ್ತದೆ. ಇದನ್ನು ಪರಿಣಾಮಕಾರಿಯಾಗಿ ತಡೆಯಲು ಡೆಂಗ್ಯು ನಿರೋಧಕ ಲಸಿಕೆಯನ್ನು ಅಭಿವೃದ್ಧಿಪಡಿಸಲಾಗಿದೆ. 2015ರಲ್ಲಿಯೇ ಸಿದ್ಧಪಡಿಸಲಾದ ಈ ಲಸಿಕೆಗೆ ವಿಶ್ವ ಆರೋಗ್ಯ ಸಂಸ್ಥೆ (WHO) ಮಾನ್ಯತೆಯ ಮುದ್ರೆ ಒತ್ತಿದೆ. ಈ ಚುಚ್ಚುಮದ್ದನ್ನು ಪಡೆದುಕೊಳ್ಳುವುದರಿಂದ ಶೇ.25ರಷ್ಟು ಸೋಂಕು ಹರಡದಂತೆ ತಡೆಯಬಹುದು ಮತ್ತು ಶೇ.50ರಷ್ಟು ಮರಣವನ್ನು ತಪ್ಪಿಸಬಹುದು ಎಂದು ಅದು ತನ್ನ ವೆಬ್‌ತಾಣದಲ್ಲಿಯೇ ಪ್ರಕಟಿಸಿದೆ. ಸನೋಫಿ ಫಾಶ್ಚರ್ ಎಂಬ ಸಂಸ್ಥೆ ಅಭಿವೃದ್ಧಿಪಡಿಸಿದ ಈ ಲಸಿಕೆಯನ್ನು ವೈದ್ಯರ ಸಲಹೆ ಮೇರೆಗೆ ಪಡೆದುಕೊಳ್ಳಬಹುದು. 6 ರಿಂದ 12 ತಿಂಗಳುಗಳ ಅವಧಿಯಲ್ಲಿ ಮೂರು ಡೋಸ್ ರೀತಿಯಲ್ಲಿ ನೀಡುವ ಈ ಲಸಿಕೆಯನ್ನು 9 ರಿಂದ 45 ವರ್ಷ ವಯಸ್ಸಿನ ವ್ಯಕ್ತಿಗಳು ಪಡೆದುಕೊಳ್ಳಲು ಅರ್ಹರು ಎಂದು ಡಬ್ಲ್ಯುಎಚ್‌ಓ ತಿಳಿಸಿದೆ. ಮೊದಲು ಈ ಲಸಿಕೆಗೆ ಲೈಸೆನ್ಸ್ ಕೊಟ್ಟ ರಾಷ್ಟ್ರ ಮೆಕ್ಸಿಕೊ. ಆ ಬಳಿಕ 20 ದೇಶಗಳು ಪರವಾನಗಿ ಕೊಟ್ಟಿವೆ. ಇನ್ನೂ ಎರಡು ಲಸಿಕೆಗಳ ಅಭಿವೃದ್ಧಿ ಕೂಡ ಈಗ ಪ್ರಗತಿಯಲ್ಲಿದೆ. ಅವುಗಳ ಕ್ಲಿನಿಕಲ್ ಪರೀಕ್ಷೆ ಕೂಡ ನಡೆಯುತ್ತಿದೆ.





downloaded from: www.kpscvaani.com



**ರೋಗ ನಿರೋಧಕ್ಕೆ ಸರಳ ಸೂತ್ರಗಳು**

- ಬೆಳಿಗ್ಗೆ ಎದ್ದ ತಕ್ಷಣ ಎರಡರಿಂದ ಮೂರು ಲೋಟ ಬಿಸಿ ನೀರು ಕುಡಿಯಿರಿ
- ಯಾವುದೇ ಆಹಾರ ಸೇವಿಸಿದ ನಲವತ್ತು ನಿಮಿಷದ ಬಳಿಕ ಬಿಸಿ ನೀರು ಕುಡಿಯಿರಿ
- ಪ್ರತಿ ಬಾರಿಯು ಬಿಸಿ ನೀರನ್ನೇ ಕುಡಿಯುವ ಅಭ್ಯಾಸ ಮಾಡಿಕೊಳ್ಳಿ
- ಈ ವಿಧಾನಗಳನ್ನು ದಿನವೂ ಮಾಡುವುದರಿಂದ ಬಹುತೇಕ ರೋಗಗಳಿಗೆ ಅಂಕುಶ ಸಾಧ್ಯ.

ಕೊಂಡೊಯ್ಯುವ ಮಗುವಿನ ಚೀಲದಲ್ಲಿ ಒಂದು ಪುಟ್ಟ ಟವೆಲ್ಲು, ಪೇಪರ್ ಸುತ್ತಿದ ಚಮಚವನ್ನು ನೀಟ್ ಆಗಿ ಇಡುವ ಪ್ರಯತ್ನವನ್ನು ಹಿರಿಯರು ಯಾವತ್ತೂ ಮಾಡಬೇಕು. ಅದು ದೊಡ್ಡವರಾದ ನಾವು ಪಾಲಿಸಬೇಕಾದ ಕನಿಷ್ಠ ನಿಯಮಗಳು. ಅದು ನಮ್ಮ ಮನಸ್ಥಿತಿ ಕೂಡ ಹೌದು. ಒಂದು ಮಗುವಿನಿಂದ ಆರಂಭವಾದ ರೋಗದ ಸರಪಣಿ ಮನೆ ಮಂದಿಯನ್ನೆಲ್ಲ ಬಾಧಿಸುತ್ತಾ ಹೋಗಬಹುದು ಎಂಬುದನ್ನು ಮರೆಯದಿರಿ. ಹಗಲಿನಲ್ಲಿ ಮಾತ್ರ ಮನುಷ್ಯರನ್ನು ಕಚ್ಚುವ ಗುಣ ಹೊಂದಿರುವ ಪುಟ್ಟ ಪುಟ್ಟ ಈ ಈಡಿಸ್ ಹೆಸರಿನ ಸೊಳ್ಳೆಗಳು ಹುಟ್ಟದಂತೆ ತಡೆಯುವ, ಅದು ಸಾಧ್ಯವಾಗದಿದ್ದರೆ ನಮ್ಮನ್ನು ಮುಟ್ಟದಂತೆ ತಡೆಯುವ ಶಕ್ತಿ ನಮಗಿದೆ ಎಂಬುದನ್ನೇ ಮರೆತು ಬಿಡುತ್ತೇವೆ.

ಈ ಬಾರಿ ಮುಂಗಾರು ಪೂರ್ವದಲ್ಲಿಯೇ ಡೆಂಗ್ಯೂ ಜ್ವರ ದೊಡ್ಡ ಎಚ್ಚರಿಕೆಯನ್ನೇ ಕೊಟ್ಟಿದೆ ಎನ್ನುತ್ತಾರೆ ವೈದ್ಯರು. ಹಿಂದಿನೆಲ್ಲ ವರ್ಷಗಳಿಗೆ ಹೋಲಿಸಿದರೆ ಈ ಬಾರಿ ಡೆಂಗ್ಯು ಬಾಧೆಗೆ ಒಳಗಾದವರ ಸಂಖ್ಯೆ ಹೆಚ್ಚು ಎಂಬುದು ಅತ್ಯಂತ ಆತಂಕಕಾರಿಯಾಗಿದೆ. ಹಾಗಾಗಿ ಮಳೆಗಾಲದ ದಿನಗಳಲ್ಲಿ ಈ ರೋಗ ಹರಡುವ ವೇಗ ಜಾಸ್ತಿಯಾದೀತು ಎಂಬ ಸೂಚನೆಯನ್ನೂ ಅವರು ಕೊಡುತ್ತಾರೆ. ಕೆಲವು ಸಂಕೀರ್ಣ ಪ್ರಕರಣಗಳನ್ನೂ ವೈದ್ಯರು ಎದುರಿಸುವ ಸಂದರ್ಭಗಳು ಬಂದಿದ್ದು ಅವುಗಳಿಗೆ ಸಕಾಲದಲ್ಲಿ ಚಿಕಿತ್ಸೆ ನೀಡಬೇಕಾದ ಅಗತ್ಯವಿರುತ್ತದೆ. ಡೆಂಗ್ಯೂ ಕಂಡು ಬಂದ ಮೇಲೆ ರಕ್ತದಲ್ಲಿನ ಪ್ಲೇಟ್ಲೆಟ್ ಕ್ಷಿಪ್ರವಾಗಿ ಕುಸಿಯುತ್ತಿರುವುದು ಮತ್ತು ಕೆಲವರಲ್ಲಿ ಲಿವರ್‌ನ ಉರಿಯೂತ ಕಂಡು ಬಂದಿರುವುದು ಆತಂಕಕಾರಿ. ರೋಗ ಆ ಹಂತದ ತನಕ ಉಲ್ಬಣಿಸದಂತೆ ಎಚ್ಚರಿಕೆಯಿಂದ ಇರಬೇಕು ಎಂದು ವೈದ್ಯರು ಹೇಳುತ್ತಾರೆ.

**ಡೆಂಗ್ಯುಗೆ ಅಂಕುಶ ಹಾಕಲು ಹೀಗೆ ಮಾಡಿ**

- ಯಾವತ್ತೂ ಕುದಿಸಿ ಆರಿಸಿದ ನೀರನ್ನೇ ಕುಡಿಯಿರಿ
- ಮನೆಯ ಸುತ್ತ ಸೊಳ್ಳೆಗಳು ಹುಟ್ಟಿಕೊಳ್ಳದಂತೆ ಎಚ್ಚರಿಕೆ ವಹಿಸಿ
- ಸೊಳ್ಳೆ ಕಚ್ಚದಂತೆ ಮೈತುಂಬಾ ಬಟ್ಟೆಗಳನ್ನು ಧರಿಸಿ
- ಮಲಗುವಾಗ ಸೊಳ್ಳೆ ಪರದೆ ಕಟ್ಟಿ ಅಥವಾ ಮನೆಯ ಕಿಟಕಿಗಳಿಗೆ ಸೊಳ್ಳೆ ಪರದೆ ಅಳವಡಿಸಿ
- ತೆರೆದ ತೊಟ್ಟಿಗಳಲ್ಲಿ ಹೆಚ್ಚು ನೀರು ಸಂಗ್ರಹವಾಗದಂತೆ ಎಚ್ಚರಿಕೆ ವಹಿಸಿ
- ತಾಜಾ ಆಹಾರವನ್ನೇ ಸೇವಿಸಿ

**ನಿಫಾ ಜ್ವರದ ಲಕ್ಷಣಗಳು**

- ಆರಂಭದಲ್ಲಿ ಫ್ಲೂ ರೀತಿಯ ಜ್ವರದ ಲಕ್ಷಣ
- ಬಳಿಕ ತಲೆನೋವು, ಮೈಕೈನೋವು
- ನಿರಂತರ ವಾಂತಿ ಮತ್ತು ನಡುಕ
- ನಿದ್ರಾಲಸ್ಯದಿಂದ ಮಾತು ತೊದಲುತ್ತದೆ
- ಪ್ರಜ್ಞೆ ತಪ್ಪುವುದು ರೋಗದ ಉಲ್ಬಣಾವಸ್ಥೆ

ಒಬ್ಬ ಆರೋಗ್ಯವಂತ ವ್ಯಕ್ತಿಯಲ್ಲಿ ಬಿಳಿ ರಕ್ತದ ಕಣಗಳು ಹೆಚ್ಚಿನ ಪ್ರಮಾಣದಲ್ಲಿರುವುದು ಅತ್ಯಗತ್ಯ. ಆರೋಗ್ಯವಂತ ವ್ಯಕ್ತಿಯಲ್ಲಿ ಇದು 1.50 ಲಕ್ಷದಿಂದ 4.50 ಲಕ್ಷದ ತನಕವೂ ಇರುತ್ತದೆ. ಒಮ್ಮೆ ಡೆಂಗ್ಯು ವೈರಸ್ ದಾಳಿ ಮಾಡಿತೋ ಅದು ಮೊದಲು ಬರಿದು ಮಾಡುತ್ತಾ ಹೋಗುವುದು ಈ ಬಿಳಿರಕ್ತದ ಕಣಗಳನ್ನು. ಅದರ ಪ್ರಮಾಣ ಕುಸಿಯುತ್ತಾ ಹೋಗುತ್ತಿದ್ದಂತೆ ದೇಹದಲ್ಲಿ ರೋಗ ನಿರೋಧಕ ಶಕ್ತಿ ಕುಂದುತ್ತಾ ಹೋಗುತ್ತದೆ. ಅದರ ಪ್ರಮಾಣ ಒಂದು ಲಕ್ಷಕ್ಕಿಂತ ಕೆಳಗೆ ಕುಸಿಯುತ್ತದೋ ಆ ಕ್ಷಣದಿಂದಲೇ ಅಪಾಯದ ಕ್ಷಣಗಣನೆ ಆರಂಭ ಎಂದೇ ಲೆಕ್ಕ. ಅದು ಇನ್ನಷ್ಟು ತಗ್ಗದಂತೆ ಮುಂಜಾಗ್ರತೆ ವಹಿಸುವುದು ಅನಿವಾರ್ಯ. ರಕ್ತದಲ್ಲಿನ ಬಿಳಿಯ ಕಣಗಳನ್ನು (ಪ್ಲೇಟ್ಲೆಟ್) ತೆಗೆದು ನಮ್ಮ ದೇಹಕ್ಕೆ ನೀಡಬೇಕಾಗುತ್ತದೆ. ಬಿಟ್ಟು ಬಿಟ್ಟು ಜ್ವರ ಬರುವುದು, ತಲೆ, ಕೀಲು ಮತ್ತು ಮಾಂಸಖಂಡಗಳಲ್ಲಿ ಅತೀವ ನೋವು ಕಾಣಿಸಿಕೊಳ್ಳುವುದು, ನಡೆಯಲಾರದಷ್ಟು ಸುಸ್ತು ಈ ರೋಗದ ಇನ್ನಿತರ ಲಕ್ಷಣಗಳಾಗಿವೆ. ರೋಗ ಉಲ್ಬಣಿಸುತ್ತಾ ಹೋದ ಹಾಗೆ ಮೈಯಲ್ಲಿ ತುರಿಕೆ, ಗುಳ್ಳೆಗಳು ಹಾಗೂ ರಕ್ತಸ್ರಾವ ಕಂಡುಬರುತ್ತದೆ. ಅಲ್ಲಿಯ ತನಕವೂ ನಿರ್ಲಕ್ಷ್ಯ ಮಾಡಿದ್ದರೆ ತಕ್ಷಣ ಆಸ್ಪತ್ರೆಗೆ ಧಾವಿಸಿ ಬಿಳಿ ರಕ್ತದ ಕಣಗಳನ್ನು ನೀಡುವ ವ್ಯವಸ್ಥೆ ಮಾಡಬೇಕಾಗುತ್ತದೆ.





ಇತ್ತೀಚೆಗೆ ಕೇರಳದಲ್ಲಿ ಕಾಣಿಸಿಕೊಂಡು ಬಹಳಷ್ಟು ಆತಂಕಕ್ಕೆ ಕಾರಣವಾಗಿರುವ ನಿಫಾ ವೈರಸ್ ರಾಜ್ಯದಲ್ಲಿ ಹಬ್ಬದೇ ಇರುವಂತೆ ಮಾಡಲು ರಾಜ್ಯ ಸರಕಾರ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ. ರಾಜ್ಯದ ಜನರಲ್ಲಿ ಅರಿವು ಮೂಡಿಸುವ ಕೆಲಸದಲ್ಲಿಯೂ ಆರೋಗ್ಯ ಇಲಾಖೆ ಮುಂಚೂಣಿಯಲ್ಲಿ ನಿಂತಿದೆ. ಈ ರೋಗ ಹರಡಲು ಬಾವಲಿಗಳೇ ಮೂಲ ಎಂದು ಶಂಕಿಸಲಾಗಿದ್ದು, ಅವುಗಳ ಹಿಕ್ಕೆಯ ಸಂಪರ್ಕಕ್ಕೆ ಬಂದ ನಾಯಿ, ಹಂದಿ, ಬೆಕ್ಕುಗಳಂತಹ ಪ್ರಾಣಿಗಳು ಸೋಂಕು ಹರಡುವುದಕ್ಕೆ ದಾರಿ ಮಾಡಿಕೊಡುತ್ತವೆ ಎಂದು ತಜ್ಞರು ಎಚ್ಚರಿಕೆ ನೀಡುತ್ತಾರೆ. ಹಾಗಾಗಿ ಇಂತಹ ಪ್ರಾಣಿಗಳನ್ನು ದೂರವಿಡುವುದು ಅಥವಾ ಪ್ರತ್ಯೇಕವಾಗಿ ಇಡುವುದು ಸೋಂಕು ತಗುಲದಂತೆ ವಹಿಸುವ ಮೊದಲ ಎಚ್ಚರಿಕೆಯಾಗುತ್ತದೆ.

ಮಳೆಗಾಲ ಆರಂಭವಾಗುವ ಸಂದರ್ಭದಲ್ಲಿ ಕಲ್ಮಶಗೊಂಡ ನೀರು ಮತ್ತು ಆಹಾರ ಸೇವನೆಯಿಂದಾಗಿ ಐದು ವರ್ಷದೊಳಗಿನ ಮಕ್ಕಳಲ್ಲಿ ಅತಿಸಾರ ಭೇದಿಯು ಕಾಣಿಸಿಕೊಳ್ಳುತ್ತದೆ. ಅದೂ ಕೂಡ ಬಡವರ್ಗದ ಗುಡ್ಡಗಾಡು ಪ್ರದೇಶದ ಮಕ್ಕಳು ಇದಕ್ಕೆ ಹೆಚ್ಚು ಬಲಿಯಾಗುತ್ತಿದ್ದಾರೆ. ಅತಿಸಾರ ಭೇದಿಯನ್ನು ತಡೆಗಟ್ಟಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಜಿಂಕ್ ಗುಳಿಗೆ ಮತ್ತು ಒಆರ್‌ಎಸ್ ಅನ್ನು ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರ ಮೂಲಕ ವಿತರಿಸುವ ವ್ಯವಸ್ಥೆಯನ್ನು ಈಗಾಗಲೇ ಪ್ರಾರಂಭಿಸಿದೆ.

**ಮಳೆ ಬೀಳುವುದಕ್ಕೂ ಮುನ್ನವೇ ನಮ್ಮ ಮನೆಯ ಸುತ್ತಮುತ್ತ ಸ್ವಚ್ಛಗೊಳಿಸುವ ಕೆಲಸವನ್ನು ಕಡ್ಡಾಯವಾಗಿ ಮಾಡಲೇಬೇಕು. ಇಲ್ಲದೇ ಹೋದರೆ ರೋಗಗಳಿಗೆ ನಾವೇ ಮನೆ ಮಾಡಿಕೊಟ್ಟಂತೆ.**

**ಹಣ್ಣುಗಳಿಂದ ಬಂದೀತು...**

**ಹಣ್ಣುಗಳ ರಾಜ ಮಾವಿನ ಹಣ್ಣು ಯಾವತ್ತೂ ನಮ್ಮನ್ನು ಆಕರ್ಷಿಸುತ್ತದೆ. ರುಚಿರುಚಿಯಾಗಿರುವ ಮಾವಿನ ಹಣ್ಣುಗಳನ್ನು ತಿನ್ನದವನು ಮೂರ್ಖನೇ ಸರಿ. ಆದರೆ ಒಮ್ಮೆ ಮಳೆ ಬಂತೋ ಅದರ ರುಚಿಯೂ ಕೆಡುತ್ತದೆ, ಶುಚಿತ್ವವೂ ಮಾಯವಾಗುತ್ತದೆ. ಮಳೆ ಬಂದ ನಂತರದ ಮಾವಿನ ಫಸಲಿನಲ್ಲಿ ಚುಕ್ಕಿಗಳು ಕಾಣಿಸಿಕೊಳ್ಳುತ್ತವೆ. ಹುಳುಗಳು ಬಹುಬೇಗ ದಾಳಿ ಮಾಡಿಬಿಡುತ್ತವೆ. ಹಕ್ಕಿಗಳೂ ಕಚ್ಚಿರಬಹುದು. ಬಾವಲಿಗಳೂ ತಿಂದಿರಬಹುದು. ಅವುಗಳನ್ನು ತಿಂದರೆ ಹೊಟ್ಟೆ ನೋವು ಕಾಣಿಸಿಕೊಳ್ಳುತ್ತದೆ. ಆದ್ದರಿಂದ ಪಕ್ಷಿಗಳು ಕಚ್ಚಿರುವಂತಹ ಹಣ್ಣುಗಳಿಂದ ಸಾಧ್ಯವಾದಷ್ಟು ದೂರವಿರಿ.**

ಮೇಲೆ ಪ್ರಸ್ತಾಪಿಸಿದ ಎಲ್ಲ ರೋಗಗಳೂ ಮಳೆಗಾಲ ಬಂತೆಂದರೆ ದಾಂಗುಡಿ ಇಡಲು ಶುರುಮಾಡುತ್ತವೆ. ಇದಕ್ಕೆ ನಾವು ಮಳೆಗಾಲವನ್ನು ದೂಷಿಸಿ ಪ್ರಯೋಜನವಿಲ್ಲ. ಭೂಮಿಯ ಮೇಲಿನ ತಾಪಮಾನ ತಗ್ಗಿ ತಂಪು ಆವರಿಸಿಕೊಂಡಾಗ ಹವಾಮಾನದಲ್ಲಿ ಏರುಪೇರಾಗುವುದು ಸರ್ವೇಸಾಮಾನ್ಯ. ಆ ಕಾರಣದಿಂದ ಅನೇಕ ವೈರಸ್‌ಗಳು ಉತ್ಪತ್ತಿಯಾಗುತ್ತವೆ. ಜೀವನದಲ್ಲಿ ಸರಿದು ಹೋಗುವ ಎಲ್ಲ ಋತುಗಳಲ್ಲಿಯೂ ಒಂದಲ್ಲ ಒಂದು ಕಾಯಿಲೆಗಳು ಸಹಜ. ಆಯಾ ವಾತಾವರಣಕ್ಕೆ ಪೂರಕವಾಗಿ ಹಳೆ ವೈರಸ್‌ಗಳು ಸತ್ತು ಹೊಸ ವೈರಸ್‌ಗಳು ಹುಟ್ಟಿಕೊಳ್ಳುತ್ತವೆ. ಅದು ಸೃಷ್ಟಿಯ ನಿಯಮ ಕೂಡ. ಆದರೆ ಮನುಷ್ಯ ಮಾತ್ರ ಎಲ್ಲಕ್ಕಿಂತ ಬುದ್ಧಿವಂತ ಪ್ರಾಣಿ. ಅವನ ಬುದ್ಧಿವಂತಿಕೆಯಿಂದಲೇ ಅನೇಕ ರೋಗಗಳಿಗೆ ಅಂಕುಶ ಕೂಡ ಹಾಕಲು ಸಾಧ್ಯವಿದೆ. ಅಷ್ಟಿದ್ದರೂ ನಮ್ಮಲ್ಲಿರುವ ಆಲಸ್ಯ, ಅಸಡ್ಡೆಯಿಂದ ಅನೇಕ ಶತ್ರುಗಳನ್ನು ಮನೆಯೊಳಗೆ ಸೇರಿಸಿಕೊಂಡು ಬಿಡುತ್ತೇವೆ. ಅದಕ್ಕೆ ಮಳೆಗಾಲದಲ್ಲಿ ಬರುವ ರೋಗಗಳದ್ದೂ ಒಂದು ಉದಾಹರಣೆಯಷ್ಟೆ. ಎಚ್ಚರಿಕೆ ವಹಿಸಿದರೆ ಎಂತಹ ಅಪಾಯವನ್ನಾದರೂ ತಡೆದು ನಿಲ್ಲಿಸಬಹುದು ಮತ್ತು ನೆಮ್ಮದಿಯಿಂದಲೂ ಬದುಕಬಹುದು. ■





downloaded from: www.kpscvaani.com

# ಅರಬಿ ಸಮುದ್ರದಲ್ಲಿ ಕಂಗೊಳಿಸುವ


# ನೇತ್ರಾಣಿ ನಡುಗಡ್ಡೆ

ಮಂಜುನಾಥ್ ನಾಯ್ಕ್

**ಭ**ಟ್ಕಳ ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಸುಂದರ ಬಂದರು ನಗರಿ. ಪಶ್ಚಿಮ ಘಟ್ಟ ಹಾಗೂ ಅರಬಿ ಸಮುದ್ರದ ಮಧ್ಯ ಹರಡಿರುವ ಸುಂದರ ನೈಸರ್ಗಿಕ ಪುಟ್ಟ ನಗರದಲ್ಲಿ ಹಲವಾರು ವೈಶಿಷ್ಟ್ಯಗಳನ್ನು ಮತ್ತು ಪ್ರವಾಸಿ ತಾಣಗಳನ್ನು ಹೊಂದಿದೆ, ಜಗದ್ವಿಖ್ಯಾತ ಮುರುಡೇಶ್ವರ ದೇವಸ್ಥಾನ, ಸುಂದರವಾದ ಬೀಚ್‌ಗಳು, ಸಮುದ್ರಕ್ಕೆ ಮೈ ಚಾಚಿಕೊಂಡ ಆಕರ್ಷಕ ಬೆಟ್ಟಗುಡ್ಡಗಳು. ಸಮುದ್ರ ನಾವಿಕರಿಗೆ ನಿರ್ದೇಶನ ನೀಡುವ ಅತ್ಯಾಕರ್ಷಕ ಲೈಟ್ ಹೌಸ್, ಹಾಡುವಳ್ಳಿಯಲ್ಲಿರುವ 24 ಜೈನ ತೀರ್ಥಂಕರರ ಸ್ಮಾರಕ ಹೀಗೆ ಹಲವಾರು ಆಕರ್ಷಕ ತಾಣಗಳನ್ನು ಇಲ್ಲಿ ನೋಡಬಹುದು.

ಈ ನಗರದ ಇನ್ನೊಂದು ವಿಶೇಷವೆಂದರೆ ನೇತ್ರಾಣಿ ನಡುಗಡ್ಡೆ. ಮುರುಡೇಶ್ವರ ದಿಂದ 10 ನಾಟಿಕಲ್ ಮೈಲಿ ದೂರದಲ್ಲಿ ಅಂದರೆ 19 ಕಿಮಿ ದೂರದಲ್ಲಿದೆ. 30 ಏಕರೆ ಅರಣ್ಯ ಪ್ರದೇಶವನ್ನು ಹೊಂದಿರುವ ನೇತ್ರಾಣಿ ದ್ವೀಪವನ್ನು ಪಾರಿವಾಳ ದ್ವೀಪವೆಂದು ಕರೆಯಲಾಗುತ್ತದೆ. ಆದರೆ ನೇತ್ರಾಣಿ ಎಂಬ ಹೆಸರು ಹೆಚ್ಚು ಜನಜನಿತ ಹಾಗೂ ಜನಪ್ರಿಯವಾಗಿದೆ. ಸಮುದ್ರದಲ್ಲಿರುವ ಹೆಚ್ಚಿನ ಸಂಖ್ಯೆಯ ದ್ವೀಪಗಳು ಬೀಚ್‌ಗಳನ್ನು ಹೊಂದಿವೆ. ಆದರೆ ನೇತ್ರಾಣಿ ದ್ವೀಪಕ್ಕೆ ಆ ರೀತಿಯ ಬೀಚ್‌ಗಳ ಆಕರ್ಷಣೆ ಇಲ್ಲ. ಇದು ಸಂಪೂರ್ಣವಾಗಿ ಕಡಿದಾದ ಕಲ್ಲು ಬಂಡೆಯಿಂದ ಕೂಡಿದೆ. ಈ ಬಂಡೆಗಳಿಗೆ ನಿರಂತರವಾಗಿ ಸಮುದ್ರದ ಅಲೆಗಳು ಅಪ್ಪಳಿಸುತ್ತಿರುತ್ತವೆ. ನೇತ್ರಾಣಿ ದ್ವೀಪದ ಮಧ್ಯ ಭಾಗದಲ್ಲಿ ಸುರಂಗದಂತಹ ಕಿರಿದಾದ ದಾರಿಯಿದ್ದು, ಸಮುದ್ರದ ನೀರು ಈ ಭಾಗದಲ್ಲಿ ಸರಾಗವಾಗಿ ಹರಿಯುತ್ತದೆ. ಇದಕ್ಕೆ ಭೀಮನ ಕಿಂಡಿಯೆಂತಲೂ ಕರೆಯುತ್ತಾರೆ. ನೇತ್ರಾಣಿ ದ್ವೀಪದ ಹತ್ತಿರದ ಅರಬಿ ಸಮುದ್ರ 200 ಮೀಟರ್ ಆಳ ಹೊಂದಿದ್ದು, ಮಧ್ಯಾಹ್ನದ ಸೂರ್ಯನ ಬೆಳಕಿನಲ್ಲಿ ಶುಭ್ರವಾದ ನೀರಿನಲ್ಲಿ ಸಮುದ್ರದ ಆಳವನ್ನು ಬರಿಗಣ್ಣಿನಲ್ಲಿ ನೋಡುವುದೇ ಒಂದು ರೋಚಕ ಅನುಭವ.

ನೇತ್ರಾಣಿ ದ್ವೀಪದ ಮೇಲೆ ನಿಂತು ಸುತ್ತಲೂ ದೃಷ್ಟಿ ಹಾಯಿಸಿದರೆ ಅಂತ್ಯವಿಲ್ಲದ ಮಹಾಸಾಗರ. ಮೇಲೆ ನೀಲಾಕಾಶ ಹೊಸ ಪ್ರಪಂಚಕ್ಕೆ ಬಂದ





downloaded from: www.kpscvaani.com



ಸುಂದರ ಅನುಭವದ ಜೊತೆಗೆ ಸೃಷ್ಟಿಯ ವಿರಾಟ ರೂಪದ ದರ್ಶನವಾಗುತ್ತದೆ.

ನೇತ್ರಾಣಿ ದ್ವೀಪದಲ್ಲಿ ಸ್ಥಳೀಯ ಮೀನುಗಾರರು ಪೂಜಿಸುವ "ಜಟ್ಟೇಕ್ಶ್ವರ" ದೇವರನ್ನು ಪ್ರತಿಷ್ಠಾಪಿಸಿ ಪೂಜಿಲಾಗುತ್ತದೆ. ಪ್ರತಿ ವರ್ಷ ಫೆಬ್ರವರಿ ತಿಂಗಳಲ್ಲಿ ಭಟ್ಕಳ ಬಂದರಿನಿಂದ ನೂರಾರು ಮೀನುಗಾರರು ನೇತ್ರಾಣಿಗೆ ತೆರಳಿ ಜಟ್ಟೇಕ್ಶ್ವರನಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ ಎಂದು ಮೀನುಗಾರ ಸಮುದಾಯದ ಮುಖಂಡರಾದ ಗೋಪಾಲ್ ಮೊಗೇರ ಹೇಳುತ್ತಾರೆ. ಜಟ್ಟೇಕ್ಶ್ವರನಿಗೆ ವಿಶೇಷ ಪೂಜೆ ಸಲ್ಲಿಸುವ ಜೊತೆಗೆ ಹರಕೆ ಹೊತ್ತು ಪೂಜೆ ಸಲ್ಲಿಸುತ್ತಾರೆ. ಜಟ್ಟೇಕ್ಶ್ವರನಿಗೆ ಪೂಜೆ ಸಲ್ಲಿಸುವುದರಿಂದ ಒಳ್ಳೆಯ ಮೀನುಗಾರಿಕೆಯಾಗುತ್ತದೆ ಎಂಬ ನಂಬಿಕೆಯಿರುವುದರಿಂದ ಪ್ರತಿ ವರ್ಷ ತಪ್ಪದೆ ವಿಶೇಷ ಪೂಜೆ ಸಲ್ಲಿಸುತ್ತಾರೆ ಎಂದು ಹಲವಾರು ವರ್ಷಗಳಿಂದ ಮೀನುಗಾರಿಕೆಯಲ್ಲಿ ತೊಡಗಿರುವ ದುರ್ಗಪ್ಪ ನಾಯಕ ಹೇಳುತ್ತಾರೆ.

ಜಟ್ಟೇಕ್ಶ್ವರ ದೇವರ ಜೊತೆಗೆ ಮುಸ್ಲಿಂ ಸಮುದಾಯದ ದರ್ಗಾ ಹಾಗೂ ಕ್ರಿಶ್ಚಿಯನ್ ಸಮುದಾಯದ ಶಿಲುಬೆಯನ್ನು ಇಲ್ಲಿ ಪ್ರತಿಷ್ಠಾಪಿಸುವ ಮೂಲಕ ಕೋಮು ಸೌಹಾರ್ದತೆ ಮರೆಯಲಾಗಿದೆ ಎಂದು ಸ್ಥಳೀಯ ಮೀನುಗಾರ ಕೃಷ್ಣ ಮೋಗೆರ ಅವರು ತಿಳಿಸುತ್ತಾರೆ.



ನೇತ್ರಾಣಿ ದ್ವೀಪದಲ್ಲಿ ಚಿಕ್ಕದಾದ ಸಿಹಿ ನೀರಿನ ಜರಿಯಿದ್ದು, ಸದಾಕಾಲ ಇಲ್ಲಿ ನೀರು ಹರಿಯುತ್ತಿರುತ್ತದೆ. ಈ ದ್ವೀಪದಲ್ಲಿ ಕಾಡು ಕುರಿ, ಕಾಡು ಕೋಳಿ, ಇಲಿ, ಹೆಗ್ಗಣ, ಹಾವು ಮುಂತಾದ ಪ್ರಾಣಿಗಳು ವಿಫುಲ ಸಂಖ್ಯೆಯಲ್ಲಿವೆ. ಕೊಚ್ಚಿನ್ ಹಾಗೂ ಮುಂಬಯಿ ವಿಭಾಗದ ನೌಕಾಪಡೆ ಯೋಧರು ಆಗಾಗ ಬಂದು ಬಾಂಬ್ ಸಿಡಿಸುವ ಮೂಲಕ ಯುದ್ಧ ತರಬೇತಿಯನ್ನು ಇಲ್ಲಿ ನಡೆಸುತ್ತಾರೆ. ಈ ಸಮಯದಲ್ಲಿ ಮುಂಚಿತವಾಗಿ ಮೀನುಗಾರರಿಗೆ ಮಾಹಿತಿ ನೀಡಲಾಗುತ್ತದೆ.

ನೇತ್ರಾಣಿ ನಡುಗಡ್ಡೆಯನ್ನು ಭಟ್ಕಳ ಬಂದರಿನ ಹಾಗೂ ಮುರುಡೇಶ್ವರ ಬೀಚ್‌ನಿಂದ ಬರಿಗಣ್ಣಿನಲ್ಲೆ ನೋಡಬಹುದಾಗಿದೆ. ಈ ನಡುಗಡ್ಡೆಯ ಆಳ ಸಾಗರದಲ್ಲಿ ತಿಮಿಂಗಿಲಗಳು ದೊಡ್ಡ ಪ್ರಮಾಣದಲ್ಲಿವೆ. ತಿಮಿಂಗಳಗಳು ಸಂತಾನೋತ್ಪತ್ತಿಗೆ ಹೆಚ್ಚಾಗಿ ಈ ಪ್ರದೇಶವನ್ನೇ ಆಯ್ಕೆ ಮಾಡಿಕೊಳ್ಳುತ್ತವೆ. ದೊಡ್ಡ ಪ್ರಮಾಣದ ಹವಳದ ದಿಬ್ಬಗಳು ಕೂಡ ನೇತ್ರಾಣಿ ನಡುಗಡ್ಡೆಯ ಸಮುದ್ರದ ಆಳದಲ್ಲಿವೆ. ಹಾಗಾಗಿ ವಿಜ್ಞಾನಿಗಳು ಈ ನಡುಗಡ್ಡೆಗೆ ಆಗಮಿಸಿ ಜೀವವೈವಿಧ್ಯತೆಯ ಬಗ್ಗೆ ಸಂಶೋಧನೆ ನಡೆಸುತ್ತಿರುತ್ತಾರೆ.

ನೇತ್ರಾಣಿ ನಡುಗಡ್ಡೆ ಜೀವವೈವಿಧ್ಯತೆಯ ತಾಣವೆಂದು ಪ್ರಸಿದ್ಧಿ ಹೊಂದಿರುವುದರಿಂದ ವಿಜ್ಞಾನಿಗಳನ್ನು ಆಕರ್ಷಿಸುವ ಜೊತೆಗೆ, ಸಮುದ್ರದ ಸಾಹಸ ಬರಿತ ಜಲ ಕ್ರೀಡೆಯಾದ ಸ್ಕೂಬಾ ಡೈವ್ ನೇತ್ರಾಣಿಯ ಆಳ ಸಮುದ್ರದಲ್ಲಿ ನಡೆಸಲಾಗುವುದರಿಂದ ಕ್ರೀಡಾ ಪ್ರೇಮಿಗಳಿಗೂ ಇದು ಅಚ್ಚುಮೆಚ್ಚಿನ ತಾಣವಾಗಿದೆ.

ನೇತ್ರಾಣಿ ನಡುಗಡ್ಡೆಯ ಆಳ ಸಮುದ್ರದಲ್ಲಿ ಸ್ಕೂಬಾ ಡೈವ್ ಮಾಡುವುದು ಒಂದು ರೋಚಕ ಅನುಭವ. ಸ್ಕೂಬಾ ಡೈವ್ ಮಾಡಲು ಆಸಕ್ತಿ ಇರುವ ಸಾಹಸಿಗರಿಗೆ ಮುರುಡೇಶ್ವರದಿಂದ ದೋಣಿಯ ಮೂಲಕ ಕರೆದೊಯ್ಯಲಾಗುತ್ತದೆ.

# ಸಾಸಿರ ಕಣ್ಣಿನ ಚಲುವ


ಪಿ. ಎಸ್. ಪರ್ವತಿ

ಪ್ರಕೃತಿಯ ಮಡಿಲಲ್ಲಿ ತನ್ನ ಗಂಭೀರ ನಡಿಗೆ, ನರ್ತನದ ಮೂಲಕ ಎಲ್ಲರ ಮನಸೆಳೆಯುವ ನವಿಲು ಸಾಸಿರ ಕಣ್ಣಿನ ಚಲುವ ಎಂದೇ ಪ್ರಖ್ಯಾತವಾಗಿದೆ. ತನ್ನ ಅಧ್ಬುತ ಸೌಂದರ್ಯ, ಗರಿಗಳ ವಿಶಿಷ್ಟ ವಿನ್ಯಾಸದಿಂದಾಗಿ ಪಕ್ಷಿ ಸಂಕುಲದಲ್ಲಿಯೇ ಇದಕ್ಕೆ ಮಹತ್ತರ ಸ್ಥಾನವಿದೆ. ಗರಿಗೆದರಿ ನರ್ತಿಸುವ ಮಯೂರ ಪಕ್ಷಿ ಸಂಕುಲದಲ್ಲಿಯ ಸೌಂದರ್ಯದ ಖಣಿ. ನವಿಲಿನ ಅಂದ, ವೈಭವವನ್ನು ಕವಿಗಳು ಕಾವ್ಯದಲ್ಲಿ, ಚಿತ್ರಕಾರರು ಕಲೆಯಲ್ಲಿ, ಚರಿತ್ರಕಾರರು ಇತಿಹಾಸದಲ್ಲಿ, ನೃತ್ಯಗಾರರು ನರ್ತನದಲ್ಲಿ, ಭಕ್ತರು ಪೂಜೆಯಲ್ಲಿ ಮನಗಂಡಿದ್ದಾರೆ. ಶತಶತಮಾನಗಳ ಹಿಂದೆ ಭಾರತದಿಂದ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ನವಿಲು ನಿರ್ಯಾತವಾಗುತ್ತಿದ್ದ ವಿಷಯ ಇತಿಹಾಸದ ಪುಟದಲ್ಲಿದೆ.

ಸ್ವತಂತ್ರ ರಾಷ್ಟ್ರವೊಂದು ತನ್ನ ಸಾಂಸ್ಕೃತಿಕ ಪರಂಪರೆ, ಅಂತಃಸತ್ವವನ್ನು ಬಿಂಬಿಸುವ ರಾಷ್ಟ್ರಗೀತೆ, ಲಾಂಛನ ಮತ್ತು ಮುದ್ರೆಯನ್ನು ಹೊಂದಿರುತ್ತದೆ. ಇವುಗಳನ್ನು ಬಹು ಎಚ್ಚರಿಕೆ ಮತ್ತು ವಿವೇಚನೆಯಿಂದ ಆಯ್ಕೆ ಮಾಡಲಾಗುತ್ತದೆ. ಹಾಗೆಯೇ ನಮ್ಮ ದೇಶ 1963 ರಲ್ಲಿ ಆಯ್ಕೆ ಮಾಡಿದ ರಾಷ್ಟ್ರ ಪಕ್ಷಿ ನವಿಲು, ಭಾರತ ಅದರಲ್ಲೂ ದಕ್ಷಿಣ ಭಾರತ ಇದರ ಮೂಲ ನೆಲೆ. ಆಗ್ನೇಯ ಏಷ್ಯಾದ ಕಾಡುಗಳಲ್ಲಿ ಕಾಣುವ ಇದು ಹೊರ ಜಗತ್ತಿಗೂ ಪರಿಚಯವಾಗಿದೆ. ನವಿಲು ಫ್ಯಾಸಿಯಾನಿಡೆ (Phasianidae) ಕುಟುಂಬ ವರ್ಗಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು ಪಾವೋಕ್ರಿಸ್ಟಸ್ (Pavocristatus).

ಬಹು ವರ್ಣದ ಈ ಪಕ್ಷಿ ಹಂಸದಾಕಾರದಲ್ಲಿದ್ದು ಬಿಸಣಿಕೆಯಾಕಾರದ ಗರಿಗಳ ಜುಟ್ಟು ಹೊಂದಿದೆ. ಕಣ್ಣ ಕೆಳಗೆ ಬಿಳಿ ಮಚ್ಚೆ ,ತೆಳುವಾದ ಕೊರಳನ್ನು ಪಡೆದಿದೆ. ಗಂಡು ನವಿಲು ಹೆಣ್ಣು ನವಿಲಿಗಿಂತ ಅಂದವಾಗಿರುತ್ತದೆ. ಹೊಳೆಯುವ ನೀಲಿ ಬಣ್ಣದ ಎದೆ, ಕೊರಳು ಮತ್ತು ವೈಭವದಿಂದಕೂಡಿದ ಕಂಚಿನ ವರ್ಣದ ಈ ಪಕ್ಷಿ ಎರಡುನೂರಕ್ಕೂ ಹೆಚ್ಚಿನ ಗರಿಗಳಿಂದ ಆವೃತ್ತವಾದ ಬಾಲ ಹೊಂದಿರುವುದು. ತನ್ನ ಗರಿಗಳನ್ನು ಹರಡಿಕೊಂಡು ಬಣ್ಣ ಬಣ್ಣದ ಪ್ರಭಾವಳಿಯಲ್ಲಿ ನವಿಲಿನ ನೃತ್ಯ ಮನಕಾನಂದ ನೀಡುವುದರೊಂದಿಗೆ ದಿವ್ಯ ಹಾಗೂ ಭವ್ಯರಸಾನೂಭೂತಿ ಒದಗಿಸುತ್ತದೆ. ಪಕ್ಷಿತಜ್ಞರ ಪ್ರಕಾರ ನವಿಲಿನ ಸರಾಸರಿ ತೂಕ 4 ರಿಂದ 5 ಕಿಲೋಗ್ರಾಂ ಇರುತ್ತದೆ. ಹೆಣ್ಣು 3.50 ಕೆ.ಜಿ ಇದ್ದರೆ ಗಂಡು ನವಿಲು 5 ಕಿಲೋ ಗ್ರಾಂ ಇರುತ್ತದೆ. ಬಾಲದ ಉದ್ದ ಆರು ಅಡಿಗಳವರೆಗೂ ಚಾಚಿಕೊಂಡಿರುತ್ತದೆ. ಕಣ್ಣುಗಳು ತೀಕ್ಷ್ಣವಾಗಿದ್ದು, ಶ್ರವಣ ಶಕ್ತಿ ಬಲು ಚುರುಕು. ಅಂಜಿಕೆ ಸ್ವಭಾವದ ಇವು ಸ್ವಲ್ಪ ಸದ್ದಾದರು ಹೆದರಿ ಹಾರುತ್ತವೆ ಮತ್ತು ಅಲ್ಲಿಂದ ಓಡುತ್ತವೆ. ಕತ್ತನ್ನು ಎತ್ತಿ ನಡೆಯುವ ಈ ಅಲೆಮಾರಿ ಪಕ್ಷಿ, ಪಿಹಾ..ಪಿಹಾ..ಎಂದು ಗೊಗ್ಗರು ದನಿಯಲ್ಲಿ ಕೂಗುತ್ತವೆ. ಬಳಕುತ್ತ, ಅತ್ತಿತ್ತ ನೋಡುತ್ತ ನಡೆಯುವ ಇದು, ಹಾರುವ ಸಾಮರ್ಥ್ಯ ಪಡೆದಿದೆಯಾದರೂ ಮರದ ಕೊಂಬೆಗೆ ಹಾರಿ ಆಸರೆ ಪಡೆಯಲು, ಮರಳಿ ಭೂಮಿಗೆ ಬರುವುದಕ್ಕೆ ಮಾತ್ರ ಸಿಮೀತವಾಗಿರುತ್ತದೆ. ನವಿಲಿನ ಜೀವಿತಾವಧಿ 15 ರಿಂದ 20 ವರ್ಷಗಳು.





ಮಳೆಗಾಲವೆಂದರೆ ಇವಕ್ಕೆ ಪಂಚಪ್ರಾಣ. ಗುಡುಗು ಕೇಳಿದರೆ ಸಂಭ್ರಮಿಸುತ್ತವೆ. ಹೆಣ್ಣು ನವಿಲು ನರ್ತಿಸುವುದಿಲ್ಲ. ಗಂಡು ನವಿಲು ರೋಮಾಂಚನಗೊಂಡು ನರ್ತಿಸುತ್ತದೆ. ತನ್ನ ಬಾಲದ ಗರಿಗಳನ್ನು ಬೀಸಣಿಕೆ ಆಕಾರದಲ್ಲಿ ಹರಡಿ,ಕತ್ತನ್ನು ಎತ್ತರಿಸಿ ಒದರಿ, ಗಂಭೀರವಾಗಿ ಹೆಣ್ಣಿನ ಮುಂದೆ ನಾಟ್ಯವಾಡಿ ಸಂಗಾತಿಯನ್ನು ಸೇರುತ್ತದೆ. ವರ್ಷಕ್ಕೊಮ್ಮೆ ಮೂರರಿಂದ ಏಳು ಕೆನೆ ಬಣ್ಣದ ಮೊಟ್ಟೆಯಿಟ್ಟು, 29 ದಿನ ಕಾವು ಕೊಟ್ಟು ಮರಿ ಮಾಡುತ್ತವೆ. ಹೆಚ್ಚಾಗಿ ಪರ್ಣಪಾತಿ, ಕುರುಚಲು ಕಾಡುಗಳಲ್ಲಿ, ತಗ್ಗು ಪ್ರದೇಶ, ಮೈದಾನ ಹುಲ್ಲುಗಾವಲುಗಳಲ್ಲಿ ಸಂಚರಿಸುತ್ತ, ಪೊದೆಗಳಲ್ಲಿ ಹುಲ್ಲುಕಡ್ಡಿ ಪುರಲೆಯನ್ನು ಸಂಗ್ರಹಿಸಿ ಗೂಡುಕಟ್ಟುತ್ತವೆ. ಈ ಸರ್ವ ಭಕ್ಷಕ ಪಕ್ಷಿ, ಬೆಳಗಿನ ಜಾವ ಹಾಗೂ ಇಳಿ ಹೊತ್ತಿಗೆ ಆಹಾರ ಹುಡುಕುತ್ತ ಅಲೆದಾಡುತ್ತ, ಗಿಡದ ಎಲೆ, ಹೊಲದ ಚಿಗುರು, ಕಾಳುಗಳು, ಹಣ್ಣುಗಳಲ್ಲದೇ ಕಣ್ಣಿಗೆ ಕಾಣುವ ಹುಳು, ಮಿಡತೆ, ಹಾವು, ಮಣ್ಣೊಳಗಿನ ಕ್ರಿಮಿ–ಕೀಟಗಳನ್ನು ಭಕ್ಷಿಸುತ್ತವೆ. ಆಹಾರದ ನಂತರ ಜಲವಿರುವ ತಾಣಕ್ಕೆ ತೆರಳಿ, ದಾಹ ತೀರಿಸಿಕೊಂಡು ಹಾರಬಲ್ಲ ಮರವೇರಿ ವಿಶ್ರಾಂತಿ ಪಡೆಯತ್ತವೆ. ಮಣ್ಣಿನಲ್ಲಿರುವ ಕ್ರಿಮಿ–ಕೀಟಗಳನ್ನು ತಿನ್ನುವುದರಿಂದ ಇವು ರೈತನ ಮಿತ್ರ ಕೂಡ ಆಗಿವೆ.



ನವಿಲನ್ನು ಕನ್ನಡದಲ್ಲಿ ನವುಲು, ಮೋರೆ, ಸೋಗೆ ಎಂದು ಕರೆಯಲಾಗುತ್ತದೆ. ಸಂಸ್ಕೃತದಲ್ಲಿ ಮಯೂರ, ಭುಜಂಗ, ಭುಕ್, ನೀಲಕಂಠ, ಕೇಕಿನ್ ಹೆಸರುಗಳಿಂದ ಕರೆದರೆ, ತಮಿಳಿನಲ್ಲಿ ಮಯಿಲ್, ಮಯಿಲಿ, ತೋಕ್ಕೈ, ಮಲೆಯಾಳಂನಲ್ಲಿ ಮಯಿಲ್, ತೆಲುಗಿನಲ್ಲಿ ನೆಮಲಿ, ನೆವಲಿ ಎಂದು ಕರೆಯುತ್ತಾರೆ.

ಪುರಾಣ, ಕಾವ್ಯ, ಇತಿಹಾಸ, ಜನಪದ ಸಾಹಿತ್ಯದಲ್ಲೂ ನವಿಲಿನ ಸೌಂದರ್ಯ, ವರ್ಣನೆ, ಉಲ್ಲೇಖ ಸಾಕಷ್ಟು ದಾಖಲಾಗಿದೆ. ಆಧುನಿಕ ಕವಿಗಳು ಮಯೂರವನ್ನು ವಿಪುಲವಾಗಿ ಪ್ರಶಂಸಿದ್ದಾರೆ. ಕದಂಬ ದೊರೆಯ ಹೆಸರು ಮಯೂರ ಎಂದಿತ್ತು. ಮಯೂರ ಸಿಂಹಾಸನ, ಮಯೂರ ಸಂದೇಶ ಎಂಬ ದಾಖಲೆಗಳಲ್ಲದೇ, ಶಿಲ್ಪ, ನಾಣ್ಯ, ಚಿತ್ರಕಲೆ, ಅಂಚೆಚೀಟಿ, ಸಂಗೀತದಲ್ಲೂ ನವಿಲ ಬಳಕೆಯನ್ನು ಕಾಣಬಹುದು. ಅಷ್ಟೇ ಏಕೆ, ಅರಸರು ಮಯೂರಧ್ವಜ ಹೊಂದಿರುವುದನ್ನೂ ಇತಿಹಾಸದಲ್ಲಿ ನೋಡುತ್ತೇವೆ. ಕರ್ನಾಟಕದಲ್ಲಿ ನವಿಲೂರು, ನವಿಲಕಲ್ಲು, ನವಿಲೆ, ನವೀಲುತೀರ್ಥ ಎಂಬ ಊರುಗಳು ಇವೆ. ಮಹಾರಾಷ್ಟ್ರದಲ್ಲಿ ಮೋರಗಾಂವ್, ತಮಿಳುನಾಡಿನಲ್ಲಿ ಒಂದು ತಾಲ್ಲೂಕಿನ ಹೆಸರೇ ಮಯೂರ ಎಂದಿದೆ. ಕೃಷ್ಣ ನವಿಲ ಗರಿಧಾರಿ. ವಿದ್ಯಾದೇವತೆ ಸರಸ್ವತಿ ಹಾಗೂ ಮುರುಗನ್‌ದೇವರ ವಾಹನ ನವಿಲು. ಮೊಘಲ್ ವಾಸ್ತುಶಿಲ್ಪದಲ್ಲೂ ನವಿಲಿಗೆ ಆದ್ಯತೆಯನ್ನು ನೀಡಲಾಗಿದೆ.

ಪೈಗಂಬರರ ಪ್ರತಿಬಿಂಬದ ಪ್ರತೀಕವಾಗಿ ಸಹ ನವಿಲುಗರಿಗಳನ್ನು ಬಳಸುವುದನ್ನು ಕಾಣುತ್ತೇವೆ. ಪ್ರಾಚೀನ ಗ್ರೀಕ್, ಯೂರೋಪದಲ್ಲೂ ನವಿಲು ದಾಖಲೆಗಳು ಲಭ್ಯ. ಚೀನಾದೇಶದಲ್ಲಿ ನವಿಲು ಅಗ್ನಿಯ ಸಂಕೇತವಾಗಿದೆ. ಬೌದ್ಧರಿಗೆ ಇದು ಪೂಜ್ಯ ಪಕ್ಷಿ. ಮಯೂರದಿಂದಲೇ ಮೌರ್ಯ ಎಂಬ ಪದದ ನಿಷ್ಪತ್ತಿ ಆಗಿರಬೇಕೆಂಬ ಅಭಿಪ್ರಾಯವಿದೆ. ಮೌರ್ಯರು ಸಹ ನವಿಲಿನ ಆರಾಧಕರಾಗಿದ್ದರು.

ನವಿಲಿನಲ್ಲೂ ನಾಲ್ಕು ಪ್ರಧಾನ ಪ್ರಭೇದಗಳಿವೆ. ಭಾರತದಲ್ಲಿಯೇ ಹೆಚ್ಚಾಗಿ ಕಾಣುವ ನೀಲಿ ನವಿಲು, ಹಸಿರು ನವಿಲು, ಆಫ್ರಿಕಾದಲ್ಲಿ ಕಂಡು ಬರುವ ಕಾಂಗೋ ನವಿಲು, ಚೀನ, ಜಪಾನ್‌ದಲ್ಲಿ ಕಂಡುಬರುವ ಜಪಾನ್ ನವಿಲು ಎಂಬುದಾಗಿವೆ.


ಭಾರತ ಸರಕಾರ ನವಿಲನ್ನು ರಾಷ್ಟ್ರಪಕ್ಷಿ ಎಂದು ಘೋಷಿಸಿರುವುದರಿಂದ ಅದರ ಹತ್ಯೆ ಶಿಕ್ಷಾರ್ಹ ಅಪರಾಧವಾಗಿದೆ. ನವಿಲು ಸಂಕುಲಕ್ಕೆ ಹಿಂಸೆ ಮಾಡುವುದಾಗಲಿ, ಪ್ರಾಣ ಹಾನಿಗೆ ಕಾರಣವಾದವರು ಶಿಕ್ಷೆಗೆ ಗುರಿಯಾಗುತ್ತಾರೆ. ನವಿಲು ಸಂತತಿಯನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಇದೊಂದು ಸ್ತುತ್ಯ ಕ್ರಮವಾಗಿದೆ. ದೇಶದಾದ್ಯಂತ ಅನೇಕ ಪ್ರದೇಶಗಳಲ್ಲಿ ನವಿಲು ಧಾಮಗಳು ಸೃಷ್ಟಿಯಾಗಿವೆ. ಕರ್ನಾಟಕದ ನಾಗರಹೊಳೆ, ಬಂಡಿಪುರ ಸೇರಿದಂತೆ ವಿವಿಧ ಅರಣ್ಯದಲ್ಲೂ ನವಿಲು ಹಿಂಡು ಕಾಣುತ್ತಿದ್ದು, ಅವುಗಳ ಸಂರಕ್ಷಣೆಗೆ ಉಪಕ್ರಮಗಳು ಜಾರಿಗೊಂಡಿವೆ. ಹಾವೇರಿ ಜಿಲ್ಲೆಯ ಬಂಕಾಪುರಕೋಟೆ ಪ್ರದೇಶದಲ್ಲಿ ಸರ್ಕಾರ ನವಿಲುಧಾಮ ನಿರ್ಮಿಸಿ ಅವುಗಳ ಸಂರಕ್ಷಣೆ ಹಾಗೂ ಸಂವರ್ಧನೆಗೆ ಅನುವು ಮಾಡಿಕೊಟ್ಟಿದೆ.





downloaded from: www.kpscvaani.com





# ಗಾಂಧಿ ಕನಸಿನ ಮಾದರಿ ಗ್ರಾಮ

ಸೋಮಲಿಂಗಪ್ಪ ಬೆಣ್ಣಿ ಗುಳದಳ್ಳಿ
ಚಿತ್ರಗಳು– ದೇವರಾಜ ಮೇಟಿ

ಸ್ವತಂತ್ರಪೂರ್ವದಲ್ಲಿ ಮಹಾತ್ಮಾ ಗಾಂಧೀಜಿ ಕಂಡಿದ್ದ ಸ್ವದೇಶಿ ಪರಿಕಲ್ಪನೆ ಹಾಗೂ ಮಾದರಿ ಗ್ರಾಮದ ಕನಸುಗಳು ಇಂದಿನ ದಿನಗಳಲ್ಲಿ ಕೇವಲ ಇತಿಹಾಸ ಪುಸ್ತಕದ ಸ್ವತ್ತಾಗಿ ವಾಸ್ತವದಿಂದ ಮರೆಯಾಗುತ್ತಿವೆ. ಇತ್ತೀಚೆಗೆ ಮಾಧ್ಯಮಗಳಲ್ಲಿ ಪ್ರಸಾರವಾಗುವ ಜಾಹೀರಾತುಗಳು ಮತ್ತು ಅಪರಾಧಗಳನ್ನು ವೈಭವೀಕರಿಸುವ ಕಾರ್ಯಕ್ರಮಗಳಿಂದಾಗಿ ಮಕ್ಕಳಾದಿಯಾಗಿ ಯುವಕರು ದಾರಿ ತಪ್ಪುತ್ತಿರುವುದು ಸಾಮಾನ್ಯವಾಗಿದೆ. ದೇಶದ ಸಂಪನ್ಮೂಲವೆಂದೇ ಪರಿಗಣಿತವಾಗುವ ಯುವ ಜನತೆಯಂತೂ ಒಂದಲ್ಲ ಒಂದು ದುಶ್ಚಟದ ದಾಸರಾಗಿ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ.

ಗ್ರಾಮೀಣ ಹಾಗೂ ನಗರ ಪ್ರದೇಶಗಳು ಆಧುನಿಕತೆಯ ಭರಾಟೆಯಲ್ಲಿ ಸಿಲುಕಿ ಸ್ವದೇಶಿತನವನ್ನೇ ಮರೆಯುತಿರುವ ಇಂದಿನ ಕಾಲದಲ್ಲಿ ಪುಟ್ಟ ಗ್ರಾಮವೊಂದು ಇವೆಲ್ಲವನ್ನೂ ಧಿಕ್ಕರಿಸಿ ಸ್ವದೇಶಿ ತನವನ್ನು ಮೆರೆಯುವ ಮೂಲಕ ಇತರೆ ಗ್ರಾಮಗಳಿಗೆ ಮಾದರಿಯಾಗಿರುವುದು ಹೆಮ್ಮೆಯ ಸಂಗತಿ.

ಕೊಪ್ಪಳ ಜಿಲ್ಲೆ ಮತ್ತು ತಾಲೂಕಿಗೆ ಸೇರಿದ ಹನುಮನಹಳ್ಳಿ ಎಂಬ ಕುಗ್ರಾಮ ಇದೀಗ ಮಾದರಿ ಗ್ರಾಮ. ಜಿಲ್ಲಾ ಕೇಂದ್ರದಿಂದ ಸುಮಾರು ಹನ್ನೆರಡು ಕಿಲೋ ಮೀಟರ್ ದೂರದಲ್ಲಿರುವ ಈ ಪುಟ್ಟ ಗ್ರಾಮವು ಹಲವು ವಿಶೇಷತೆಗಳ ಮೂಲಕ ಗಮನ ಸೆಳೆಯುತ್ತದೆ. ಈ ಗ್ರಾಮವು ತನ್ನದೇ ಆದ ಅಲಿಖಿತ ಸಂವಿಧಾನವೊಂದನ್ನು ಸೃಷ್ಟಿಸಿಕೊಂಡು ಸನ್ಮಾರ್ಗದತ್ತ ಸಾಗುವ ಮೂಲಕ ಆಧುನಿಕತೆಗೆ ಸವಾಲೊಡ್ಡಿರುವುದು ಈ ಗ್ರಾಮದ ವೈಶಿಷ್ಟ್ಯ.

ಬಹುತೇಕ ಕೃಷಿಕರು ಹಾಗೂ ಕೂಲಿ ಕಾರ್ಮಿಕರು ನೆಲೆಸಿರುವ ಈ ಪುಟ್ಟ ಗ್ರಾಮದಲ್ಲಿ ಇಂದಿಗೂ ಯಾವ ಅಂಗಡಿಯಲ್ಲೂ ಬೀಡಿ, ಸಿಗರೇಟು, ಗುಟಖಾ, ಮದ್ಯ ಸೇರಿದಂತೆ ಆರೋಗ್ಯಕ್ಕೆ ಮಾರಕವಾಗುವ ವಸ್ತುಗಳ ಮಾರಾಟವನ್ನು ನಿಷೇಧಗೊಳಿಸಲಾಗಿದೆ. ಒಂದು ವೇಳೆ ಯಾವುದೇ ವ್ಯಕ್ತಿ ಇಂತಹ ವಸ್ತುಗಳ ಮಾರಾಟಕ್ಕೆ ಯತ್ನಿಸಿದರೆ ಊರಿನ ಜನರೆಲ್ಲ ಸಭೆ ಸೇರಿ ಆ ವ್ಯಕ್ತಿಗೆ ಸುಮಾರು ಹತ್ತು ಸಾವಿರ ರೂಪಾಯಿಯವರೆಗೆ ದಂಡ ವಿಧಿಸುವ ನಿಯಮವನ್ನು ಜಾರಿಗೆ ತರಲಾಗಿದೆ. ಅಷ್ಟೇ ಅಲ್ಲ, ಊರಿನ ಯಾವುದೇ ವ್ಯಕ್ತಿ ಮದ್ಯಪಾನ ಮಾಡಿ ಗ್ರಾಮ ಪ್ರವೇಶಿಸಿದ್ದು ಕಂಡು ಬಂದರೆ, ಅವನಿಗೆ ದಂಡ ವಿಧಿಸಲಾಗುತ್ತದೆ.

ಊರಿನಲ್ಲಿ ಅಲ್ಲಲ್ಲಿ ಕಂಡು ಬರುವ ಹೊಟೇಲುಗಳಲ್ಲಿ ಕೇವಲ ಚಹಾ ಒಂದನ್ನು ಹೊರತುಪಡಿಸಿ ಬೇರೇನೂ ದೊರೆಯದು. ಅದು ವಯಸ್ಸಾದ, ಅಸಹಾಯಕ ವ್ಯಕ್ತಿಗಳನ್ನು ಹೊರತು ಪಡಿಸಿದರೆ ಗ್ರಾಮದ ಯುವಕರು ಅಂತಹ ಹೋಟೆಲುಗಳ ಬಳಿ ಕಾಣಿಸಿಕೊಳ್ಳುವುದಿಲ್ಲ. ಇಷ್ಟೇ ಅಲ್ಲ, ಸುಮಾರು ಹತ್ತಾರು ವರ್ಷಗಳಿಂದ ಈ ಗ್ರಾಮದಲ್ಲಿ ಆಗಾಗ ಏಳುವ ತಂಟೆ, ತಕರಾರುಗಳು ಪೊಲೀಸ್ ಠಾಣೆಯ ಮೆಟ್ಟಿಲೇರಿದ ಉದಾಹರಣೆಯೂ ಇಲ್ಲ. ಎಂತಹ ಕಲಹಗಳಿದ್ದರೂ ಗ್ರಾಮದ ಹಿರಿಯರ ಸಮಕ್ಷಮದಲ್ಲಿ ನ್ಯಾಯ ತೀರ್ಮಾನವಾಗುತ್ತವೆ.

ಸುಮಾರು ಹನ್ನೆರಡು ವರ್ಷಗಳ ಹಿಂದೆ ಗ್ರಾಮದ ಹಿರಿಯರೆಲ್ಲರೂ ಸೇರಿ ತಮ್ಮ ಗ್ರಾಮದ ವಾಸ್ತವತೆ ಹಾಗೂ ಸಮಸ್ಯೆಗಳನ್ನು ಅವಲೋಕಿಸುವಾಗ ಅವರ ಕಣ್ಣ ಮುಂದೆ ಹಲವು ದುರಂತದ ಸರಮಾಲೆಗಳು ಅನಾವರಣಗೊಂಡವು. ಬೀಡಿ, ಸಿಗರೇಟು, ಮದ್ಯಗಳ ದಾಸರಾಗಿ ಜನರು ತತ್ತರಿಸಿ ಹೋಗುತ್ತಿರುವುದು ಹಾಗೂ ಗ್ರಾಮದ ಯುವ ಜನರು ಹಲವು ಬಗೆಯ ದುಶ್ಚಟಗಳಿಗೆ ಅಂಟಿಕೊಂಡು ಆರೋಗ್ಯ ಹಾಳು ಮಾಡಿಕೊಳ್ಳುತ್ತಿರುವು ಕಾಣಿಸಿತು. ಇದಕ್ಕೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಎಲ್ಲಾ ಬಗೆಯ ದುಶ್ಚಟಗಳಿಗೆ ಕಾರಣವಾಗುವ ಪದಾರ್ಥಗಳ ಮಾರಾಟವನ್ನು ಗ್ರಾಮದಲ್ಲಿ ನಿರ್ಬಂಧಿಸ ಬೇಕೆಂಬ ತೀರ್ಮಾನಕ್ಕೆ ಬರಲಾಯಿತು. ಊರಿನ ಹಿರಿಯರ ಈ ನಿರ್ಧಾರಕ್ಕೆ ಗ್ರಾಮದ ಪ್ರತಿಯೊಬ್ಬರೂ ಸಹಮತ ವ್ಯಕ್ತಪಡಿಸಿದ್ದು ಹನುಮನಹಳ್ಳಿ ಗ್ರಾಮ ಮಾದರಿ ಗ್ರಾಮವಾಗಲು ಸಾಧ್ಯವಾಯಿತು. ಗ್ರಾಮದಲ್ಲಿ ಯಾವುದೇ ಹಬ್ಬ, ಹರಿದಿನಗಳು ನಡೆದರೆ ಎಲ್ಲ ಜನಾಂಗದವರೂ ಸಮಾನವಾಗಿ ಹಣ ವಿನಿಯೋಗಿಸುತ್ತಾರೆ. ಇಷ್ಟು ಮಾತ್ರವಲ್ಲದೆ, ಊರಿಗೆ ಸಂಬಂಧಿಸಿದ ಜಾತ್ರೆ, ದೇವರ ಉತ್ಸವ ಮುಂತಾದ ಕಾರ್ಯಗಳಲ್ಲಿ ಎಲ್ಲ ಜನಾಂಗದವರೂ ಭಾಗಿಯಾಗಿ ಒಂದೊಂದು ಸಮುದಾಯದವರು ಒಂದೊಂದು ಜವಾಬ್ದಾರಿಯನ್ನು ಹಂಚಿಕೆ ಮಾಡಿಕೊಂಡು ಯೋಜನೆ ರೂಪಿಸಿಕೊಂಡು ಸೌಹಾರ್ಧತೆಯಿಂದ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುತ್ತಾರೆ. ಅಂದಿನಿಂದ ಇಂದಿನವರೆಗೂ ಗ್ರಾಮಸ್ಥರೆಲ್ಲರೂ ತಮ್ಮ ಈ ತೀರ್ಮಾನಕ್ಕೆ ಬದ್ಧರಾಗಿ ಅದನ್ನು ಪಾಲಿಸುತ್ತಾ ಬಂದಿದ್ದಾರೆ. ಈ ಗ್ರಾಮದಲ್ಲಿ ಈವರೆಗೆ ಯಾವುದೇ ಜಾತಿ ಸಂಘರ್ಷ ಅಥವಾ ಕೋಮು ಗಲಭೆಗಳು ಸಂಭವಿಸಿಲ್ಲ. ಇವುಗಳ ಬದಲಾಗಿ ಜನರ ನಡುವೆ ಶಾಂತಿ, ಸೌಹಾರ್ದತೆ, ಸಮನ್ವಯತೆ ಮತ್ತು ಸಾಕಾರತೆ ಮನೆ ಮಾಡಿವೆ.

> ಈ ಗ್ರಾಮದಲ್ಲಿ ಮೊದಲಿನಿಂದಲೂ ಇಂತಹ ಸೌಹಾರ್ದತೆ ನಿಯಮ ಜಾರಿಯಲ್ಲಿದ್ದು, ಇದರಿಂದಾಗಿ ಮಕ್ಕಳಿಗೆ ಉತ್ತಮ ಸಂಸ್ಕಾರ ದೊರೆಯುವಂತಾಗಿದೆ. ಶಾಲೆಯ ಯಾವುದೇ ಕಾರ್ಯಕ್ರಮಗಳಲ್ಲಿ ಗ್ರಾಮಸ್ಥರು ಸ್ವಯಂಪ್ರೇರಿತವಾಗಿ ಭಾಗವಹಿಸಿ ಶಿಕ್ಷಣ ಏಳಿಗೆಗೂ ಶ್ರಮಿಸುತ್ತಾರೆ. ಇಂತಹ ಮಾದರಿ ಗ್ರಾಮದ ಶಾಲೆಯೊಂದರಲ್ಲಿ ನಾನು ಶಿಕ್ಷಕನಾಗಿ ಸೇವೆ ಸಲ್ಲಿಸುತ್ತಿರುವುದು ನನಗೆ ಹೆಮ್ಮೆ ತಂದು ಕೊಟ್ಟಿದೆ.
>
> –ಪ್ರಾಣೇಶ ಪೂಜಾರ್
> (ಹನುಮನಹಳ್ಳಿ ಸರ್ಕಾರಿ ಶಾಲೆಯ ಶಿಕ್ಷಕರು)



> ನಮ್ಮೂರ್ನಾಗ ಬೀಡಿ, ಸಿಗರೇಟು, ಕುಡಿತ ಇಂಥಾವೇನೂ ಮಾರಂಗಿಲ್ರಿ. ಹಂಗೇನಾದ್ರೂ ಮಾರಿದ್ರ ಊರ ಪಂಚಾಯಿತಿ ಸೇರ್ಸಿ ಅವ್ರಿಗೆ ಹತ್ತು ಸಾವಿರ ದಂಡ ಹಾಕ್ತೀವಿ. ಕುಡಿಯೋದು, ಬೀಡಿ ಸೇದೋದು ಮಾಡಿ ಊರಾಗಿನ ಹುಡುಗ್ರೆಲ್ಲಾ ಅಡ್ಡದಾರಿ ಹಿಡಿಬಾರ್ದು ಅಂತ ಹಿರಿಯರೆಲ್ಲ ಸೇರಿ ಈ ತೀರ್ಮಾನಕ್ಕ ಬಂದೀವ್ರಿ. ನಮ್ಮೂರ್ನಾಗ ಜಗಳ, ತಂಟೆ, ತಕರಾರಿಲ್ದೆ ಆರಾಮಾಗಿದ್ದೀವಿ. ಏನೇ ಕಾರ್ಯಕ್ರಮ ಬಂದ್ರೂ ಎಲ್ರೂ ಸೇರಿ ಒಗ್ಗಟ್ಟಿನಿಂದ ಮಾಡ್ತೀವಿ.
>
> –ದುರುಗಪ್ಪ ಮುರುಡಿ ಗ್ರಾಮಸ್ಥರು

ಹನುಮನಹಳ್ಳಿ ಗ್ರಾಮಕ್ಕೆ ಸುಸಜ್ಜಿತ ರಸ್ತೆ ಹಾಗೂ ಆರೋಗ್ಯ ಸೇವೆ ಸೇರಿದಂತೆ ಕೆಲವು ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿದ್ದರೂ ಸಹ ಈ ಗ್ರಾಮದ ಜನರು ಗಾಂಧೀಜಿಯವರು ಪ್ರತಿಪಾದಿಸಿದ ಜೀವನ ಮೌಲ್ಯಗಳನ್ನು ಅಳವಡಿಸಿಕೊಂಡು ಸನ್ಮಾರ್ಗಗಳನ್ನು ರೂಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಗಾಂಧೀಜಿಯವರ ದೃಷ್ಟಿಕೋನದಲ್ಲಿ ಗ್ರಾಮ ಭಾರತವೆಂದರೆ, ಸ್ವಾಯತ್ತತೆಯುಳ್ಳ ಒಂದು ಸ್ವರಾಜ್ಯ, ಯಾವುದೇ ತಾರತಮ್ಯಗಳಿಲ್ಲದ ಜಾತಿ ಧರ್ಮಗಳ ಹಂಗಿಲ್ಲದ ದುಡಿಮೆಯ ಮೂಲಕ ರೂಪುಗೊಳ್ಳುವ ರಾಮರಾಜ್ಯ. ಇಂತಹ ಆದರ್ಶಗಳನ್ನು ಅಳವಡಿಸಿಕೊಂಡಿರುವ ಹನುಮನಹಳ್ಳಿ ಗ್ರಾಮವೂ ಗಾಂಧೀಜಿಯವರ ಕನಸಿನ ಗ್ರಾಮವಾಗಿರುವುದು ಹೆಮ್ಮೆಯ ಸಂಗತಿಯಾಗಿರುವುದರ ಜೊತೆಗೆ ಇತರೆ ಗ್ರಾಮಗಳಿಗೆ ಆದರ್ಶಪ್ರಾಯವಾಗಿದೆ.





downloaded from: www.kpscvaani.com







# ರೈತನ ಬದುಕಿಗೆ ವರವಾದ
# ಬಹುಬೆಳೆ ಕೃಷಿ ಪದ್ಧತಿ

ಜಿ. ಚಂದ್ರಕಾಂತ



ಬೀದರ ತಾಲೂಕಿನ ನಾಗೋರಾ ಗ್ರಾಮದ 33 ವರ್ಷದ ರಾಜಕುಮಾರ ರಾಯಗೊಂಡ ಅವರದು ಕೃಷಿಕ ಕುಟುಂಬ. ತಂದೆ ಅಡಿವೆಪ್ಪ ರಾಯಗೊಂಡ 15 ವರ್ಷದ ಹಿಂದೆ ತೀರಿಕೊಂಡ ಬಳಿಕ ಮೊದಲನೇ ವರ್ಷದ ಪಿ.ಯು.ಸಿ.ಯನ್ನು ಮೊಟಕುಗೊಳಿಸಿ "ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು" ಎಂಬ ಗಾದೆಯಂತೆ ತಮ್ಮ ಕೆಂಪು–ಕಪ್ಪು ಮಿಶ್ರಿತ ಜಮೀನಿನಲ್ಲಿಯೇ ಬಹುಬೆಳೆ ಕೃಷಿ ಪದ್ಧತಿಯ ಹೊಸ ಹೊಸ ಆವಿಷ್ಕಾರಗಳನ್ನು ಕೈಗೊಂಡರು. ಇದು ಅವರ ಆರ್ಥಿಕ ಉನ್ನತಿಗೆ ವರವಾದ ಬಹುಬೆಳೆ ಕೃಷಿಯ ಯಶೋಗಾಥೆ ಇಲ್ಲಿದೆ.

ಒಟ್ಟು 12 ಎಕರೆ ಭೂಮಿಯಲ್ಲಿ ಬಹುಬೆಳೆ ಕೃಷಿ ಪದ್ಧತಿಯನ್ವಯ ತೋಟಗಾರಿಕೆ ಬೆಳೆ ಬೆಳೆಯಲು ಏಳು ಎಕರೆಯಲ್ಲಿ ಹೊಸದಾಗಿ ಮೂರು ಕೊಳವೆಬಾವಿ ತೋಡಿಸಿ ಹನಿ ನೀರಾವರಿ ಕೈಗೊಳ್ಳಲು 3 ಲಕ್ಷ ರೂ. ಸಹಾಯಧನ ಮತ್ತು ತೋಟಗಾರಿಕೆ ಅಧಿಕಾರಿಗಳನ್ನು ಮತ್ತು ಕೃಷಿ ತಂತ್ರಜ್ಞರನ್ನು ಸಂಪರ್ಕಿಸಿ ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ಬಗ್ಗೆ ಸೂಕ್ತ ಮಾರ್ಗದರ್ಶನ ಪಡೆದರು.



downloaded from: www.kpscvaani.com







ತೋಟಗಾರಿಕೆ ಇಲಾಖೆಯು ಪ್ರಾತ್ಯಕ್ಷಿಕೆಗಾಗಿ ನೀಡಿದ ಪ್ರತಿಭಾ ತಳಿಯ ಅರಿಷಿಣ ಬೀಜದ ಗಡ್ಡೆ 2 ಎಕರೆಯಲ್ಲಿ ನಾಟಿ ಮಾಡಿದ್ದು, ಈಗ ಇದು ಆಳೆತ್ತರಕ್ಕೆ ಸಮೃದ್ಧವಾಗಿ ಬೆಳೆದು ನಿಂತಿದೆ. ಇನ್ನುಳಿದ 5 ಎಕರೆಯಲ್ಲಿ ರೆಡ್‌ಲೇಡಿ ಪಪ್ಪಾಯ, ಜಿ–9 ಬಾಳೆ, ಕೇರಳ ತಳಿಯ ಶುಂಠಿ, ಹೈಬ್ರಿಡ್ ಟೊಮ್ಯಾಟೊ ಮತ್ತು ಗುಂಟೂರು ಮೆಣಸಿನಕಾಯಿಯನ್ನು ಆರು ವರ್ಷಗಳಿಂದ ಬೆಳೆಯುತ್ತಿದ್ದಾರೆ.

ಹನಿ ನೀರಾವರಿ ಪದ್ಧತಿಯಿಂದ ಎಲ್ಲ ಬೆಳೆಗಳು ಜೀವಂತವಾಗಿ ಉಳಿಯುವಂತೆ ಮಾಡಿದ್ದಾರೆ. ಬಹುಬೆಳೆ ಪದ್ಧತಿಯಿಂದ ಒಂದಲ್ಲ ಒಂದು ಬೆಳೆ ಕೈಹಿಡಿಯುತ್ತದೆಂಬ ಆತ್ಮವಿಶ್ವಾಸ ಹೊಂದಿದ್ದಾರೆ. ಸಾವಯವ ಕೃಷಿ ಪದ್ಧತಿಗೂ ಆದ್ಯತೆ ನೀಡಿ ಹತ್ತು ಎಮ್ಮೆ, ಕೋಳಿ, ಪಾರಿವಾಳ, ತಲಾ 2 ಆಡು ಮತ್ತು ಕುರಿ ಸಾಕಣೆಯಿಂದ ತೋಟಕ್ಕೆ ಬೇಕಾಗುವಷ್ಟು ತಿಪ್ಪೆಗೊಬ್ಬರ ಲಭಿಸುತ್ತಿದೆ. ಬೆಳೆಗಳ ಕೀಟ ರೋಗ ಬಾಧೆಯ ಹತೋಟಿಗಾಗಿ ರಾಜಕುಮಾರ ಜೀವಾಮೃತ ಮತ್ತು ಬೆಳ್ಳುಳ್ಳಿ, ಮೆಣಸಿನಕಾಯಿ ಕಷಾಯವನ್ನೇ ಬಳಸುತ್ತಿದ್ದಾರೆ.

ಹೊಲದಲ್ಲಿಯೇ ನಿರ್ಮಿಸಿದ ಎರೆಹುಳುವಿನ 4 ತೊಟ್ಟಿಗಳಲ್ಲಿ ವರ್ಷಕ್ಕೆ 20 ಟನ್ ಎರೆಹುಳು ಗೊಬ್ಬರ ಉತ್ಪಾದಿಸಿ ಬೆಳೆಗಳಿಗೆ ಉಪಯೋಗಿಸುತ್ತಿರುವುದರಿಂದ ಎಲ್ಲ ಬೆಳೆಗಳು ಹುಲುಸಾಗಿ ಬೆಳೆದು ಕಂಗೊಳಿಸುತ್ತಿವೆ. ತೋಟಗಾರಿಕೆ ಬೆಳೆಗಳ ಸಂಗ್ರಹ ಮತ್ತು ಸಂರಕ್ಷಣೆಗಾಗಿ ಪ್ಯಾಕ್‌ಹೌಸ್ ನಿರ್ಮಾಣಕ್ಕಾಗಿ 2 ಲಕ್ಷ ರೂ., ಪಪ್ಪಾಯ ಬೆಳೆಗೆ 30000 ರೂ. ಹಾಗೂ ಬಾಳೆ ಬೆಳೆಗೆ 1 ಲಕ್ಷ ರೂ. ಸಹಾಯಧನ ಪಡೆದು ಎಲ್ಲ ಬೆಳೆಗಳನ್ನು ಸಮೃದ್ಧವಾಗಿ ಬೆಳೆಸಿದ್ದಾರೆ.

ಒಂದು ಎಕರೆಯಲ್ಲಿ ಹೈಡ್ರೋಪೋನಿಕ್ಸ್ ಪದ್ಧತಿಯಿಂದ ದನಕರುಗಳಿಗಾಗಿ ಮೇವು ಬೆಳೆಯುತ್ತಿದ್ದಾರೆ. ಹೈಡ್ರೋಪೋನಿಕ್ಸ್ ಪದ್ಧತಿ ಅಂದರೆ ಮಣ್ಣಿಲ್ಲದೆ ಹಣ್ಣು, ತರಕಾರಿ ಮತ್ತು ಮೇವನ್ನು ಪೋಷಕಾಂಶವುಳ್ಳ ನೀರಿನಲ್ಲಿಯೇ ಬೆಳೆಸಬಹುದಾಗಿದೆ. ಕೆಲವೊಮ್ಮೆ ಮರಳು/ಜಲ್ಲಿ ಕಲ್ಲುಗಳ ಆಧಾರದಲ್ಲೂ ಬೆಳೆಸಬಹುದು. ಇಲ್ಲಿ ಪೋಷಕಾಂಶಗಳ ದ್ರಾವಣವನ್ನು ಪಂಪ್ ವ್ಯವಸ್ಥೆಯಿಂದ ಗಿಡಗಳಿಗೆ ಸರಬರಾಜು ಮಾಡಲಾಗುತ್ತದೆ. ಗಿಡಗಳು ಬೆಳೆದಂತೆ concentration of solution ಮತ್ತು frequency of pumping ಹೆಚ್ಚಿಸಿಕೊಳ್ಳಬೇಕಾಗುತ್ತದೆ. ಈ ಪದ್ಧತಿಯಲ್ಲಿ ಎಲೆ ಜಾತಿಯ ತರಕಾರಿಗಳನ್ನು ಉತ್ಕೃಷ್ಟವಾಗಿ ಬೆಳೆಸಬಹುದಾಗಿದ್ದು, ಈ ಫಸಲು ಸಹ ಭೂಮಿಯಲ್ಲಿ ಬೆಳೆದ ಬೆಳೆಗೆ ಸಮನಾಗಿರುತ್ತದೆ. ಆದರೆ ಯಂತ್ರೋಪಕರಣ ವ್ಯವಸ್ಥೆಗೆ ಹೆಚ್ಚಿನ ಬಂಡವಾಳದ ಅಗತ್ಯವಿರುತ್ತದೆ. ಈ ಪದ್ಧತಿಯನ್ನು ನುರಿತ ವಿಜ್ಞಾನಿಗಳಿಂದ ಅಥವಾ ಅನುಭವವುಳ್ಳ ವಿಷಯ ತಜ್ಞರ ಸೂಕ್ತ ತರಬೇತಿ ಮತ್ತು ಮಾರ್ಗದರ್ಶನದೊಂದಿಗೆ ಅಳವಡಿಸಿಕೊಳ್ಳುವುದು ಸೂಕ್ತ ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಅಶೋಕ ಬಾವ ಅವರು ಅಭಿಪ್ರಾಯಪಡುತ್ತಾರೆ.

ಕಳೆ ತೆಗೆಯುವ ಯಂತ್ರ, ಸೌರವಿದ್ಯುತ್ ಚಾಲಿತ ಪಂಪಸೆಟ್, ಕೀಟ ನಿಯಂತ್ರಣಕ್ಕೆ ಸೋಲಾರ ಲೈಟ್ ಟ್ರ್ಯಾಪ್, ಹಂದಿಗಳನ್ನು ಓಡಿಸಲು ಗಾಳಿಯಂತ್ರ ಮುಂತಾದ ಕೃಷಿ ಯಂತ್ರೋಪಕರಣಗಳನ್ನು ಬಳಸುವುದರೊಂದಿಗೆ ಕೂಲಿ ಆಳುಗಳ ಕೊರತೆಯನ್ನು ನೀಗಿಸಿಕೊಂಡ ಇವರು ಜೇನು ಕೃಷಿಯನ್ನೂ ಕೈಗೊಂಡಿದ್ದಾರೆ. ರಾಜಕುಮಾರ ಅವರು ಬಾಗಲಕೋಟೆಯ ತೋಟಗಾರಿಕೆ ವಿಶ್ವವಿದ್ಯಾಲಯದಿಂದ "ಶ್ರೇಷ್ಠ ತೋಟಗಾರಿಕೆ ರೈತ ಪ್ರಶಸ್ತಿಗೆ" ಮತ್ತು ಕಲಬುರಗಿಯಲ್ಲಿ ವಿಜಯ ಕರ್ನಾಟಕ ಪತ್ರಿಕೆಯು ನೀಡಿದ "ಸೂಪರ್ ಸ್ಟಾರ್ ರೈತ" ಪ್ರಶಸ್ತಿಗೆ ಭಾಜನರಾಗಿದ್ದಾರೆ.

"ನನ್ನ ಇಡೀ ಕುಟುಂಬ ಕೃಷಿ ಮತ್ತು ತೋಟಗಾರಿಕೆಯಲ್ಲಿ ನೆರವಾಗುತ್ತಾರೆ. ಅವಶ್ಯಕವಿದ್ದಾಗ ಕೂಲಿ ಆಳುಗಳ ಸಹಾಯ ಪಡೆಯುವೆ. ನನ್ನಲ್ಲಿದ್ದ ಅಲ್ಪಸ್ವಲ್ಪ ಹಣ ಕೃಷಿಯಲ್ಲಿ ತೊಡಗಿಸಿದ್ದಲ್ಲದೇ ಬೀದರಿನ ಓರಿಯೆಂಟಲ್ ಬ್ಯಾಂಕಿನಿಂದ ಹೈನು ಅಭಿವೃದ್ಧಿಗಾಗಿ 8 ಲಕ್ಷ ರೂ. ಸಾಲ ಪಡೆದು 12 ಎಮ್ಮೆ ಸಾಕಣೆ ಮಾಡಿದ್ದು, ಪ್ರತಿದಿನ 25 ಲೀ. ಹಾಲು ಉತ್ಪಾದನೆಯಾಗುತ್ತಿದೆ. ಬಹುಬೆಳೆ ಕೃಷಿ ಪದ್ಧತಿಯಿಂದ ಕಳೆದ 6 ವರ್ಷದಿಂದ ವರ್ಷಕ್ಕೆ ನಿವ್ವಳ 10 ಲಕ್ಷ ರೂ. ಲಾಭ ಬರುತ್ತಿದೆ. ಈ ವರ್ಷ ಇನ್ನೂ ಅಧಿಕ ಆದಾಯ ಬರುವ ನಿರೀಕ್ಷೆಯಿದೆ. ನನ್ನ ಮಕ್ಕಳಿಗೆ ಉನ್ನತ ದರ್ಜೆಯ ಶಾಲೆಗಳಲ್ಲಿ ಓದಿಸುತ್ತಿದ್ದೇನೆ. ರೈತರಿಗೆ ಕೃಷಿ ಮಾಡುವ ಛಲ ಬೇಕು. ಸಮಗ್ರ ಕೃಷಿ, ಮಿಶ್ರ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಬೇಕು." ಎಂದು ಅಭಿಪ್ರಾಯ ಪಡುತ್ತಾರೆ. (ಇವರ ಸಂಪರ್ಕ ಸಂಖ್ಯೆ: 9845113567)

# ಶ್ರೀಕೃಷ್ಣ ಪಾರಿಜಾತದ ಕಲಾ ಕುಸುಮ ಯಲ್ಲವ್ವ

ಲಲಿತಾ ಕೆ. ಹೊಸಪ್ಯಾಟಿ



ತನ್ನೊಳಗಿನ ಕಲೆಯಲ್ಲಿ ಕೃಷ್ಣನನ್ನು ದೈವಿಕ ಭಾವದಲ್ಲಿ ಅನುಭಾವಿಸಿಕೊಳ್ಳುವ ಕಲಾವಿದೆ ಯಲ್ಲವ್ವ. ಐದು ದಶಕದ ಶ್ರೀ ಕೃಷ್ಣ ಪಾರಿಜಾತ ಬಯಲಾಟದ ಇತಿಹಾಸದಲ್ಲಿ ಗಟ್ಟಿಯಾಗಿ ನೆಲೆಯೂರುವುದು ಸುಲಭವಾಗಿರಲಿಲ್ಲ. ಬಡತನ ಬವಣೆಗಳ ನಡುವೆಯೂ ಇತಿಹಾಸ ಸೇರಬಾರದೆಂದು ಶ್ರೀ ಕೃಷ್ಣ ಪಾರಿಜಾತ ಬಯಲಾಟವನ್ನು ಇಷ್ಟು ದಿನ ಕಣ್ಣರೆಪ್ಪೆಯಂತೆ ಕಾಪಾಡಿಕೊಂಡಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಲೋಕಪೂರದ ಠಾಣಿಕೇರಿಯ ದುರ್ಗವ್ವ ದುರ್ಗಪ್ಪ ದಂಪತಿಗೆ ಐವರು ಹೆಣ್ಣು ಮತ್ತು ಇಬ್ಬರು ಗಂಡು ಮಕ್ಕಳು. ಅದರಲ್ಲಿ 1–6–1952 ರಂದು ದಂಪತಿಗೆ ಎರಡನೆಯ ಮಗಳಾಗಿ ಜನಿಸಿದವರೇ ಯಲ್ಲವ್ವ. ಹತ್ತರ ಬಾಲಕಿಗೆ ಚೌಡಕಿ ಹಾಡು ಕರಗತವಾಗಿತ್ತು. ಚಿಕ್ಕಪ್ಪ ಲಂಕೆಪ್ಪ ಮತ್ತು ತಂದೆ ದುರ್ಗಪ್ಪ ಭಜನ ರಿವಾಯತ ಪದಗಳನ್ನು ಹಾಡುತ್ತಿದ್ದರು. ಭಜನಾ ಸಂಗೀತದ ಪಟ್ಟುಗಳನ್ನು ತಾಳಕ್ಕೆ ಹಾಡುವುದು ರೂಢಿಯಾಯಿತು. ಹಾಡುಗಾರಿಕೆ ಕಲಿಸುತ್ತಿದ್ದ ಹಿರೇಮಠ ಮಲ್ಲಯ್ಯಸ್ವಾಮಿ ಸಂಗೀತದ ಜೊತೆ ಅಲ್ಪ ಸ್ವಲ್ಪ ಅಭಿನಯವನ್ನು ಹೇಳಿಕೊಟ್ಟಿದ್ದರು. ಕಟಗೇರಿಯ ಮಳಿಯಪ್ಪ ಮಾಸ್ತ್ರು ಮತ್ತು ಹನಮಂತ ಭಟ್ರು ಕೂಡಿ ಹವ್ಯಾಸಿ ತಂಡ ಕಟ್ಟಿಕೊಂಡು ಕಂದಗಲ್ಲ ಹನುಮಂತರಾಯರ ಕುರುಕ್ಷೇತ್ರ ನಾಟಕವನ್ನು ಲೋಕಾಪೂರದಲ್ಲಿಯೇ ಮಾಡುತಿದ್ದರು. ಆಗ ಯಲ್ಲವ್ವ ರೊಡ್ಡಪ್ಪನವರನ್ನು ಕೃಷ್ಣ ಪಾತ್ರಕ್ಕೆ ಕರೆದು ಬಣ್ಣ ಹಚ್ಚಿಸಿದರು. ಇದು ಮೊದಲ ರಂಗ ಪ್ರಯೋಗಕ್ಕೆ ನಾಂದಿಯಾಯಿತು.

ಕೃಷ್ಣ ಪಾರಿಜಾತದಲ್ಲಿ ಪ್ರಸಿದ್ಧ ಹೆಸರು ಕೃಷ್ಣಾಜಿ ದೇಶಪಾಂಡೆಯವರದು. ಅವರು ಭಾಗವತ ಪಿತಾಮಹ ಎಂದೇ ಕರ್ನಾಟಕದಲ್ಲಿ ಪ್ರಸಿದ್ಧಿ. ಮೊದಲು ಜಮಖಂಡಿಯ ಟಕ್ಕಳಕಿ ವಿಠ್ಠಲರಾವ್‌ರ ಬಯಲಾಟ ಕಂಪನಿಯಲ್ಲಿ ಪಾಲುದಾರರಾಗಿದ್ದರು. ಸುಮಾರು 1962 ನೇ ವರ್ಷದಲ್ಲಿ ಯಾವುದೋ ಕಾರಣಕ್ಕೆ ಟಕ್ಕಳಕಿ ಕಂಪನಿ ಬಿಟ್ಟು ಲೋಕಾಪೂರಕ್ಕೆ ಬಂದರು. ಅವರು ಅಲ್ಲಿಗೆ ಬಂದದ್ದು ಯಲ್ಲವ್ವ ರೊಡ್ಡಪ್ಪನವರಂತಹ ಬಯಲಾಟದ ಕಲಾವಿದೆ ಹುಟ್ಟು ಪಡೆಯಲು ಪ್ರೇರಣೆಯಾಯಿತು. ವೆಂಕಟೇಶ್ವರ




ದೇವಸ್ಥಾನದಲ್ಲಿ ನಾಟಕ ತಾಲೀಮು ನಡೆದಿರುತ್ತಿತ್ತು. ನೋಡಲು ಬಂದು ಕುಳಿತುಕೊಳ್ಳುತ್ತಿದ್ದರು ಕೃಷ್ಣಾಜಿ. ಯಲ್ಲವ್ವನವರ ಸುಮಧುರ ಕಂಠ, ಅಸ್ಖಲಿತ ಮಾತುಗಾರಿಕೆ ಆಂಗಿಕ ಅಭಿನಯ ನೋಡಿದರು. ಸಾಧ್ಯವಾದಾಗಲೆಲ್ಲ ತಾವೂ ತಾಲೀಮಿಗೆ ಜೊತೆಯಾಗುತ್ತಿದ್ದರು. ಯಲ್ಲವ್ವನ ಅಭಿನಯವನ್ನು ಮೆಚ್ಚಿದರು. ತಮ್ಮದೇ ಸ್ವಂತ 'ಲೋಕಾಪೂರ ಶ್ರೀಕೃಷ್ಣ ಪಾರಿಜಾತದ ಬಯಲಾಟದ ಕಂಪನಿ' ಕಟ್ಟಿದಾಗ, ಸಹಜವಾಗಿಯೇ ಯಲ್ಲವ್ವ ಅವರು ಈ ಕಂಪನಿಯ ಪ್ರಮುಖ ನಟಿಯಾದರು.

ಮಾಚಕನೂರ ಯಮನವ್ವ –ಕೃಷ್ಣ, ಯಲ್ಲವ್ವ–ರುಕ್ಮಿಣಿ ಕೊರವಂಜಿ ದೊರೆಸಾನಿ. ದುರಗವ್ವ– ಸತ್ಯಬಾಮೆ, ಯಮುನಾಬಾಯಿ ಸೂಳಿಕೇರಿ– ರುಕ್ಮಿಣಿ, ವೀರಭದ್ರಯ್ಯ ಸಂಬಾಳ ಹಾರ್ಮೋನಿ, ಪರಪ್ಪ ಬಳಗಾರ ಹಿಮ್ಮೇಳ. ಭಾಗವತ ಕೃಷ್ಣಾಜಿ, ಅಯ್ಯಪ್ಪ ಮಾಸ್ತರ ಹುಲ್ಲಳ್ಳಿ ಪೇಟಿತಾಲೀಮು ಹೀಗೆ ಬೇರೆ ಬೇರೆ ಹತ್ತಾರುಪಾತ್ರಗಳಿಗೆ ಕಲಾವಿದರನ್ನು ಜೊತೆಗೂಡಿಸಿಕೊಂಡರು ಕೃಷ್ಣಾಜಿ ದೇಶಪಾಂಡೆ. ತಮ್ಮ ಮನೆಯಲ್ಲಿಯೇ ಹದಿನೈದು ಇಪ್ಪತ್ತು ಕಲಾವಿದರಿಗೆ ಊಟ ಉಪಚಾರ ತಾಲೀಮು ನಿದ್ದೆ ಎಲ್ಲಾ ವ್ಯವಸ್ಥೆ. ಬೆಳಗಿನ ಜಾವ ಮೂರು–ನಾಲ್ಕರಿಂದ ಸಂಜೆ ಆರರವರೆಗೆ ತಾಲೀಮು. ಅಶುದ್ಧ ಅಸ್ಪಷ್ಟ ಸಂಭಾಷಣೆಗೆ ಅವಕಾಶವಿರಲಿಲ್ಲ. ಮೊದಮೊದಲು ಅರ್ಥ ತಿಳಿದು ಅಭಿನಯಿಸುವುದು ಕಷ್ಟವಾಗಿತ್ತು. ಹತ್ತನ್ನೆರೆಡು ತಾಸಿನ ತಾಲೀಮು ಪಕ್ಕ ಅನಿಸಿದಾಗ ಬಯಲಾಟ. ಎಂದು ಗತಕಾಲವನ್ನು ನೆನಪಿಸಿಕೊಳ್ಳುತ್ತಾರೆ ಯಲ್ಲವ್ವ. ಯಲ್ಲವ್ವನವರಿಗೆ ಗುರು, ಮಾಲೀಕ ಎಲ್ಲವೂ ಕೃಷ್ಣಾಜಿಯಾದರು. ತಮ್ಮ 12 ನೇ ವಯಸ್ಸಿಗೇ ಕೃಷ್ಣಾಜಿಯಂತ ಮಹಾನ್ ಬಯಲಾಟದ ಕಲಾವಿದರ ಜೋಡಿಯಾಗಿ ನಟಿಸಿದರು. ಹತ್ತನ್ನೆರೆಡು ರೂಪಾಯಿ ಒಂದು ಆಟಕ್ಕೆ ಸಂಭಾವನೆ. ಅಪ್ಪ ಅವ್ವನ ಜೊತೆ ಯಲ್ಲವ್ವನೂ ಒಂದು ಹೊರೆ ಕಟ್ಟಿಗೆ ಮಾರಿದರೆ ಕೇವಲ ಎರಡು ರೂಪಾಯಿ ಸಿಗುತ್ತಿತ್ತು. ಹಾಗಾಗಿ ಅವರಿಗೆ ಬಯಲಾಟದ ದುಡಿಮೆಯೇ ಸರಿ ಅನಿಸಿತು. ಸಣ್ಣ ವಯಸ್ಸು ಹೊಸ ಹುರುಪು. ಅನಕ್ಷರತೆ ಅಡ್ಡಿಯಾಗದಂತೆ ಕೃಷ್ಣಪಾರಿಜಾತದ ಸಂಭಾಷಣೆಯನ್ನು ಚಾಚೂ ತಪ್ಪದೇ ಒಪ್ಪಿಸುತ್ತಿದ್ದರು.

ತಂದೆಯೇ ಈಕೆಯನ್ನು ಎಲ್ಲವ್ವನ ಗುಡ್ಡದಲ್ಲಿ ಮುತ್ತು ಕಟ್ಟಿಸಿ ದೇವದಾಸಿ ಮಾಡಿರುತ್ತಾರೆ. 5 ನೇ ತರಗತಿಗೆ ಶಿಕ್ಷಣ ನಿಂತಿರುತ್ತದೆ. ಮುಟ್ಟಿದರೆ ಮೈಲಿಗೆ ಎಂಬ ಸಮಾಜದಲ್ಲಿ



ಅಪಮಾನಗಳು, ಮತ್ತು ಬಡತನ ಬಾಲಕಿ ಯಲ್ಲವ್ವನ ಮೇಲೆ ನೋವನ್ನುಂಟು ಮಾಡಿರುತ್ತದೆ. ಬಯಲಾಟದಿಂದ ಜಾತಿಬೇಧವಿಲ್ಲದೆ ಕಲಾವಿದೆ ಎಂದು ಗುರ್ತಿಸುವಂತಾದುದ್ದು ಅವರಿಗೆ ಖುಷಿ ತರುತ್ತದೆ. ಪ್ರಾರಂಭದಲ್ಲಿ ಲೈಟು ಮೈಕು ಯಾವ ವ್ಯವಸ್ಥೆಯೂ ಇರಲಿಲ್ಲ. ಪರದೆ ಹಿಂದೆ ನಿಂತು ಕೃಷ್ಣಾಜಿ ಅವರು ಧೈರ್ಯ ತುಂಬಿ ಹಾಡು, ಸಂಭಾಷಣೆ ನೂರು ಫರ್ಲಾಂಗು ಕೇಳಬೇಕು ಎಂದು ಹುರಿದುಂಬಿಸುತಿದ್ದರು. ಕರ್ನಾಟಕದ ಬಹುತೇಕ ನೂರಾರು ಊರುಗಳಲ್ಲಿ ಪಾರಿಜಾತದ ಕಂಪು ಹರಡಿದ್ದಾರೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ, ದೆಹಲಿ, ಮುಂಬೈ ಕನ್ನಡ ಸಂಘಗಳಲ್ಲಿ ಬಯಲಾಟ ಪ್ರದರ್ಶನ ನೀಡಿ ಬಂದಿದ್ದಾರೆ. ಮಹಾರಾಷ್ಟ್ರದ ಸಾಂಗ್ಲಿ, ಜತ್ತು, ಸೊಲ್ಲಾಪೂರು,



ವಿಜಾಪೂರದ ಹತ್ತಿರ ಮರಬಗಿ ಎಂಬ ಊರಲ್ಲಿ ಶ್ರೀಮಂತ ವತನದಾರರಾದ ಅಣ್ಣಾರಾವ್ ಪಾಟೀಲ ಅವರಲ್ಲಿಗೆ ಯಲ್ಲವ್ವ ಕೃಷ್ಣಾಜಿಯೊಂದಿಗೆ ಶ್ರೀಕೃಷ್ಣ ಪಾರಿಜಾತ ಆಟಕ್ಕೆ ಹೋಗಿರುತ್ತಾರೆ. ಆಗ ಯಲ್ಲವ್ವನವರ ಮಗ ಅಶೋಕ ನಾಲ್ಕು ತಿಂಗಳ ಕೂಸು. ನೋಡಲು ಮುದ್ದು ಮುದ್ದಾದ ಮಗು. ಪಾಟೀಲರ ಹೆಂಡತಿ ಗಂಡನ ಅಪ್ಪಣೆಯಂತೆ ಯಲ್ಲವ್ವನವರ ಮಗ ಅಶೋಕನನ್ನು ಎಣ್ಣೆ ಹಚ್ಚಿ ಎರೆದು ತೊಟ್ಟಿಲು ಕಟ್ಟಿ ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಗನಂತೆ ಜೋಪಾನ ಮಾಡುತ್ತಾರೆ. ಸಹ ಕಲಾವಿದರು ಅಯ್ಯೋ ನಿನ್ನ ಮಗನನ್ನು ಕರಕೊಂಡು ಬಾ, ನಂತರ ಮಗ ಇಲ್ಲೇ ಇರಲಿ ಎಂದರೆ ಏನು ಗತಿ ಎನ್ನುತ್ತಾರೆ. ಯಲ್ಲವ್ವನವರು ಅದಕ್ಕೆ ತಲೆ ಕೆಡಿಸಿಕೊಳ್ಳುವುದಿಲ್ಲ. ಆದದ್ದಾಗಲಿ ಅವರ ಮನೆಯಲ್ಲಿಯೇ ನಾಲ್ಕು ದಿನ ಮಗ ಬೆಳೆಯಲಿ ಎಂದು ನಿರಾತಂಕವಾಗಿ ಪಾತ್ರ ಮಾಡುತ್ತಾರೆ. ಕೃಷ್ಣ ಪಾರಿಜಾತದಿಂದಲೇ ತನಗೂ ತನ್ನ ಮಗನಿಗೂ ಇಂತಹ ಗೌರವ ಸಿಕ್ಕಿತೆಂದು ಧನ್ಯರಾಗಿ ನೆನಪಿಸಿಕೊಳ್ಳುತ್ತಾರೆ ಯಲ್ಲವ್ವ.





downloaded from: www.kpscvaani.com



**ಕೃಷ್ಣ ಪರಿಜಾತದಲ್ಲಿ 56 ರಾಷ್ಟ್ರಗಳ ಗಾರುಡಿಗ ಕೃಷ್ಣನೇ ಎಂಬ ಮಾತು ಬರುತ್ತದೆ. ಯಾರಿಗೂ ಆ ಐವತ್ತು ರಾಷ್ಟ್ರಗಳು ಗೊತ್ತಿಲ್ಲ. ಆದರೆ ಒಂದಿನ ಬಯಲಾಟದಲ್ಲಿ ಆ ಐವತ್ತು ಹೆಸರನ್ನು ಯಲ್ಲವ್ವ ಹೇಳುತ್ತಾರೆ. ಸ್ವತಃ ಕೃಷ್ಣಜಿಯೇ ಆಶ್ಚರ್ಯ ಪಡುತ್ತಾರೆ. ಅದನ್ನು ಕೃಷ್ಣಾಜಿಯವರ ತಾಯಿ ಇಂದಿರಾಬಾಯಿ ಕಲಿಸಿಕೊಟ್ಟಿರುತ್ತಾರೆ. ಯಲ್ಲವ್ವನವರ ನೆನಪಿನ ಶಕ್ತಿಗೆ ಮತ್ತು ಮಾಲೀಕರ ತಾಯಿಯೊಂದಿಗಿನ ನಿಕಟ ಬಾಂಧವ್ಯಕ್ಕೆ ಇದು ಕನ್ನಡಿ.**

ಕೊಲ್ಲಾಪೂರ, ರಾಯಚೂರು, ಧಾರವಾಡ, ಕೊಪ್ಪಳ ಮುಂತಾದ ಅನೇಕ ಕಡೆಗಳಲ್ಲಿ ಕೃಷ್ಣ ಪಾರಿಜಾತ ಬಯಲಾಟದ ಹುಚ್ಚು ಹಿಡಿಸಿದ್ದಾರೆ. ರುಕ್ಮಿಣಿ, ಸತ್ಯಭಾಮ, ಗೊಲ್ಲತಿ, ದೊರೆಸಾನಿ, ಕೊರವಂಜಿ, ನಾರದ ಪಾತ್ರವನ್ನು ಯಲ್ಲವ್ವನಂತೆ ಹಾಕುವವರು ಇನ್ನೊಬ್ಬರಿಲ್ಲ ಎಂದು ಶರಾ ಬರೆಸಿಕೊಂಡವರು ಯಲ್ಲವ್ವ.

ಯಲ್ಲವ್ವನವರು ಹಾಕುತ್ತಿದ್ದ ಪೌರಾಣಿಕ ಪುರುಷ ಪಾತ್ರಗಳು ಸವಾಲಿನದಾಗಿತ್ತು. ಅದೂ ಕೃಷ್ಣ ಮತ್ತು ನಾರದನ ಪಾತ್ರ. ಅಲ್ಲಿ ಮಧುರ ಮಾತಿಗಿಂತ ಪುರುಷವಾಚಿಕೆಗೆ ಒತ್ತು. ಮಾತು ಹಾಡಿನ ಶೈಲಿ, ನೃತ್ಯ ಎಲ್ಲ ಭಿನ್ನ. ಈ ಪತ್ರಗಳಿಗೂ ಒನ್ಸ್ ಮೋರ್ ಎಂದು ಜನರು ಮೆಚ್ಚಿಕೊಳ್ಳುವಾಗ ಯಲ್ಲವ್ವನವರ ಶ್ರಮ ಸಾರ್ಥಕವೆನಿಸಿದೆ.

ಇಪ್ಪತ್ತು– ಮೂವತ್ತು ಸಾವಿರಕ್ಕೂ ಅಧಿಕ ಪಾರಿಜಾತ ಬಯಲಾಟದ ಪ್ರಯೋಗಗಗಳನ್ನು ಇದುವರೆವಿಗೆ ಮಾಡಿದ್ದಾರೆ. ಮೊದಲು ಕೃಷ್ಣಾಜಿ ದೇಶಪಾಂಡೆಯವರೊಂದಿಗೆ ಪ್ರತಿ ಕಡೆಯ ಸೋಮವಾರ ಸಾರವಾಡದ (ಸದಾಶಿವಯ್ಯನವರ ಮಠ) ಚಿಕ್ಕಪ್ಪಯ್ಯನ ಮಠದಲ್ಲಿ ಕೃಷ್ಣ ಪಾರಿಜಾತ ಬಯಲಾಟ ಮಾಡುತ್ತಿದ್ದರು. ಅವರು ಕಾಲವಾದನಂತರ ಚಿಕ್ಕಪ್ಪಯ್ಯನ ಮಠದಿಂದ ಬಯಲಾಟವಾಡಲು ವಿಳ್ಯೆ ಕೊಡುತ್ತಾರೆ. ಕೃಷ್ಣಾಜಿ ಸೇವೆಯೆಂದು ಉಚಿತವಾಗಿ ಆಡಿ ಬರುತ್ತಿದ್ದರು. ಆದರೆ ಯಲ್ಲವ್ವನವರಿಗೆ ಈಗ ಸಂಭಾವನೆ ಪಡೆಯುವುದು ಅನಿವಾರ್ಯವಾಗಿದೆ, ಕೊಟ್ಟುದ್ದನ್ನು ಕಲಾವಿದರಿಗೆ ಹಂಚಿ ಭಕ್ತಿಯಿಂದ ಕೈ ಮುಗಿಯುತ್ತಾರೆ. ಕಳೆದ ಐವತ್ತು ವರ್ಷಗಳಿಂದ ವ್ರತದಂತೆ ಕೃಷ್ಣಪಾರಿಜಾತ ಆಡುತ್ತಿದ್ದಾರೆ.



ಒಂದು ಸಾರಿ ಕೃಷ್ಣ ಪಾರಿಜಾತ ಬಯಲಾಟ ಪ್ರಾರಂಭವಾಗಬೇಕು ಯಲ್ಲವ್ವನವರದು ಕೊರವಂಜಿ ಪಾತ್ರ. ಸತ್ಯಭಾಮ ಮತ್ತು ಕೃಷ್ಣನ ಪಾತ್ರದಾರಿಗಳು ಬಂದಿಲ್ಲ. ಸಂಘಟಕರಿಗೆ ದಿಗಿಲು. ಆ ಎರಡು ಪಾತ್ರ ಮತ್ತು ತಮ್ಮದೊಂದು ಪಾತ್ರ ಸೇರಿ ಒಟ್ಟು ಮೂರು ಪಾತ್ರಗಳನ್ನು ಯಲ್ಲವ್ವ ಒಬ್ಬರೇ ನಿಭಾಯಿಸಿದ್ದರು. ರಂಗಾಸಕ್ತರಿಗೆ ಇಂತಹ ಪಾತ್ರದಾರಿ ಬಂದಿಲ್ಲವೆಂಬ ಕಿಂಚಿತ್ತು ಅನುಮಾನ ಬಾರಲಿಲ್ಲ. ಬರೋಬ್ಬರಿ 8 ತಾಸು ಬಿಡದೇ ಅಭಿನಯಿಸುತ್ತಾರೆ. ಆಟವನ್ನು ಯಶಸ್ವಿಯಾಗಿ ಮುಗಿಸಿದಾಗ ಯಲ್ಲವ್ವನವರಿಗೆ ನನ್ನಿಂದ ಇದು ಹೇಗೆ ಸಾಧ್ಯ? ಎಂಬ ಸಂದೇಹ. ಇದೆಲ್ಲ ಕೃಷ್ಣಾಜಿಯವರದೇ ಪವಾಡ ಎನ್ನುತ್ತಾರೆ. ಬಯಲಾಟದಲ್ಲಿ ಕೊರವಂಜಿ, ಸತ್ಯಭಾಮ, ರುಕ್ಮಿಣಿ ,ದೊರೆಸಾನಿ, ಕೃಷ್ಣ ಯಾವ ಪಾತ್ರ ಕೊಟ್ಟರೂ ಸೈ. ಮಾತು ಹೇಗೆ ನೆನಪಿನಲ್ಲಿಟ್ಟುಕೊಳ್ಳುತ್ತೀರಿ? ಎಂದರೆ ಅದನ್ನು ಬಾಯಿಂದ ಬಾಯಿಗೇ ಕೇಳಿ ಕಲಿತೆ. ಆ ಪುಣ್ಯಾತ್ಮ ಒಳಗಿದ್ದೇ ನುಡಿಸುತ್ತಾರೆ. ಎಂದು ಮತ್ತೆ ಶಿರಬಾಗಿ ಕೃಷ್ಣಾಜಿಗೆ ನಮಿಸುತ್ತಾರೆ.

ಯಲ್ಲವ್ವನವರು ಯಕ್ಷಗಾನ ಮತ್ತು ಜಾನಪದ ಅಕಾಡೆಮಿ ಪ್ರಶಸ್ತಿಗೆ, 2011ರಲ್ಲಿ ಕನ್ನಡವಿಶ್ವವಿದ್ಯಾಲಯ ಹಂಪಿ ನಾಡೋಜ ಗೌರವ ಪ್ರಶಸ್ತಿ, ಕರ್ನಾಟಕ ಸರಕಾರ 20018 ರ ರಾಜ್ಯೋತ್ಸವ ಪ್ರಶಸಿಗೆ ಭಾಜನರಾಗಿದ್ದಾರೆ. ಹೂವಿನ ಹಡಗಲಿಯ ಸಾಂಸ್ಕೃತಿಕ ರಾಯಬಾರಿ ಎಂ ಪಿ ಪ್ರಕಾಶ್, ಡಾ ರಾಜಕುಮಾರ್, ಚಂದ್ರಶೇಖರ ಕಂಬಾರ, ಪೇಜಾವರ ಶ್ರೀಗಳು ಇವರ ಕಲೆಯನ್ನು ಹೊಗಳಿದ್ದಾರೆ. 1998 ರಲ್ಲಿ ಬಿ. ಜಯಶ್ರೀಯವರು ದೆಹಲಿಯಲ್ಲಿ ಕೃಷ್ಣ ಪಾರಿಜಾತವನ್ನು ಆಡಿಸಿದ್ದಾರೆ. "ನಾಡೋಜ ಎಲ್ಲವ್ವ ರೊಡ್ಡಪ್ಪನವರ' ಪುಸ್ತಕವನ್ನು ಡಾ. ವಿರೇಶ ಬಡಿಗೇರ ಪ್ರಕಟಿಸಿದ್ದಾರೆ. ಯಲ್ಲವ್ವ ಒಂದು ಕುಟುಂಬಕ್ಕೆ ಸೀಮಿತವಲ್ಲ. ಸಿರಿಗನ್ನಡ ನಾಡಿನ ಕಲಾರಸಿಕರು ಹೊಗಳಿದ್ದಾರೆ.





# ಹೊಸ ಗೇರು ಕೃಷಿ ವಿಧಾನದಿಂದ ಅಧಿಕ ಇಳುವರಿ

ಎಸ್. ಎನ್. ಅಮೃತ ಮಲ್ಲ



ಇಂದು ಗೋಡಂಬಿ ಉದ್ಯಮ ಬೆಳೆದಿದೆ. ಗೇರು ಕೃಷಿ ಹೆಚ್ಚು ಆದಾಯ ನೀಡುವುದಾಗಿದ್ದರೂ ಗೋಡಂಬಿ ಉದ್ಯಮಕ್ಕೆ ಅವಶ್ಯ ಬೇಡಿಕೆ ಈಡೇರಿಸಲು ಸಾಧ್ಯವಾಗಿಲ್ಲ. ಪುತ್ತೂರು ಗೇರು ಸಂಶೋಧನಾ ನಿರ್ದೇಶನಾಲಯದ ಮೊಟ್ಟೆತ್ತಡ್ಕ ಪ್ರಾಯೋಗಿಕ ಕ್ಷೇತ್ರದಲ್ಲಿ ಹೆಚ್ಚು ಇಳುವರಿ ಮತ್ತು ಅಧಿಕ ಗಳಿಕೆ ಕುರಿತು ಗೇರು ಕೃಷಿ ಪ್ರಾತ್ಯಕ್ಷಿಕೆಯನ್ನು ಕಂಡವರಿಗೆ ಹೊಸ ವಿಧಾನವು ಆಕರ್ಷಿಸದೇ ಇರದು.

ಒಂದು ಎಕರೆ ಪ್ರದೇಶದಲ್ಲಿ ಅಂದಾಜು 600 ಗೇರು ಸಸಿ ನೆಡಸಬಹುದು ಎಂದು ವಿವರಿಸುವ ಗೇರುಕೃಷಿ ವಿಜ್ಞಾನಿ ಮತ್ತು ಪ್ರಭಾರ ನಿರ್ದೇಶಕರಾಗಿರುವ ಡಾ.ಎಂ. ಗಂಗಾಧರ ನಾಯಕ್‌ರವರು 2.5ಮೀ x 2.5ಮೀ ಅಥವಾ 3ಮೀ x 3ಮೀ ಅಂತರದಲ್ಲಿ ಗೇರು ವ್ಯವಸಾಯ ಹೆಚ್ಚು ಲಾಭದಾಯಕ ಎಂಬ ವಿಚಾರವನ್ನು ತಿಳಿಸುತ್ತಾರೆ. ಹಿಂದೆ 80 ಗಿಡಗಳನ್ನು ಮಾತ್ರ ನೆಟ್ಟು ಪೋಷಿಸಿ, 6–8 ವರ್ಷಗಳ ಬಳಿಕ ಇಳುವರಿ ಪಡೆಯುತ್ತಿದ್ದರು. ಈಗ ಹೊಸ ಮಾದರಿಯಲ್ಲಿ



downloaded from: www.kpscvaani.com

ಎಕರೆಯೊಂದರಲ್ಲಿ 600 ಅಥವಾ ಪ್ರತಿ ಹೆಕ್ಟೇರಿಗೆ 1100–1600 ಗಿಡಗಳನ್ನು ನಾಟಿ ಮಾಡಬಹುದು. 3 ಅಥವಾ 4ನೇ ವರ್ಷದಲ್ಲಿಯೇ ಗೇರುಕೃಷಿಯಲ್ಲಿ ಪ್ರತಿ ಹೆಕ್ಟೇರಿಗೆ 3–4 ಟನ್ ಇಳುವರಿ ಗಳಿಸಬಹುದಾಗಿದೆ ಎಂಬುದು ಸೋಜಿಗವಲ್ಲ. ನಂತರದ ವರ್ಷಗಳಲ್ಲಿ ಇನ್ನೂ ಅಧಿಕ ಇಳುವರಿ ನಿರೀಕ್ಷೆ ಮಾಡಬಹುದು.

ವಿ.ಆರ್.ಐ–3, ಎನ್.ಆರ್.ಸಿ.ಸಿ ಸೆಲೆಕ್ಷನ್–2, ಉಳ್ಳಾಲ–4, ಉಳ್ಳಾಲ–1, ಕೆ22–1, ಹೆಚ್–130 ತಳಿಗಳು ಈ ವಿಧಾನದ ಗೇರುಕೃಷಿಗಾಗಿ ಕೃಷಿಕರು ಆಯ್ಕೆ ಮಾಡಬಹುದು. ಒಂದು ಘನ ಮೀಟರ್ ಸುತ್ತಳತೆಯ ಗುಂಡಿಗಳನ್ನು 3 ಮೀಟರ್ ಅಂತರದಲ್ಲಿ ಚೊಕ್ಕವಾಗಿ ತೆಗೆಯಬೇಕು. ಕಳೆಗಿಡ, ಪೊದರು ಸವರಿ ಸಮತಟ್ಟಾದ ಭೂಮಿಯಲ್ಲಿ ಗೇರುಕೃಷಿಗೆ ಭೂಮಿ ತಯಾರಿ ಮಾಡಬೇಕು. ಇಳಿಜಾರು ಪ್ರದೇಶವಾದರೆ ಹಂತಹಂತವಾದ ಮೆಟ್ಟಿಲು ಮಾಡಿ ಗೇರುಸಸಿ ನೆಡಸಲು ಗುಂಡಿಗಳನ್ನು ತಯಾರಿಸಬಹುದು ಎಂದು ಡಾ.ನಾಯಕ್ ಹೇಳುತ್ತಾರೆ.

ಕೃಷಿಗೆ ಅನುಪಯುಕ್ತವಾದ ಭೂಮಿಯಲ್ಲೇ ಗಿರು ಕೃಷಿಯನ್ನು ಮಾಡಬಹುದು. ಗಿಡಗಳನ್ನು ನೆಟ್ಟ ಬಳಿಕ ಬೆಳೆಯುತ್ತಿದ್ದಂತೆ 3–4 ಅಡಿ ಎತ್ತರ ಬೆಳೆಯದಂತೆ ಸವರಬೇಕು. ಆಗ ಗಿಡವು ಪೊದೆಯಂತೆ ಹುಲುಸಾಗಿ ಬೆಳೆಯುತ್ತದೆ. ಬೋರ್ಡೋ ದ್ರಾವಣವನ್ನು ಸವರಿದ ಭಾಗಕ್ಕೆ ಸಿಂಪಡಿಸಬೇಕು. ನೀರಾವರಿ ಸೌಲಭ್ಯವಿದ್ದರೆ ನೀರು ಹಾಯಿಸಬಹುದಾಗಿದೆ. ವರ್ಷದ ಬಳಿಕ 60 ಸೆಂ.ಮೀ ದೂರದಲ್ಲಿ 15 ಸೆಂ.ಮೀ ಸುತ್ತಲೂ ತೋಡು ತೋಡಿ ಗೊಬ್ಬರ ಉಣಿಸಬಹುದು.

ಪ್ರತಿ ವರ್ಷವೂ 15ಕೆ.ಜಿ ಸೆಗಣಿ, ಸಾವಯವ ಗೊಬ್ಬರ ಸೂಕ್ತವಾಗಿದ್ದು, ಕೀಟಬಾಧೆ ನಿಯಂತ್ರಣಕ್ಕೆ ಕನಿಷ್ಠ ಕ್ರಿಮಿನಾಶಕ ಬಳಸಬಹುದು. ಮಳೆಗಾಲದ ಕೊನೆಯಲ್ಲಿ ಹೊಸಗಿಡಗಳ ನಾಟಿಗೆ ಉತ್ತಮವಾಗಿರುತ್ತದೆ. ಸಾಮಾನ್ಯವಾಗಿ 2ನೇ ವರ್ಷದಿಂದಲೇ ಹೂಬಿಡಲು ಆರಂಭವಾಗುತ್ತದೆ, ಮತ್ತು ಫಸಲು ಪಡೆಯಲೂಬಹುದು. 2 ಮತ್ತು 3ನೇ ವರ್ಷದಲ್ಲಿ





ಬೆಳೆದ ಗಿಡದಿಂದ 1 ರಿಂದ 2 ಕೆ.ಜಿ ಫಸಲು ಸಿಗುತ್ತದೆ ಎಂದು ಡಾ.ಗಂಗಾಧರ ನಾಯಕ್ ಮಾಹಿತಿ ನೀಡುತ್ತಾರೆ.

ಆದಾಯ ದ್ವಿಗುಣಗೊಳಿಸುವ ಗೇರು ಕೃಷಿಯ ಹೊಸವಿಧಾನದ ಕುರಿತು ಪ್ರಾತ್ಯಕ್ಷಿಕೆಯನ್ನು ಪುತ್ತೂರು ಗೇರು ಸಂಶೋಧನಾ ನಿರ್ದೇಶನಾಲಯದ ಮೊಟ್ಟೆತ್ತಡ್ಕ ಪ್ರಾಯೋಗಿಕ ಕ್ಷೇತ್ರದಲ್ಲಿ ಪ್ರತ್ಯಕ್ಷವಾಗಿ ನೋಡ ಬಹುದಾಗಿದೆ. ಎತ್ತರ ಎತ್ತರ ಬೆಳೆಯುವ ಗೇರು ಮರದಿಂದ ಹೆಚ್ಚು ಇಳುವರಿ ಸಿಗುವುದಿಲ್ಲ. ಅಲ್ಲದೆ ನಾಲ್ಕಾರು ಗಿಡ ಬೆಳೆಯುವ ಪ್ರದೇಶವನ್ನು ಒಂದೇ ಮರ ಆವರಿಸುತ್ತದೆ. ಹೊಸ ವಿಧಾನದ ಗೇರು ಸಸಿ ನಾಟಿ ಮಾಡಿದರೆ 2ನೇ ವರ್ಷದಿಂದಲೇ ಫಸಲು ಆಶಾದಾಯಕ. 100 ಗಿಡಗಳಲ್ಲಿ 1 ಕ್ವಿಂಟಾಲ್ ಅಂದರೆ ಸರಾಸರಿ ಪ್ರತಿಗಿಡದಲ್ಲಿಯೂ 1 ರಿಂದ 2 ಕೆ.ಜಿ ಗೇರು ಫಸಲು ಸಂಗ್ರಹಿಸಬಹುದು. ಒಂದು ಎಕರೆ ಪ್ರದೇಶದ 600 ಗಿಡಗಳಿಂದ 4 ರಿಂದ 6 ಕ್ವಿಂಟಾಲ್ ಇಳುವರಿ ಪಡೆಯಬಹುದು. ಬರಡು ಭೂಮಿಯಲ್ಲಿ ಕೃಷಿಕರು ಕನಿಷ್ಠ 1 ರಿಂದ 2 ಎಕರೆ ಪ್ರದೇಶದಲ್ಲಿ ಹೊಸವಿಧಾನದಲ್ಲಿ ಗೇರುಕೃಷಿ ಕೈಗೊಂಡರೆ ಅಧಿಕ ಆದಾಯ ದೊರಕುವುದು. ಇದರ ಕೃಷಿಯಲ್ಲಿ ತೊಡಗುವವರಿಗೆ ಸಂಶೋಧನಾ ಗೇರುಕೃಷಿ ವಿಜ್ಞಾನಿ ಡಾ.ಎಂ.ಗಂಗಾಧರ ನಾಯಕ್ ಅವರು ಮಾರ್ಗದರ್ಶನ ನೀಡಬಲ್ಲರು.

ಭಾರತದಲ್ಲಿ 20 ರಿಂದ 25 ಲಕ್ಷ ಟನ್ ಗೋಡಂಬಿ ಬೇಡಿಕೆ ಇದ್ದು, ನಮ್ಮ ದೇಶದಲ್ಲಿ ಪ್ರಸಕ್ತ 6–7 ಲಕ್ಷ ಟನ್ ಗೋಡಂಬಿ ದೊರೆಯುತ್ತಿದೆ. ಭಾರತದ ವಿವಿಧ ರಾಜ್ಯಗಳ ಕೃಷಿಕರು ಹೊಸವಿಧಾನದ ಕುರಿತು ಆಸಕ್ತಿ ತಳೆದಿದ್ದು, ಗೇರು ಸಂಶೋಧನಾ ಕೇಂದ್ರದಲ್ಲಿ 4–5 ಲಕ್ಷ ಗೇರು ಸಸಿ ಉತ್ಪಾದಿಸಲಾಗುತ್ತಿದೆ. ಪ್ರಸ್ತುತ ನಾಟಿಗಾಗಿ 10–15 ಲಕ್ಷ ಗೇರು ಸಸಿಯ ಬೇಡಿಕೆ ಇರುವುದಾಗಿ ಡಾ ನಾಯಕ್ ಅವರು ತಿಳಿಸುತ್ತಾರೆ. ಕರ್ನಾಟಕದ ಕರಾವಳಿ ಪ್ರದೇಶದ ಜಿಲ್ಲೆಗಳಲ್ಲದೇ ಮಲೆನಾಡು ಮತ್ತು ಬಯಲುಸೀಮೆಯ ರೈತರು ಗೇರುಕೃಷಿಯಲ್ಲಿ ತೊಡಗಿ ಅಧಿಕ ಇಳುವರಿ ಮಾದರಿ ಅನುಸರಿಸಲು ಮುಂದಾಗಿರುವುದು ಸಂತಸದ ಸಂಗತಿಯಾಗಿದೆ ಎಂಬ ವಿಚಾರ ತಮಗೆ ತೃಪ್ತಿ ತಂದಿದೆ ಎನ್ನುತ್ತಾರೆ.

**ಹೆಚ್ಚಿನ ಮಾಹಿತಿಗೆ** : ನಿರ್ದೇಶಕರು, ಗೇರು ಸಂಶೋಧನಾ ನಿರ್ದೇಶನಾಲಯದ (ಡಿ.ಸಿ.ಆರ್) ಮೊಟ್ಟೆತ್ತಡ್ಕ, ಪುತ್ತೂರು – 574201, ದಕ್ಷಿಣ ಕನ್ನಡ ಜಿಲ್ಲೆ.
ದೂರವಾಣಿ: 08251–230902, 236409
ಇವರನ್ನು ಸಂಪರ್ಕಿಸಬಹುದು.







# ಶಿಕ್ಷಣತಜ್ಞ ಎಚ್.ಎನ್‌ಗೆ ನೂರು ವರ್ಷ

ಜಗನ್ನಾಥ ಪ್ರಕಾಶ್



ಮಹಾತ್ಮ ಗಾಂಧಿ ಅವರ ತತ್ವಾದರ್ಶಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಜೀವನದುದ್ದಕ್ಕೂ ವೈಜ್ಞಾನಿಕತೆ ಮತ್ತು ವೈಚಾರಿಕತೆಯನ್ನು ಪ್ರತಿಪಾದಿಸಿದ ಶಿಕ್ಷಣ ತಜ್ಞ ಡಾ॥ ಎಚ್. ನರಸಿಂಹಯ್ಯ ಈಗ ನಮ್ಮೊಂದಿಗೆ ಇದ್ದಿದ್ದರೆ ಅವರಿಗೆ ನೂರುವರ್ಷಗಳಾಗುತ್ತಿದ್ದವು.

ಚಿಕ್ಕಬಳ್ಳಾಪುರ ಜಿಲ್ಲೆ ಹೊಸೂರಿನಲ್ಲಿ ಜೂನ್ 6, 1920ರಲ್ಲಿ ಹುಟ್ಟಿದ (ತಂದೆ ಹನುಮಂತಪ್ಪ, ತಾಯಿ ವೆಂಕಮ್ಮ) ನರಸಿಂಹಯ್ಯನವರು ಬಡತನದಲ್ಲಿ ಬಾಲ್ಯ ಕಳೆದರೂ ಓದಿನಲ್ಲಿ ಯಾವಾಗಲೂ ಆಸಕ್ತಿ. ಹುಟ್ಟಿದ ಹಳ್ಳಿಯಲ್ಲೇ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆ ಕಲಿತ ಎಚ್. ಎನ್ ಪ್ರೌಢಶಾಲೆ ಓದಿದ್ದು ಬೆಂಗಳೂರಿನ ನ್ಯಾಷನಲ್ ಹೈಸ್ಕೂಲ್‌ನಲ್ಲಿ.

ಆಗ ಸ್ವಾತಂತ್ರ್ಯ ಸಮರದ ಸಮಯ ನಾಡಿನ ಬಿಡುಗಡೆಗೆ ಬಾಪೂ ಆದಿಯಾಗಿ ಹಲವಾರು ಟೊಂಕಕಟ್ಟಿ ನಿಂತಿದ್ದರು. ಕಲಿಯುತ್ತಿದ್ದ ನರಸಿಂಹಯ್ಯ ರಾಷ್ಟ್ರನಾಯಕರ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಹೋರಾಟದ ಅಂಗಳಕ್ಕೆ ಇಳಿದು ಜೈಲು ಸೇರಿದರು. ಬೆಂಗಳೂರು–ಮೈಸೂರು ಕಾರಾಗೃಹದಲ್ಲಿದ್ದ ಎಚ್.ಎನ್‌ಗೆ ಬಿಡುಗಡೆ ಸಿಕ್ಕರೂ ಕಾಲೇಜಿಗೆ ಹೋಗದೆ ಸ್ವಾತಂತ್ರ್ಯ ಹೋರಾಟದಲ್ಲೇ ಉಳಿದರು.




downloaded from: www.kpscvaani.com



**ಶಿಕ್ಷಣ, ವಿಜ್ಞಾನ, ಸಂಸ್ಕೃತಿ ಹೀಗೆ ಹಲವು ರಂಗಗಳಲ್ಲಿ ಎಚ್. ಎನ್. ಅಲ್ಲಿಸಿದ ಸೇವೆಗಾಗಿ ಪದ್ಮಭೂಷಣ ಪುರಸ್ಕಾರ, ವಿಶ್ವವಿದ್ಯಾನಿಲಯಗಳ ಗೌರವ ಡಾಕ್ಟರೇಟ್ ಗೌರವಗಳು ಸಂದಿವೆ.**

ನಂದಿ ಬೆಟ್ಟಕ್ಕೆ ಬಂದಿದ್ದ ಬಾಪೂಜಿ ಅವರನ್ನು ಖುದ್ದಾಗಿ ಕಂಡ ನರಸಿಂಹಯ್ಯ ಗಾಂಧಿಜೀ ಅವರ ಹೆಜ್ಜೆಗಳನ್ನು ಅನುಸರಿಸಿದರು. ಖಾದಿ ಧರಿಸಲಾರಂಭಿಸಿದರು.

ಗಾಂಧೀಜಿ ಅವರ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳುತ್ತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯರಾದ ಎಚ್.ಎನ್. ನಾಲ್ಕಾರು ಬಾರಿ ಜೈಲು ಶಿಕ್ಷೆ ಅನುಭವಿಸಿದರು. ಸೆರೆವಾಸದಿಂದ ಹೊರಬಂದ ಮೇಲೆ ಬಿಎಸ್‌ಸಿ (ಆನರ್ಸ್) ಹಾಗೂ ಎಂ.ಎಸ್.ಸಿ. ಪದವಿ ಪೂರೈಸಿ ತಾವು ಓದಿದ ಬೆಂಗಳೂರು ಬಸವನಗುಡಿ ನ್ಯಾಷನಲ್ ಕಾಲೇಜ್‌ನಲ್ಲಿ ಭೌತಶಾಸ್ತ್ರ ಅಧ್ಯಾಪಕರಾಗಿ ನೇಮಕಗೊಂಡ ಎಚ್.ಎನ್ ನಂತರ ನ್ಯೂಕ್ಲಿಯರ್ ಫಿಸಿಕ್ಸ್‌ನಲ್ಲಿ ಅಮೇರಿಕಾದ ಓಹಿಯೋ ರಾಜ್ಯ ವಿಶ್ವವಿದ್ಯಾನಿಲಯದಲ್ಲಿ ಪಿ.ಹೆಚ್.ಡಿ. ಪಡೆದು ಅಲ್ಲೇ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ಅಮೇರಿಕಾದಿಂದ ಬಂದ ಎಚ್.ಎನ್. ಮತ್ತೆ ನ್ಯಾಷನಲ್ ಕಾಲೇಜಿನಲ್ಲಿ ನೌಕರಿ ಹಿಡಿದು ಅದೇ ಕಾಲೇಜಿನ ಹಾಸ್ಟಲ್‌ನಲ್ಲಿ ನೆಲೆ ನಿಂತವರು, ಕೊನೆವರೆಗೂ ಅಲ್ಲಿಯೇ ವಾಸಿಸುತ್ತಿದ್ದರು.



ಸ್ವಾತಂತ್ರ್ಯ ಹೋರಾಟದಲ್ಲಿ ಭಾವವಹಿಸಿದ್ದ ಎಚ್.ನರಸಿಂಹಯ್ಯ ನ್ಯಾಷನಲ್ ಕಾಲೇಜು ಪ್ರಿನ್ಸಿಪಾಲರಾದರು. ಬೆಂಗಳೂರು ವಿಶ್ವವಿದ್ಯಾನಿಲಯ ಉಪಕುಲಪತಿಗಳಾಗಿ ನೇಮಕವಾದರು. ನಂತರ ವಿಧಾನ ಪರಿಷತ್ ಸದಸ್ಯರಾಗಿ ಶಿಕ್ಷಣ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದರು.

ಶಿಕ್ಷಣ ತಜ್ಞರಾಗಿ ಶೈಕ್ಷಣಿಕ ಕ್ಷೇತ್ರಕ್ಕೆ ಮಹತ್ವದ ಕೊಡುಗೆಗಳನ್ನು ನೀಡಿದ ಎಚ್.ಎನ್. ವಿಧ್ಯಾರ್ಥಿಗಳಲ್ಲಿ ಹಾಗೂ ಜನತೆಯಲ್ಲಿ ವೈಜ್ಞಾನಿಕ ಮನೋಭಾವ ಬಿತ್ತಲು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರಲ್ಲದೆ ಅದಕ್ಕೆ ಪೂರಕವಾಗಿ ಚಿಂತನ ಗೋಷ್ಠಿಗಳನ್ನು ಕಾರ್ಯಾಗಾರಗಳನ್ನು ವ್ಯವಸ್ಥೆಮಾಡುವಲ್ಲಿ ಮುಖ್ಯ ಪಾತ್ರವಹಿಸುತ್ತಿದ್ದರು.

ವೈಚಾರಿಕತೆ ಪ್ರತಿಪಾದನೆಯಂತೆ ಕನ್ನಡ ಭಾಷೆಯನ್ನು ಶಿಕ್ಷಣದಲ್ಲಿ ಅಳವಡಿಸಿಕೊಳ್ಳಲು ಕ್ರಮಕೈಗೊಂಡರು. ವೈಜ್ಞಾನಿಕ ಮೌಲ್ಯಗಳನ್ನು ಪ್ರತಿಪಾದಿಸುವಂತೆಯೇ ಕಲೆ ಸಾಹಿತ್ಯ ಒಟ್ಟಾರೆ ಸಾಂಸ್ಕೃತಿಕ ಬೆಳವಣಿಗೆಗೂ ಎಚ್.ಎನ್. ಕೊಡುಗೆ ದೊಡ್ಡ ಮಟ್ಟದ್ದೇ.

ವಿಜ್ಞಾನ ವೇದಿಕೆ ಸ್ಥಾಪಿಸಿದ ಎಚ್.ಎನ್. ನಾಟಕ, ಸಂಗೀತ, ನೃತ್ಯ ಪ್ರಕಾರಗಳ ಬೆಳವಣಿಗೆಗೆ ನೆರವಾಗುವ ಲಲಿತ ಕಲಾ ಪರಿಷತ್ತನ್ನು ನ್ಯಾಷನಲ್ ಕಾಲೇಜಿನಲ್ಲಿ ಪ್ರಾರಂಭಿಸಿ ನಿಯಮಿತವಾಗಿ ಹತ್ತಾರು ಕಾರ್ಯಕ್ರಮಗಳನ್ನು ಆಯೋಜಿಸಿ ಕವಿ–ಕಲಾವಿದರಿಗೆ ಪ್ರೋತ್ಸಾಹ ಕೊಟ್ಟರು.

ಶಿಕ್ಷಣ, ವಿಜ್ಞಾನ, ಸಂಸ್ಕೃತಿ ಹೀಗೆ ಹಲವು ರಂಗಗಳಲ್ಲಿ ಎಚ್. ಎನ್. ಸಲ್ಲಿಸಿದ ಸೇವೆಗಾಗಿ ಪದ್ಮಭೂಷಣ ಪುರಸ್ಕಾರ, ವಿಶ್ವವಿದ್ಯಾನಿಲಯಗಳ ಗೌರವ ಡಾಕ್ಟರೇಟ್ ಗೌರವಗಳು ಸಂದಿದ್ದವು.

ಹಳ್ಳಿಯಿಂದ ಎತ್ತರೆತ್ತರಕ್ಕೆ ಬೇಳೆದರೂ ಹೊಸೂರು ನರಸಿಂಹಯ್ಯ ಅವರು ಬಾಪೂ ಆದರ್ಶಗಳನ್ನು ಮತ್ತು ವಿಜ್ಞಾನ ವಿಚಾರಧಾರೆ ಪಸರಿಸುವುದನ್ನು ಎಂದೂ ನಿಲ್ಲಿಸಲಿಲ್ಲ. ■






ಡಾ. ಅನಿಲ್ ಕುಮಾರ್ ಪಿ. ಜಿ.

**ಬೆಂ**ಗಳೂರು ನಗರದಲ್ಲಿ ನಾಲ್ಕು ಚಕ್ರದ ವಾಹನಗಳಿಗೆ ಹೋಲಿಸಿದರೆ ಹೆಚ್ಚು ದ್ವಿಚಕ್ರ ವಾಹನಗಳಿದ್ದು, ಇವುಗಳ ಸಂಖ್ಯೆ ಸುಮಾರು 38 ಲಕ್ಷದಷ್ಟಿದೆ. ನಗರದಲ್ಲಿ ದ್ವಿಚಕ್ರ ವಾಹನ ಸವಾರರಿಗೆ ಹೆಲ್ಮೆಟ್ ಧರಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಆದರೆ ಈ ಕಾನೂನು ಅನುಸರಣೆ ಮಾಡುವವರ ಸಂಖ್ಯೆ ಬಹಳ ಕಡಿಮೆ. ಸಂಚಾರ ಪೊಲೀಸರನ್ನು ನೋಡಿದಾಗ ಸವಾರರು ಶಿರಸ್ತ್ರಾಣ ಧರಿಸುತ್ತಾರೆ. ಇಲ್ಲದಿದ್ದರೆ ಹಿಂಬದಿ ಸವಾರ ಸಾಮಾನ್ಯವಾಗಿ ತನ್ನ ತೊಡೆಯ ಮೇಲೆ ಅಥವಾ ಸವಾರ ಸ್ವತ: ತನ್ನ ಎಡ ಅಥವಾ ಬಲ ಕೈಗಳ ಮಣಿಕಟ್ಟಿಗೆ ನೇತುಹಾಕಿಕೊಂಡಿರುವುದನ್ನು ಗಮನಿಸಬಹುದು. ಕೆಲವು ಸವಾರರು ಪಟ್ಟಿಗಳನ್ನು ಹಾಕದೆ ಹೆಲ್ಮೆಟ್ ಧರಿಸುತ್ತಿದ್ದು ಇದು ಪೊಲೀಸರ ಸಲುವಾಗಿ ಧರಿಸಿದಂತೆ ಭಾಸವಾಗುತ್ತದೆ. ನಮ್ಮ ವಯಸ್ಸು, ಸವಾರಿ ಕೌಶಲ್ಯದ ಮಟ್ಟ ಅಥವಾ ಅನುಭವ ಏನೇ ಇದ್ದರೂ ನಾವು ದ್ವಿಚಕ್ರ ವಾಹನವನ್ನು ಸವಾರಿ ಮಾಡುವಾಗ ರಕ್ಷಣಾತ್ಮಕವಾಗಿ ಶಿರಸ್ತ್ರಾಣವನ್ನು ಧರಿಸಲೇಬೇಕು. ಏಕೆಂದರೆ ತಲೆಯು ತುಂಬಾ ಪ್ರಮುಖವಾದ ಅಂಗವಾಗಿದ್ದು, ಅದಕ್ಕೆ ಪೆಟ್ಟು ಬಿದ್ದಲ್ಲಿ, ಪ್ರಾಣಕ್ಕೆ ಕುತ್ತು ಬರುವ ಸಾಧ್ಯತೆಗಳು ಹೆಚ್ಚು.

- ರಸ್ತೆ ಅಪಘಾತಗಳಲ್ಲಿ ಹೆಚ್ಚಿನ ಗಂಡಾಂತರಕ್ಕೆ ಈಡಾಗುವವರು ದ್ವಿಚಕ್ರ ವಾಹನ ಸವಾರರು.ಲಭ್ಯವಿರುವ ಮಾಹಿತಿ ಪ್ರಕಾರ ಹೆಲ್ಮೆಟ್ ಧರಿಸಿದ್ದಲ್ಲಿ 69% ರಷ್ಟು ತಲೆಗೆ ಆಗುವ ಅಪಾಯಕಾರಿ ಗಾಯಗಳ ತೀವ್ರತೆಯನ್ನು ಮತ್ತು ಸುಮಾರು 42% ರಷ್ಟು ಜೀವಹಾನಿಯನ್ನು ಕಡಿಮೆ ಮಾಡಬಹುದಾಗಿದೆ.
- ಕಾರುಗಳಲ್ಲಿ ಪ್ರಯಾಣಿಸುವವರಿಗಿಂತ ಮೋಟಾರ್ ಸೈಕಲ್‌ನಲ್ಲಿ ಸವಾರಿ ಮಾಡುವವರು ಅಪಘಾತ ಕ್ಕೀಡಾಗುವ ಸಾಧ್ಯತೆಗಳು ಹೆಚ್ಚು.

**ಹೆಲ್ಮೆಟ್ ಧರಿಸದೆ ವಾಹನ ಚಲಾಯಿಸಿದವರ ವಿರುದ್ಧ ಬೆಂಗಳೂರು ಸಂಚಾರ ಪೊಲೀಸರು 2017 ರಲ್ಲಿ 2019924 ಪ್ರಕರಣಗಳನ್ನು, 2018 ರಲ್ಲಿ 1648240 ಹಾಗೂ 2019 ರ ಏಪ್ರಿಲ್ 30 ರವರೆಗೆ 704719 ಪ್ರಕರಣಗಳನ್ನು ದಾಖಲಿಸಿಲಾಗಿದೆ**



downloaded from: www.kpscvaani.com



- ನೀವು ಪ್ರತಿ ಗಂಟೆಗೆ 55 ಕಿ.ಮೀ ವೇಗವಾಗಿ ಮೋಟಾರ್ ಸೈಕಲ್ ಅನ್ನು ಓಡಿಸುತ್ತಿದ್ದರೆ ಪ್ರತಿ ಸೆಕೆಂಡ್‌ಗೆ 49 ಅಡಿ ಕ್ರಮಿಸುತ್ತಿದ್ದೀರಿ ಎಂದರ್ಥ. ಈ ವೇಗವು ಕಟ್ಟಡವೊಂದರ ನಾಲ್ಕನೇ ಮಹಡಿಯಿಂದ ನೆಲಕ್ಕೆ ಜಿಗಿದಾಗ ಉಂಟಾಗುವ ವೇಗಕ್ಕೆ ಸಮನಾಗಿರುತ್ತದೆ. ಸ್ವಲ್ಪ ಕಾಳಜಿ ನಿಮ್ಮ ಜೀವವನ್ನು ಉಳಿಸುತ್ತದೆ.
- ಅಪಘಾತದಲ್ಲಿ ಮೆದುಳಿಗಾಗುವ ಗಾಯಗಳ ಚಿಕಿತ್ಸೆ ಅತ್ಯಂತ ದುಬಾರಿಯಾಗಿದ್ದು ಆಜೀವ ಅಂಗವೈಕಲ್ಯಕ್ಕೆ ಕಾರಣವಾಗಬಹುದಾದಂತ ಪ್ರಸಂಗಗಳೇ ಹೆಚ್ಚು. ಹೆಲ್ಮೆಟ್ ಧರಿಸುವುದರಿಂದ ಮೆದುಳಿಗಾಗುವ ಗಾಯಗಳ ತೀವ್ರತೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ತಡೆಗಟ್ಟಬಹುದು.
- ಸಮೀಕ್ಷೆಯ ಪ್ರಕಾರ ಅಪಘಾತ ಸಂದರ್ಭದಲ್ಲಿ ಹೆಲ್ಮೆಟ್ ಧರಿಸದಿರುವವರು ಹೆಲ್ಮೆಟ್ ಧರಿಸಿದವರಿಗಿಂತ 3 ಪಟ್ಟು ಆಘಾತಕಾರಿ ಮಿದುಳಿನ ಗಾಯಗಳಿಂದ ಬಳಲುವ ಸಾಧ್ಯತೆ ಇದ್ದು, ಹೆಲ್ಮೆಟ್ ಧರಿಸುವಿಕೆಯು ಅಪಘಾತ ಪ್ರಸಂಗಗಳಲ್ಲಿ ಸಾವು ನೋವುಗಳ ಸಾಧ್ಯತೆಯನ್ನು ಕಡಿಮೆಗೊಳಿಸುತ್ತದೆ.
- ಹೆಲ್ಮೆಟ್‌ಅನ್ನು ಧರಿಸಿದಾಗ ಆಕಸ್ಮಿಕವಾಗಿ ಯಾವುದಾದರೂ ಗಟ್ಟಿಯಾಗಿರುವ ವಸ್ತುವಿಗೆ ಬಡಿದಾಗ ಹೆಲ್ಮೆಟ್‌ನ ಒಳಗಿರುವ ಲೈನಿಂಗ್ ಹೊರಗಿನ ಬಲ ಪ್ರಯೋಗದಿಂದ ಉಂಟಾಗಬಹುದಾದ ಒತ್ತಡವನ್ನು ಹೀರಿಕೊಂಡು ತಲೆಬುರುಡೆಗೆ ಆಘಾತವಾಗದಂತೆ ಕಾಪಾಡುತ್ತದೆ.
- ಹೊರಗಿನ ಬಲಪ್ರಯೋಗವು ಹೆಲ್ಮೆಟ್‌ನ ಒಳ ಪದರಗಳಲ್ಲಿ ಹರಡುವುದರಿಂದ ಬುರುಡೆಯ ಮೂಳೆಗಳು ಮೆದುಳನ್ನು ಹೊಕ್ಕು ಗಾಯವುಂಟಾಗುವ ಸಾಧ್ಯತೆಗಳಿಂದ ಪಾರುಮಾಡಿ ರಕ್ಷಿಸುತ್ತದೆ. ಆದ್ದರಿಂದ ಹೆಲ್ಮೆಟ್ ಜೀವ ರಕ್ಷಕವೆಂದರೆ ತಪ್ಪಾಗಲಾರದು.

**ಕಾನೂನು ಏನು ಹೇಳುತ್ತದೆ:**

ಕಲಂ 129 ಭಾರತೀಯ ಮೋಟಾರು ವಾಹನ ಕಾಯ್ದೆ 1988 ರ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯೂ ಸಾರ್ವಜನಿಕ ರಸ್ತೆಯಲ್ಲಿ ಮೋಟಾರ್ ಸೈಕಲ್ ಚಾಲನೆ ಮಾಡುವಾಗ ಕಡ್ಡಾಯವಾಗಿ ಶಿರಸ್ತ್ರಾಣ ಧರಿಸತಕ್ಕದ್ದು. (ಶಿರಸ್ತ್ರಾಣವು ಭಾರತೀಯ ಮಾನಕ ಸಂಸ್ಥೆ ನಿರ್ಧರಿಸಿರುವ ಗುಣಮಟ್ಟದ್ದಾಗಿರಬೇಕು)

**ಹೆಲ್ಮೆಟ್‌ಗಳ ಸಂರಕ್ಷಣಾ ಗುಣಮಟ್ಟ:** ಭಾರತೀಯ ಕಾನೂನಿನ ಪ್ರಕಾರ ಹೆಲ್ಮೆಟ್‌ನ ಸಂರಕ್ಷಣಾ ಗುಣಮಟ್ಟದ ಸಾಮರ್ಥ್ಯಗಳು ಭಾರತ ಸರ್ಕಾರದಿಂದ ಅನುಮೋದಿಸಲ್ಪಟ್ಟಿರುವ ಐ.ಎಸ್.ಐ ಮಾರ್ಕ್ ಹೊಂದಿರಬೇಕೆಂದು ಅಪೇಕ್ಷಿಸುತ್ತದೆ. ಹೆಲ್ಮೆಟ್ ಖರೀದಿಸಲು ನೀವು ಸಿದ್ಧರಿದ್ದು ಯಾವ ಹೆಲ್ಮೆಟ್ ಅನ್ನು ಖರೀದಿಸಬೇಕೆಂದು ನಿಮಗೆ ಗೊತ್ತಿರುವುದಿಲ್ಲ. ಹೆಲ್ಮೆಟ್ ಖರೀದಿ ಮಾಡುವ ಮುನ್ನ ಈ ಕೆಳಗಿನ ಅಂಶಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು ಸೂಕ್ತ.

- ಸುರಕ್ಷತಾ ಮಾನದಂಡಗಳನ್ನು ಪರಿಶೀಲಿಸುವುದು.
- ಸಮರ್ಪಕವಾಗಿ ಜೋಡಣೆಯಾಗಿರುವ ಬಗ್ಗೆ ಹಾಗೂ ಹೆಲ್ಮೆಟ್ ಧರಿಸಿದಲ್ಲಿ ಆರಾಮದಾಯವಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
- ಅಧಿಕೃತ ಡೀಲರ್‌ರವರುಗಳಿಂದ ಮಾತ್ರ ಹೆಲ್ಮೆಟ್ ಖರೀದಿಸಿ.
- ಹೆಲ್ಮೆಟ್ ಖರೀದಿ ಬಳಿಕ ಖರೀದಿಸಿದ ಬಿಲ್ ಪಡೆದು ಅದನ್ನು ಜೋಪಾನವಾಗಿಟ್ಟುಕೊಳ್ಳಿ.
- ಹೆಲ್ಮೆಟ್ ಜೊತೆಗೆ ಸೂಚನೆ ಕಾರ್ಡ್ ಕೇಳಿ ಅದರಲ್ಲಿರುವ ಸೂಚನೆಗಳನ್ನು ಎಚ್ಚರಿಕೆಯಿಂದ ಓದಿ.
- ಹೆಲ್ಮೆಟ್ ಲಾಕ್ ಅನ್ನು ಖರೀದಿಸಿ. ವಾಹನವನ್ನು ಪಾರ್ಕ್ ಮಾಡಿ ನಿಮ್ಮ ಜೊತೆಗೆ ಹೆಲ್ಮೆಟ್ ಅನ್ನು ತೆಗೆದುಕೊಂಡು ಹೋಗಲು ಇಷ್ಟವಿಲ್ಲದಿದ್ದರೆ ಅದನ್ನು ಮೋಟಾರ್ ಸೈಕಲ್‌ನಲ್ಲಿ ಲಾಕ್ ಮಾಡಬಹುದು.
- ಹೆಲ್ಮೆಟ್ ದೃಷ್ಟಿಗೆ ತಡೆಯೊಡ್ಡುವಂತಿರಬಾರದು.
- ಹೆಲ್ಮೆಟ್ ಶ್ರವಣಶಕ್ತಿಗೆ ಕುಂದಾಗದಂತಿರಬಾರದು.

ಹೆಲ್ಮೆಟ್‌ಗಳನ್ನು ಧರಿಸುವುದರಿಂದ ತಲೆಗೆ ಉಂಟಾಗಬಹುದಾದ ಗಾಯಗಳನ್ನು ತಪ್ಪಿಸಬಹುದಾಗಿದ್ದು, ಅದರಿಂದ ಬೆನ್ನುಹುರಿಗೆ ಆಗಬಹುದಾದ ಅನಾಹುತಗಳು ಸಹ ಕಡಿಮೆಯಾಗುತ್ತವೆ. ಒಂದು ಅಧ್ಯಯನದ ಪ್ರಕಾರ ಹೆಲ್ಮೆಟ್ ಧರಿಸಿದ ವ್ಯಕ್ತಿಗೆ ಅಪಘಾತವಾದಲ್ಲಿ ಕುತ್ತಿಗೆಗೆ ಸಂಬಂಧಿಸಿದ ಮೂಳೆಯ ಮುರಿತದ ಸಾಧ್ಯತೆಗಳು ಹೆಲ್ಮೆಟ್ ಧರಿಸದ ವ್ಯಕ್ತಿಗಿಂತ ಬಹಳ ಕಡಿಮೆ ಪ್ರಮಾಣದಲ್ಲಿರುತ್ತವೆ.

ಪೂರ್ತಿ ಮುಖವನ್ನು ಮುಚ್ಚುವಂತೆ ಹೆಲ್ಮೆಟ್‌ಗಳನ್ನು ಧರಿಸಿದಾಗ ಇತರೆ ವಾಹನಗಳನ್ನು ಗಮನಿಸಲಾಗುವುದಿಲ್ಲ ಮತ್ತು ಹಾರ್ನ್ ಕೇಳಿಸುವುದಿಲ್ಲ ಎನ್ನುವ ಅಂಶವನ್ನು ಒಪ್ಪಲಾಗದು. ಸಣ್ಣ ಪ್ರಮಾಣದ ನಿರ್ಬಂಧಗಳಿದ್ದರೂ ಹೆಲ್ಮೆಟ್ ಧರಿಸುವುದರಿಂದ ಆಗುವ ಅನುಕೂಲಗಳೇ ಹೆಚ್ಚು.

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd.,, Dr Rajkumar Road, Rajajinagar, Bangalore - 560 010

downloaded from: www.kpscvaani.com